ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ



₹ 14

ನವೆಂಬರ್ 2018

PACKAGE TOURS

Hotel Room Accom. & South Indian Veg. Food





Panchadwarka & Jyothirlinga : 22/24 DAYS
Jan 25

Pushkar, Ajmer, Nathadwar, Kankroli, Eklingji, Udaipur, Mt. Abu, Mathru Gaya, Dwarka, Bet Dwarka, Nagesham, Mul Dwarka, Porbandar, Veraval, Somnath, Dakor, Ahmedabad, Ujjain, Omkareshwar, Parli, Aurangabad, Ellora, Grishneshwar, Nasik, Triyambak, Shirdi, Shanisinganapur, Bhimashankar

Kashi Chitrakoota : 15 Days
Feb 04

Allahabad, Gaya, Bodhgaya, Kashi, Saranath, Ayodhya, Naimisharanya, Chitrakoot

Mini Andhra : 05 Days
Dec 04

Manthralaya, Srishailam, Mahanandi, Ahobilam (Nava Narasimha)

Andhra Special : 10 Days
Dec 14

Bhadrachalam, Annavaram, Simhachalam, Borra Caves, Draksharam, Vasavi Penugonda, Dwaraka Tirumala, Mangalagiri, Vijayawada

South India : 10 Days
Jan 24


Guruvayur, Kaladi, Trivandram, Suchindram, Kanyakumari, Rameshwaram, Madurai, Trichy, Srirangam, Tanjore, Kumbakonam, Chidambaram, Thiruvannamalai, Navagraha Temples


North East India : 10 Days
Mar 19

Guwahati, Kamakhya, Shillong, Cherrapunji, Dawki, Mawlinnong, Sela Pass, Tawang, PT Tso Lake, Bomdilla, Dirung, Kaziranga

Nepal Special : 08 Days
Feb 19

Kathmandu, Manokamana, Pokhara, Jomsom, Mukthinath, Bakthapur, Patan





Shri Hansaa Travels

Recognised by Department of Tourism, Govt. of Karnataka

: 640, 40th Cross, 8th Block, Jayanagar, Bangalore - 70

: hansaatravels@gmail.com : hansaatravels.com

: 080-26643276 / 26543891 / 9341215612 / 9341415612

ವಿವೇಕಪ್ರಭ


ನವೆಂಬರ್-2018 ಸಂಪುಟ 19 ಸಂಚಿಕೆ 11

ವಿಶೇಷ ಲೇಖನ

ಧಾರಾವಾಹಿ














ವ್ಯವಸ್ಥಾಪಕ ಸಂಪಾದಕರು: *ಸ್ವಾಮಿ ಆತ್ಮಜ್ಞಾನಂದ* **ಸಂಪಾದಕರು:** *ಸ್ವಾಮಿ ಜ್ಞಾನಯೋಗಾನಂದ*

ನೆರವು: *ಆರ್. ಎಸ್. ಪೂರ್ಣಾನಂದ, ಡಾ. ಕೆ. ಎಲ್. ಪ್ರಸನ್ನಾಕ್ಷೀ, ಡಾ. ಎಚ್. ಪಾಂಡುರಂಗ ವಿಠಲ*

ಅಕ್ಷರ ಜೋಡಣೆ: *ಶ್ರೀರಾಮಕೃಷ್ಣ ಆಶ್ರಮ, ಮೈಸೂರು* **ಮುದ್ರಣ:** *ಮಯೂರ್ ಗ್ರಾಫಿಕ್ಸ್, ಬೆಂಗಳೂರು*

ಮುಖಪುಟ

ದೀಪಾವಳಿಯ ಸೊಬಗು

ಚಂದಾ ವಿವರ

ಬಿಡಿ ಪ್ರತಿ : ₹14 **ವಾರ್ಷಿಕ :** ₹ 140 **ಮೂರು ವರ್ಷ :** ₹ 375
ಆಜೀವ (25 ವರ್ಷ) : ₹3,000 **ಪೋಷಕರು :** ₹5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್) **ವಾರ್ಷಿಕ :** $ 20; **ಮೂರು ವರ್ಷ :** $ 60
ಆಜೀವ (25ವರ್ಷ) : $ 300 **ಪೋಷಕರು :** $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

'ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.'

– ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org **Website:** www.vivekaprabha.net **ಫೋನ್ :** 9481533505

‘ಆನಂದಲಹರಿ’ ಯಿಂದ



ವಿಧಾತ್ರೀ ಧರ್ಮಾಣಾಂ ತ್ವಮಸಿ ಸಕಲಾಮ್ನಾಯಜನನೀ ।
ತ್ವಮರ್ಥಾನಾಂ ಮೂಲಂ ಧನದನಮನೀಯಾಂಘ್ರಿಕಮಲೇ ॥
ತ್ವಮಾದಿಃ ಕಾಮಾನಂ ಜನನಿ ಕೃತಕಂದರ್ಪವಿಜಯೇ ।
ಸತಾಂ ಮುಕ್ತೇರ್ಬೀಜಂ ತ್ವಮಸಿ ಪರಮಬ್ರಹ್ಮಮಹಿಷೀ ॥೧॥

ದೇವಿ, ಸರ್ವಕಾಲದಲ್ಲಿಯೂ ಧರ್ಮಕ್ಕೆ ನೀನೇ ತಾಯಿಯು. ನಿನ್ನನ್ನು ಅರ್ಥೈಸುವುದು ಎಲ್ಲ ಕಾಮನೆಗಳಿಗೂ ಮೂಲವು. ಇಷ್ಟಾರ್ಥಗಳ ತಾಯಿ, ಮನ್ಮಥನ ವಿಜಯದಲ್ಲಿ ನೀನೇ ಆದಿ. ಪರಬ್ರಹ್ಮ ಮಹಿಷಿ ನೀನೇ; ನೀನು ಮುಕ್ತಿಗೆ ಬೀಜವಾಗಿರುವೆ.

ಪ್ರಭೂತಾ ಭಕ್ತಿಸ್ತೇ ಯದಪಿ ನ ಮಮಾಲೋಲ ಮನಸಃ ।
ತ್ವಯಾತು ಶ್ರೀಮತ್ಯಾ ಸದಯಮವಲೋಕ್ಯೋಽಹಮಧುನಾ ॥
ಪಯೋದಃ ಪಾನೀಯಂ ದಿಶತಿ ಮಧುರಂ ಚಾತಕಮುಖೇ ।
ಭೃಶಂ ಶಂಕೇ ಕೈರ್ವಾ ವಿಧಿಭಿರನುನೀತಾ ಮಮ ಮತಿಃ ॥೨॥

ನನ್ನ ಚಾಂಚಲ್ಯ ಚಿತ್ತವು ನಿನ್ನ ಭಕ್ತಿಯಲ್ಲಿ ನೆಲೆಸದಿದ್ದರೂ ಶ್ರೀಮತಿಯಾದ ನೀನು ನನ್ನನ್ನು ಕರುಣೆಯಿಂದ ನೋಡಿ ಕಾಪಾಡು. ಚಾತಕ ಪಕ್ಷಿಯು ಕ್ಷೀರ ಮತ್ತು ಜಲವನ್ನು ಬೇರ್ಪಡಿಸುವಂತೆ ನೀನು ನನ್ನ ಅನುಮಾನವನ್ನು ಹೋಗಲಾಡಿಸಿ, ಸದ್ಬುದ್ಧಿಯನ್ನು ನೀಡಿ ಕಾಪಾಡು.

ಕೃಪಾಪಾಂಗಾ ಲೋಕಂ ವಿತರ ತರಸಾ ಸಾಧುಚರಿತೇ ।
ನ ತೇ ಯುಕ್ತೋಪೇಕ್ಷಾ ಮಯಿ ಶರಣ ದೀಕ್ಷಾಮುಪಗತೇ ॥
ನ ಚೇದಿಷ್ಟಂ ದದ್ಯಾದನುಪದಮಹೋ ಕಲ್ಪಲತಿಕಾ ।
ವಿಶೇಷಃ ಸಾಮಾನ್ಯೈಃ ಕಥಮಿತರವಲ್ಲೀ ಪರಿಕರೈಃ ॥೩॥

ಸಾಧು ಚರಿತ್ರೆಗಳ ಕೃಪೆಯಿಂದ ಕೂಡಿರುವ ಈ ಲೋಕದಲ್ಲಿ ನನಗೆ ಶರಣ ದೀಕ್ಷೆಯನ್ನು ಅನುಗ್ರಹಿಸಿ, ನಾನು ಸರ್ವೇಸಾಮಾನ್ಯನಾದರೂ ನನ್ನ ಇಷ್ಟಾರ್ಥಗಳನ್ನು ನೀನು ಪೂರೈಸು.

ಅಯಃ ಸ್ಪರ್ಶೇ ಲಗ್ನಂ ಸಪದಿ ಲಭತೇ ಹೇಮಪದವೀಂ ।
ಯಥಾ ರಥ್ಯಾಪಾಥಃ ಶುಚಿ ಭವತಿ ಗಂಗೌಘಮಿಲಿತಮ್ ॥
ತಥಾ ತತ್ತತ್ಪಾಪೈರತಿ ಮಲಿನಮಂತರ್ಮಮ ಯದಿ ।
ತ್ವಯಿ ಪ್ರೇಮ್ಣಾಸಕ್ತಂ ಕಥಮಿವ ನ ಜಾಯೇತ ವಿಮಲಮ್ ॥೪॥

ಗಂಗೆಯಲ್ಲಿ ಮಿಂದರೆ ಹೇಗೆ ಪಾಪಿಗಳು ಶುದ್ಧರಾಗುವರೋ, ಅಂತೆಯೇ ನಿನ್ನ ಸ್ಪರ್ಶವಾದರೆ ಸುವರ್ಣ ಪದವಿಯನ್ನು ಹೊಂದುತ್ತಾರೆ. ಅಂತೆಯೇ ತಾಪದಿಂದ ಹೃದಯದಲ್ಲಿ ಅತಿಮಲಿನನಾದ ನಾನು ನಿನ್ನಲ್ಲಿ ಶುದ್ಧ ಪ್ರೇಮವಿಡದಿದ್ದಲ್ಲಿ ಹೇಗೆ ಶುದ್ಧನಾಗುತ್ತೇನೆ?

— ಶ್ರೀಶಂಕರಾಚಾರ್ಯ

ಕನ್ನಡ ಸೂಕ್ತಿಗಳು

ಅತ್ಯಂತ ಸುಳ್ಳು ಹೇಳುವವನೇ ಹೊಲೆಯ, ಸುಳ್ಳು ಹೇಳದೆ ಇರುವ ಹೊಲೆಯನು ಅತಿ ಶ್ರೇಷ್ಠನಾದ ಸಂನ್ಯಾಸಿ. ಸುಳ್ಳು ಹೇಳುತ್ತಾ ಮಾಡುವ ನೂರು ಯಜ್ಞಗಳು ಪಂಚ ಮಹಾಪಾತಕ.

— ರಾಘವಾಂಕ

ನಮ್ಮನ್ನೆಲ್ಲ ಹೆತ್ತು, ಸಾಕಿ, ಸಲಹಿದ ತಾಯಿ ಹೆಣ್ಣಲ್ಲವೆ? ಹೆಣ್ಣು ಹೆಣ್ಣು ಎಂದು ಏಕೆ ದೂಷಿಸುವರು ಜನರು? ಅವರು ಕಣ್ಣು ಕಾಣದ ಕುರುಡರೇ ಸರಿ. — ಸಂಚಿಯ ಹೊನ್ನಮ್ಮ

ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆ ಮನೆಯವರ ದುಃಖಕ್ಕೆ ಅಳುವರ ಮೆಚ್ಚ ಕೂಡಲ ಸಂಗಮದೇವ.

— ಬಸವಣ್ಣ


ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆತೆರೆಗಳಿಗೆ ಅಂಜಿದೊಡೆಂತಯ್ಯ ?
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

— ಅಕ್ಕ ಮಹಾದೇವಿ

ತನುವ ನೀರೊಳಗದ್ದಿ ಫಲವೇನು, ತನ್ನ
ಮನದಲ್ಲಿ ದೃಢಭಕ್ತಿಯಿಲ್ಲದ ಮನುಜನು?

— ಪುರಂದರದಾಸರು





Ramakrishna Math (A Branch of Belur Math)

South Nada, Opp. Ashoka Petrol Pump, Haripad - 690514 Dist. Alleppey, Kerala.
Phone: 0479-2411700,0974 5325 834. Email: srkmathharipad@gmail.com,
viveka.vira@gmail.com Website: www.rkmathharipad.org

ಶ್ರೀರಾಮಕೃಷ್ಣರ ಮಠದ ಪುನರ್ನಿರ್ಮಾಣಕ್ಕಾಗಿ ಒಂದು ಮನವಿ



ಎರಡು ಕೊಠಡಿಗಳಿರುವ ಹಳೇ ಗೋಡೌನ್ (ಸಾಧುಗಳು ಈಗ ಇಲ್ಲಿಯೇ ತಂಗಿದ್ದಾರೆ)



ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳು



೧೯೧೨ರ ಶಂಕುಸ್ಥಾಪನೆ ಶಿಲಾಫಲಕ

ಪ್ರೀತಿಯ ಭಕ್ತರೆ, ಹಿತೈಷಿಗಳೆ ಮತ್ತು ಸ್ನೇಹಿತರೆ,

ಕೇರಳದ ಹರಿಪಾಡ್‌ನಲ್ಲಿರುವ ರಾಮಕೃಷ್ಣ ಮಠವನ್ನು ೧೯೧೨ರಲ್ಲಿ ಸ್ಥಾಪಿಸಲಾಯಿತು. ಶ್ರೀರಾಮಕೃಷ್ಣರ ನೇರಶಿಷ್ಯರೂ, ಅವರ ಮಾನಸಪುತ್ರರೂ ಆಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದಜಿಯವರು ನೆಲೆಸಿದ್ದ ಪವಿತ್ರಸ್ಥಾನವಿದು . ಹಲವು ವರ್ಷಗಳ ಕಾಲ ಬಳಸದೆ ಉಳಿದದ್ದರಿಂದ ಆಶ್ರಮದ ಕಟ್ಟಡಗಳು ಈಗ ಜೀರ್ಣಾವಸ್ಥೆಯಲ್ಲಿವೆ. ಮತ್ತೆ ಇದರ ಪುನರ್‌ನಿರ್ಮಾಣ ಕಾರ್ಯವನ್ನು ನಾವು ಕೈಗೊಂಡಿದ್ದು, ಮೊದಲ ಹಂತದಲ್ಲಿ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರ, ಸಮಾಜ ಕಲ್ಯಾಣ ಚಟುವಟಿಕೆಗಳಿಗಾಗಿ ಕೊಠಡಿಗಳು, ಸಂನ್ಯಾಸಿಗಳು ಮತ್ತು ಅತಿಥಿಗಳಿಗೆ ನಿವಾಸದ ಕೊಠಡಿಗಳು, ಕಛೇರಿ ಕಟ್ಟಡ, ಗ್ರಂಥಾಲಯ ಮತ್ತು ಉಚಿತ ವಾಚನಾಲಯ – ಇವುಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದೇವೆ. ಈ ಎಲ್ಲ ಕಟ್ಟಡಗಳನ್ನೂ ಸಂಪೂರ್ಣವಾಗಿ ನವೀಕರಿಸಬೇಕಾಗಿದೆ.

ಈ ಯೋಜನೆಗೆ ಸುಮಾರು 9 ಕೋಟಿ ರೂಪಾಯಿ ವೆಚ್ಚ ತಗಲಬಹುದಾಗಿದೆ.

ಉದಾರ ಹೃದಯಿಗಳಾದ ಎಲ್ಲ ದಾನಿಗಳು, ಅದರಲ್ಲೂ ಶ್ರೀರಾಮಕೃಷ್ಣರ ಭಕ್ತರು ಮುಂದೆ ಬಂದು ಶ್ರೀರಾಮಕೃಷ್ಣರ ಈ ಧಾಮವನ್ನು ನಿರ್ಮಿಸಲು ಮತ್ತು ಆ ಮೂಲಕ ಮಾನವ ಜನಾಂಗದ ಸೇವೆಯನ್ನು ಸಲ್ಲಿಸಲು ದೇಣಿಗೆಗಳನ್ನು ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಈ ಸೇವಾಯಜ್ಞದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಆಶೀರ್ವಾದಗಳಿಗೆ ಖಂಡಿತವಾಗಿಯೂ ಪಾತ್ರರಾಗುತ್ತಾರೆ ಎಂಬುದು ನಮ್ಮ ನಂಬಿಕೆ.

ಇತಿ ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ವೀರಭದ್ರಾನಂದ, ಅಧ್ಯಕ್ಷರು

ದೇಣಿಗೆಗಳನ್ನು ಕಳುಹಿಸುವುದಕ್ಕೆ ಅಗತ್ಯವಾದ ವಿವರಗಳು

1) ದೇಣಿಗೆ – ಭಾರತದಲ್ಲಿ : 1) Go to-www.onlinesbi.com > Then Select- SBI Collect> State- Kerala >Institutions -Charitable Institutions >Ramakrishna Math Haripad.

2) ಚೆಕ್, ಡಿ.ಡಿ.ಗಳನ್ನು "Ramakrishna Math, Haripad" ಈ ಹೆಸರಿಗೆ ಕಳುಹಿಸಿ ಕೊಡಬೇಕು.

3) NEFT Transfer : AC Number : 30642551603, : State Bank of India. Haripad.
RTGS/NEFT/IFSC code : SBIN0010596.

(ಒಂದು ವೇಳೆ NEFT ವರ್ಗಾವಣೆ ಮಾಡುವುದಾಗಿದ್ದರೆ, ದಯವಿಟ್ಟು ಇ-ಮೇಲ್ ಮೂಲಕ ನಿಮ್ಮ ಹೆಸರು, ಕಳುಹಿಸಿದ ಮೊತ್ತ , ಅಂಚೆ ವಿಳಾಸ, PAN ಸಂಖ್ಯೆ , ಫೋನ್ ಸಂಖ್ಯೆ ಹಾಗೂ ವರ್ಗಾವಣೆಯ ವಿವರಗಳನ್ನು ಈ ವಿಳಾಸಕ್ಕೆ ತಿಳಿಸಬೇಕು: srkmathharipad@gamil.com)

★ Donations from Foreign countries: Kindly draw a Cheque/ Draft in favour of "Ramakrishna Math" and send it to the General Secretary, Ramakrishna Math, Belur Math, Dt. Howrah (West Bengal), Pin -711 202, India. In the covering letter mention that it is a donation for Haripad Centre building fund. And inform all the details of the donation to e-mail: srkmathharipad@ gmail.com, viveka.vira@gmail.com

ರಾಮಕೃಷ್ಣ ಮಠಕ್ಕೆ ನೀಡುವ ದೇಣಿಗೆಗಳಿಗೆ ಸೆಕ್ಷನ್ 80G ಪ್ರಕಾರ, ಆದಾಯ ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.

॥ ಶ್ರೀ ರಾಮಕೃಷ್ಣ ಪ್ರಸನ್ನ ॥

ಶ್ರೀ ರಾಮಕೃಷ್ಣ -ವಿವೇಕಾನಂದ ಭಾವಪ್ರಚಾರ ಪರಿಷತ್, ಕರ್ನಾಟಕ

ಐದನೆಯ ವಾರ್ಷಿಕ ಸಮ್ಮೇಳನ

ದಿನಾಂಕ : 14, 15 ಮತ್ತು 16ನೇ ಡಿಸೆಂಬರ್ 2018 - ಶುಕ್ರವಾರ, ಶನಿವಾರ, ಭಾನುವಾರ

ಆಯೋಜಕರು : ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮ, ಮಾಗೋಡ ರಸ್ತೆ, ರಾಣೇಬೆನ್ನೂರು

email : srvashramranebennur@gmail.com Ph : 9480566346

ಆತ್ಮೀಯ ಆಧ್ಯಾತ್ಮಿಕ ಬಂಧುಗಳೇ,

ಭಗವಾನ್ ಶ್ರೀ ರಾಮಕೃಷ್ಣರ, ಶ್ರೀಮಾತೆ ಶಾರದಾದೇವಿಯವರ, ಶ್ರೀ ಸ್ವಾಮಿ ವಿವೇಕಾನಂದರ ಮತ್ತು ಭಾರತೀಯ ಸನಾತನ ಪರಂಪರೆಯು ಪ್ರತಿಪಾದಿಸಿದ ಮಹಾನ್ ಮೌಲ್ಯಗಳನ್ನು ಜನತೆಗೆ ಮುಟ್ಟಿಸುವ ಸದುದ್ದೇಶದಿಂದ ರಾಷ್ಟ್ರದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸ್ವತಂತ್ರ ಆಶ್ರಮಗಳ ಮತ್ತು ಭಕ್ತ ಜನರ ಸತ್ಸಂಗ ಕೇಂದ್ರಗಳಿಗೆ ಅರ್ಥಪೂರ್ಣ ಸ್ವರೂಪ ನೀಡಲು ರಾಮಕೃಷ್ಣ ಮಹಾಸಂಘವು ರಾಮಕೃಷ್ಣ ವಿವೇಕಾನಂದ ಭಾವಪ್ರಚಾರ ಪರಿಷತ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದು, ಈ ಸಂಸ್ಥೆಯು ಕಳೆದ ಹಲವು ದಶಕಗಳಿಂದ ಕಾರ್ಯನಿರ್ವಹಿಸುತ್ತ ಬಂದಿದೆ. ಈ ನಿಟ್ಟಿನಲ್ಲಿ **ಕರ್ನಾಟಕದಲ್ಲಿನ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್** 2012ರಲ್ಲಿ ಅಧಿಕೃತವಾಗಿ ಸ್ಥಾಪನೆಗೊಂಡು ಅತ್ಯುತ್ತಮ ಕಾರ್ಯಕ್ರಮಗಳ ಮೂಲಕ ದಿವ್ಯತ್ರಯರ ಸಂದೇಶಗಳನ್ನು ಜನತೆಗೆ ಮುಟ್ಟಿಸುವಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ.

ರಾಣೇಬೆನ್ನೂರಿನ ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮವು ಕರ್ನಾಟಕ ರಾಮಕೃಷ್ಣ-ವಿವೇಕಾನಂದ ಭಾವಪ್ರಚಾರ ಪರಿಷತ್ತಿನ ಐದನೆಯ ವಾರ್ಷಿಕ ಸಮ್ಮೇಳನವನ್ನು ಏರ್ಪಡಿಸಬೇಕೆಂಬುದು ರಾಮಕೃಷ್ಣ ಮಹಾಸಂಘದ ಪೂಜ್ಯರ ಆಶಯವಾಗಿದೆ. ತತ್ಸಂಬಂಧವಾಗಿ ಆಶ್ರಮವು ದಿನಾಂಕ 14-12-2018 ರಿಂದ 16-12-2018 ರವರೆಗೆ ಹಲವಾರು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮೂರು ದಿನಗಳ ಕಾಲ ನಡೆಯುವ ಈ ಸಮ್ಮೇಳನದ ದಿವ್ಯಸಾನ್ನಿಧ್ಯವಹಿಸಿ, ನಮ್ಮೆಲ್ಲರನ್ನು ಆಶೀರ್ವದಿಸಲು, **ರಾಮಕೃಷ್ಣ ಮಠ ಮತ್ತು ಮಿಷನ್ನಿನ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀ ಸ್ವಾಮಿ ಗೌತಮಾನಂದಜಿ ಮಹಾರಾಜ್‌ರವರು** ಆಗಮಿಸುತ್ತಿರುವುದು ನಿಜಕ್ಕೂ ನಮ್ಮೆಲ್ಲರ ಸೌಭಾಗ್ಯ. ಈ ಸಮ್ಮೇಳನದಲ್ಲಿ ಶ್ರೀ ರಾಮಕೃಷ್ಣ ಪರಂಪರೆಯ ಪೂಜ್ಯ ಯತಿಗಳು, ಮಾತಾಜಿಯವರುಗಳು ಮತ್ತು ಖ್ಯಾತ ಚಿಂತಕರು ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ನಿಗದಿತ ನೋಂದಣಿ ಅರ್ಜಿಯನ್ನು ಭರ್ತಿಮಾಡಿ, ಪ್ರತಿನಿಧಿಗಳಾಗಿ ತಮ್ಮ ಹೆಸರನ್ನು ನೋಂದಾಯಿಸಬಹುದು. ರಾಜ್ಯದ ವಿವಿಧ ಭಾಗಗಳಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಭಕ್ತ ಪ್ರತಿನಿಧಿಗಳಿಗೆ ವಸತಿ, ಸ್ಥಳೀಯ ವಾಹನ ಸೌಲಭ್ಯ ಹಾಗೂ ಪ್ರಸಾದದ ವ್ಯವಸ್ಥೆ ಮಾಡಲಾಗುವುದು. ನಿಗದಿತ ನೋಂದಣಿ ಅರ್ಜಿಗಳು ಸ್ಥಳೀಯ ಆಶ್ರಮ/ಸತ್ಸಂಗ ಕೇಂದ್ರಗಳಲ್ಲಿ ಲಭ್ಯವಿರುತ್ತವೆ. ಭರ್ತಿ ಮಾಡಿದ ಅರ್ಜಿಗಳನ್ನು ಸಮೀಪದ ಆಶ್ರಮ ಕೇಂದ್ರಗಳ ಮೂಲಕವೂ ಕಳುಹಿಸಬಹುದು, ನೇರವಾಗಿ ರಾಣೇಬೆನ್ನೂರಿನ ಆಶ್ರಮಕ್ಕೂ ಕಳುಹಿಸಬಹುದು.

ನೋಂದಣಿ ಶುಲ್ಕ : ವಸತಿ ರಹಿತ - ರೂ. 500-00. ವಸತಿ ಸಹಿತ - ರೂ. 1,000-00

ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 25-11-2018, ಅರ್ಜಿಯ ನಮೂನೆ ಬೇಕಾದಲ್ಲಿ ಕೆಳಗಿನ ವಾಟ್ಸಪ್ ನಂಬರ್‌ಗಳಿಗೆ ಮೆಸೇಜ್ ಕಳಿಸಿ. 9538648014, 9480566346, 9844184180, 9449823788

ಬ್ಯಾಂಕ್ ಖಾತೆ ವಿವರ :

Name : Sri Ramakrishna -Vivekananda Ashrama, Ranebennur
SB A/c No. 64047102821
IFSC Code : SBIN0040738
Bank : State Bank of India, Ranebennur

ಭಗವತ್ಸೇವೆಯಲ್ಲಿ

ಸ್ವಾಮಿ ಪ್ರಕಾಶಾನಂದ

ಅಧ್ಯಕ್ಷ

ಶ್ರೀ ರಾಮಕೃಷ್ಣ -ವಿವೇಕಾನಂದ ಆಶ್ರಮ, ರಾಣೇಬೆನ್ನೂರು



ಹೊಸ ಜೀವನ ಕ್ರಮ : ಆಧ್ಯಾತ್ಮಿಕ ಮಾರ್ಗ

ಹೊಸದು: ಅದೇನು ?

ಪ್ರತಿ ಕ್ಷಣ ಬದಲಾಗುತ್ತಿರುವುದೇ ಜಗತ್ತಿನ ಲಕ್ಷಣ. ಇಲ್ಲಿನ ಒಂದೊಂದು ವಸ್ತುವೂ ಬದಲಾಗುತ್ತದೆ, ಪ್ರತಿಯೊಂದು ಕಣವೂ ಬದಲಾಗುತ್ತದೆ. ಇದನ್ನು ಆಧರಿಸಿ ಈ ಬದಲಾವಣೆಗಳನ್ನು ನೋಡುವವನು, 'ಓ! ಇದೀಗ ಬದಲಾಗಿದೆ. ಹೊಸದೇನೋ ಬಂದಿದೆ' ಎಂದು ಗುರುತಿಸುತ್ತಾನೆ. ನಿಸರ್ಗದಲ್ಲೂ ನಿರಂತರ ನಡೆಯುವ ಪರಿವರ್ತನೆಯಲ್ಲಿ ಪ್ರತಿದಿನವೂ ಹೊಸ ಹೊಸ ಸಂಗತಿಗಳು ಗೋಚರವಾಗುತ್ತವೆ; ಗಮನಿಸುವವನಿಗೆ ಪ್ರತಿ ಕ್ಷಣ ಎಲ್ಲವೂ ಹೊಸದಾಗಿ ಕಾಣಿಸುತ್ತವೆ. ಈ ಸಹಜ ವ್ಯಾಪಾರ ಎಷ್ಟೇ ವೈವಿಧ್ಯಗಳಿಂದ ಕೂಡಿದ್ದರೂ, ಅಥವಾ ಎಷ್ಟು ಬಗೆಯ ವಸ್ತುಗಳೇ ಬದಲಾವಣೆಗೆ ಒಳಗಾಗುವುದಿದ್ದರೂ — ಇವುಗಳ ನಡುವೆ ಪುನರಾವರ್ತನೆ ಇದ್ದೇ ಇರುತ್ತದೆ. ಅದೇ ಋತುಮಾನಗಳು, ಸೂರ್ಯೋದಯ - ಅಸ್ತಮಾನಗಳು; ಹುಟ್ಟಿ ಸಾಯುವ ಜೀವ ಸಂಕುಲಗಳು. ನೋಡುವ, ಗ್ರಹಿಸುವ ವ್ಯಕ್ತಿ ಹಲವು ಬಾರಿ ಈ ಪುನರಾವರ್ತನೆಗಳನ್ನು ಕಂಡ ಬಳಿಕ, 'ಜಗತ್ತು ಹಾಗೇ ಇದೆ; ಜೀವನವೂ ಹಾಗೇ ಇದೆ. ಆದದ್ದೇ ಮರಳಿ ಮರಳಿ ಆಗುತ್ತಿದೆ' ಎಂದು ಉದ್ಗರಿಸುತ್ತಾನೆ. ಕೋಟ್ಯಂತರ ವರ್ಷಗಳಿಂದ ಜಗತ್ತು ಹೀಗೆಯೇ ನಡೆಯುತ್ತ ಬಂದಿದೆ; ಇದೇ ರೀತಿ ಮುಂದುವರಿದಿದೆ. ಎಲ್ಲ ಹೊಸತುಗಳೂ ಹಳೆಯದಾಗುತ್ತವೆ; ಜಗತ್ತು ಎಂದಿನಂತೆ ಹಾಗೆಯೇ ಸಾಗುತ್ತದೆ.

ಜೀವನದಲ್ಲಿ ಹೊಸತನ

ಪ್ರಾಣಿಪಕ್ಷಿಗಳು, ಸಸ್ಯವರ್ಗ ಹಾಗೂ ಜಲಚರಗಳು ನಿಸರ್ಗದ ಈ ವರ್ತುಲದಲ್ಲಿ ಒಂದಾಗಿ ಬದುಕುತ್ತವೆ; ವಿವಿಧ ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಕೊಳ್ಳುತ್ತವೆ. ಆದರೆ ಮಾನವ? ಇಡೀ ಸೃಷ್ಟಿಯಲ್ಲಿ ಅವನದು ಒಂದು ಬೇರೆಯೇ ದಾರಿ. ದೈವದತ್ತವೆಂಬಂತೆ ಲಭಿಸಿದ ಮನಸ್ಸು, ಬುದ್ಧಿಶಕ್ತಿ ಇವುಗಳಿಂದ ಅವನಿಗೆ ಲಭಿಸಿದ ಸಾಮರ್ಥ್ಯ ಅಂತಿಂತಹುದಲ್ಲ. ಒಟ್ಟು ಸೃಷ್ಟಿಯನ್ನೇ ಅರಿಯುವ, ಚಿಂತಿಸುವ, ವಿಶ್ಲೇಷಿಸುವ, ಇನ್ನೂ ಆಳಕ್ಕೆ ಇಳಿದು ಸೃಷ್ಟಿರಹಸ್ಯವನ್ನು ಭೇದಿಸಬಲ್ಲ ಪ್ರಚಂಡ ಬುದ್ಧಿಶಕ್ತಿ ಅದು. ಪ್ರಪಂಚದ ಪ್ರತಿಯೊಂದು ಜೀವಿಯೂ ನಿಸರ್ಗದ ವ್ಯಾಪಾರಕ್ಕೆ ಅನುಗುಣವಾಗಿ ನಡೆದರೆ, ಮಾನವನ ಗತಿಯೇ ವಿಭಿನ್ನ ದಿಕ್ಕಿನತ್ತ. ಎಲ್ಲೆಲ್ಲೂ ಹೊಸತನ್ನು ಕಾಣುವ, ಹೊಸ ಅರಿವನ್ನು ಪಡೆಯುವ, ಹೊಸದನ್ನು ಸೃಷ್ಟಿಸುವ ಅದಮ್ಯ ಹಂಬಲ ಅವನದು. ಅವನ ಮಾನಸಿಕ, ಬೌದ್ಧಿಕ ವಿಕಾಸದ ವಿವಿಧ ಹಂತಗಳಲ್ಲಿ ಅವನು ಪಡೆದ ಬೆರಗು, ಆನಂದ, ಬೆಳಕು ಎಷ್ಟೊಂದು ಭವ್ಯವಾದುದು!

ಹೊಸತನ್ನು ಕಾಣುವ ಹಂಬಲ ಮಾನವನ ಆದಿಮ ಕಾಲದಿಂದಲೇ ಬೆಳೆದುಬಂತು ಎಂದು ಇತಿಹಾಸದ ಪುಟಗಳು ಹೇಳುತ್ತವೆ. ಇದರಿಂದಲೇ ಅವನು ನಿಸರ್ಗವನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಪಡೆದ. ವಿಜ್ಞಾನ, ತಂತ್ರಜ್ಞಾನ, ಆಧುನಿಕ ಆವಿಷ್ಕಾರಗಳಿಗೆ ಕೊನೆಯಿಲ್ಲ; ಸೃಷ್ಟಿಯೊಳಗೆ ತನ್ನದೇ ಸೃಷ್ಟಿಯನ್ನು ಮಾಡುತ್ತ ಮಾನವ ಮುನ್ನಡೆದ. ಭೌತಿಕ ಹಾಗೂ ಬೌದ್ಧಿಕ ಸ್ತರದಲ್ಲಿ ಕಂಡುಕೊಂಡ ಹೊಸ ಆವಿಷ್ಕಾರಗಳು ಪ್ರಪಂಚವನ್ನೇ ಬದಲಾಯಿಸಿದವು. ಆದರೆ ಆಂತರಿಕ ಸ್ತರದಲ್ಲಿ? ಮನಸ್ಸು, ಬುದ್ಧಿಗಳನ್ನು ಮೀರಿ ಸಾಗುವ ಪ್ರಯತ್ನವನ್ನೂ ಮನುಷ್ಯ ಮಾಡಿದ; ಅದರ ಪರಿಣಾಮವೇ ಒಂದು ನೂತನ ಆಂತರಿಕ ಜಗತ್ತು — ಅದೇ ಆಧ್ಯಾತ್ಮಿಕ ಜಗತ್ತು.

ಗೋಚರವಾದ ಹೊಸ ದಿಕ್ಕು

ಸಮಾಜದಲ್ಲಿ ವಿಭಿನ್ನವಾಗಿ ಆಲೋಚಿಸುವವರನ್ನು ಎಲ್ಲರೂ ಗಮನಿಸುತ್ತಾರೆ; ಅವರ ಮಾತುಗಳಿಗೆ ಪರ-ವಿರೋಧ ಪ್ರತಿಕ್ರಿಯೆಗಳು ಬಂದೇ ಬರುತ್ತವೆ. (ಎಲ್ಲರೂ ಗಮನಿಸುತ್ತಾರೆ ಎಂಬ ಕಾರಣಕ್ಕಾಗಿಯೇ ಪ್ರತಿಯೊಂದನ್ನೂ ವಿರೋಧಿಸುವ ಪ್ರಚಾರಪ್ರಿಯರ ಸಂಖ್ಯೆ ಇತ್ತೀಚೆಗೆ ಅಧಿಕವಾಗುತ್ತಿದೆ. ಅವರನ್ನು ಕುರಿತು ಇಲ್ಲಿ ಹೇಳುತ್ತಿಲ್ಲ.) ಆದರೆ ಇಲ್ಲಿಯತನಕ ಬೇರೆ ಯಾರೂ ಕಾಣದ ಸತ್ಯವನ್ನು ಕಾಣುವ, ಹೊಸ ಒಂದು ಆಯಾಮವನ್ನೇ ಗುರುತಿಸುವ ಕಾರ್ಯ ಅಂತಹ ವ್ಯಕ್ತಿಗಳಿಂದಲೇ ಸಾಧ್ಯವಾಗುವುದು. ಹೀಗೆ ವಿಭಿನ್ನವಾಗಿ ಆಲೋಚಿಸುವ ಪ್ರಕ್ರಿಯೆ ತುಂಬ ಪ್ರಾಚೀನ

ಕಾಲದಲ್ಲೇ ನಡೆದಿತ್ತು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಈ ಬಗೆಯ ಆಲೋಚನೆಗಳು ಭಾರತದಲ್ಲೇ ಹೆಚ್ಚಾಗಿ ನಡೆದವು. ವೇದ, ಉಪನಿಷತ್ತುಗಳಲ್ಲಿ ಕಂಡುಬರುವ ಉನ್ನತ ಆಲೋಚನೆಗಳೆಲ್ಲ ಇಂತಹ 'ವಿಭಿನ್ನ' ಚಿಂತನೆಗಳ ಫಲ. ನಮ್ಮಲ್ಲಿ ತಪಸ್ಸು, ಧ್ಯಾನ, ಮನನ, ನಿದಿಧ್ಯಾಸನ, ಎಂದೆಲ್ಲ ಕರೆದುದು ಇಂತಹ ಆಳವಾದ, ಆಂತರಿಕವಾದ ಆಲೋಚನೆಗಳನ್ನೇ. ಹೀಗೆ ನಡೆದ ಚಿಂತನೆಗಳ ಫಲವೇ ಆಧ್ಯಾತ್ಮಿಕ ಮಾರ್ಗ. ಉಳಿದೆಲ್ಲ ಜೀವ, ಜಂತುಗಳ ಬದುಕಿಗಿಂತಲೂ, ಪ್ರಾಣಿಸಹಜ ಬದುಕಿಗಿಂತ ಮೇಲಲ್ಲದ ಜೀವನ ನಡೆಸುತ್ತಿರುವ ಮಾನವರಿಗಿಂತಲೂ ವಿಭಿನ್ನವಾದ ಮಾರ್ಗವಿದು. ಒಟ್ಟು ಸೃಷ್ಟಿಯನ್ನೇ ಗಮನಿಸಿ ನೋಡಿದಾಗ ಇದು ಹೊಸ ಜೀವನ ಗತಿ; ನೈಸರ್ಗಿಕ ಜೀವನಕ್ರಮದಿಂದ ಕಳಚಿ ಹೊರಬಂದ ವಿಶಿಷ್ಟ ಬಗೆಯ ಜೀವನಕ್ರಮ. ಅದುವರೆಗೆ ಮಾನವನು ಕಂಡಿದ್ದ ಬದುಕು ಈಗ ಬದಲಾಯಿತು; ಜೀವನದ ಗುರಿ, ಆದರ್ಶ, ಶೈಲಿ ಎಲ್ಲವೂ ಬದಲಾಯಿತು. ಬರೀ ಆಹಾರ, ನಿದ್ರೆ, ಮೈಥುನಗಳೇ ಬಾಳಿನ ಗುರಿಯಲ್ಲ – ಅದನ್ನು ಮೀರಿದ ಉನ್ನತ ಆದರ್ಶವೊಂದಿದೆ ಎಂಬುದು ಈ ಬಗೆಯ ಚಿಂತನೆಗಳಿಂದ ಸ್ಥಿರವಾಯಿತು. ಇದಕ್ಕನುಗುಣವಾಗಿ ಭಾರತದ ಶ್ರೇಷ್ಠ ಆದರ್ಶ ಭೌತಿಕ ಜೀವನವಲ್ಲ; ಪ್ರಾಣಿ ಸಹಜ ಜೀವನವನ್ನು ದಾಟಿಹೋಗಿ, ಹೊಸ ಬೆಳಕನ್ನರಸಿ ದಿವ್ಯ ಕ್ಷಿತಿಜದತ್ತ ಹೊರಟ ದಿಟ್ಟ ನಡಿಗೆಯೇ ಇಲ್ಲಿನ ಆದರ್ಶ. ಈ ಮಾರ್ಗದಲ್ಲಿ ಎದುರಾಗುವ ಹಲವು ಎಡರುತೊಡರು, ಆತಂಕ, ಸೋಲುಗಳು, ಹತಾಶೆ — ಎಲ್ಲವನ್ನೂ ಎದುರಿಸಿ ಮುನ್ನುಗಲೂ ಅಂತಹ ಸಾಧಕರು ಸಿದ್ಧರಾದರು. ಎಲ್ಲವನ್ನೂ ಬಿಟ್ಟು, ಪ್ರಾಣದ ಹಂಗನ್ನೂ ತೊರೆದು ಸತ್ಯದರ್ಶನಕ್ಕಾಗಿ ತನ್ನ ಬದುಕನ್ನೆಲ್ಲ ಮೀಸಲಿಡುವ ಸಂನ್ಯಾಸಿಯ ಜೀವನ ನಮ್ಮ ದೇಶದ ಅತ್ಯುಚ್ಚ ಆದರ್ಶವಾಯಿತು.

ಕೇವಲ ಚಿಂತನೆಯಲ್ಲ, ಬದುಕೇ ಬದಲಾಯಿತು

ಸಂದೇಹವೆಂಬುದು ಮಾನವನಿಗೆ ಒಂದು ಶಾಪವೆನ್ನುತ್ತಾರೆ. ಅದೆಷ್ಟು ಬಾರಿ ಮನಸ್ಸಿನಲ್ಲಿ ಕೆಲವು ಸಂಗತಿಗಳನ್ನು ಸ್ಥಿರೀಕರಿಸಿಕೊಂಡರೂ, ಮುಂದಿನ ಕ್ಷಣದಲ್ಲಿ, 'ಇದು ಸುಳ್ಳಿರಬಾರದೇಕೆ?' ಎಂಬ ಸಂದೇಹ ಮೂಡುತ್ತದೆ.ಆಧ್ಯಾತ್ಮಿಕ ಜಗತ್ತಿನಲ್ಲೂ ಇಂತಹ ಸಂದೇಹಗಳು ಹೆಜ್ಜೆ ಹೆಜ್ಜೆಗೂ ಕಾಡಬಹುದು. ಕೇವಲ ತಾರ್ಕಿಕವಾಗಿ, ಬೌದ್ಧಿಕವಾಗಿ ಲಭಿಸುವ ಉತ್ತರಗಳು ಆ ಹಂತದಲ್ಲಷ್ಟೇ ಉಳಿದುಬಿಟ್ಟರೆ, ಅದು ಪ್ರಾಯೋಗಿಕವಲ್ಲದೆ ಹೋಗಬಹುದು. ಹತ್ತಾರು ವಿಚಾರಗಳಂತೆ 'ಇದೂ ಒಂದು ವಿಚಾರ'ವೆಂದಷ್ಟೇ ಆಗಬಹುದು. ಆದರೆ ಆಧ್ಯಾತ್ಮಿಕ ಅನ್ವೇಷಣೆ, ಚಿಂತನೆಗಳು ನಮ್ಮಲ್ಲಿ ಹಾಗೆ ಉಳಿಯಲಿಲ್ಲ. ಪ್ರತಿಯೊಂದು ವಿಚಾರ, ಚಿಂತನೆ, ಆಧ್ಯಾತ್ಮಿಕ ಸಿದ್ಧಾಂತವನ್ನೂ ಅನುಭವದ ಒರೆಗಲ್ಲಿಗೆ ಹಚ್ಚಿ ಸತ್ಯವನ್ನು ಕಂಡುಕೊಳ್ಳುವ ವಿಧಾನ ನಮ್ಮದಾಯಿತು. ಈ ಮೂಲಕ ತಾವು ಕಂಡ ದರ್ಶನ, ಸತ್ಯ ಹಾಗೂ ಸಿದ್ಧಾಂತಗಳು ಕೇವಲ ಮಾನಸಿಕ, ಬೌದ್ಧಿಕ ಸ್ತರದಿಂದ ಪ್ರಯೋಗಿಕ ಬದುಕಿಗೆ ಇಳಿದು ಬರಬೇಕಾಯಿತು. ಅನುಭವದ ಆಧಾರವೊಂದೇ ಸತ್ಯದ ಪರಮ ಪ್ರಮಾಣವೆಂಬುದು ಇಲ್ಲಿ ಸ್ಥಾಪಿತವಾಯಿತು. ಈ ಧ್ಯೇಯಕ್ಕನುಗುಣವಾಗಿ ಬದುಕನ್ನು ರೂಪಿಸಿಕೊಂಡವರ ಮಾರ್ಗವೇ 'ಆಧ್ಯಾತ್ಮಿಕ ಜೀವನ'ವೆನಿಸಿತು. ಬದುಕಿನ ಅನುಕೂಲತೆಗಳಿಗೆ ತಕ್ಕಂತೆ ತತ್ತ್ವ, ಆದರ್ಶಗಳನ್ನು ರೂಪಿಸುವುದಲ್ಲ; ಬದಲಾಗಿ ತತ್ತ್ವ ಆದರ್ಶಗಳಿಗೆ ತಕ್ಕಂತೆ ಜೀವನವನ್ನು ರೂಪಿಸುವುದು — ಇದು ಇಲ್ಲಿನ ಜೀವನ ಕ್ರಮವಾಯಿತು. ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆದು ಗುರಿ ತಲುಪಿದ ಕೆಲವು ಮಂದಿ ಮಹಾತ್ಮರ ಜೀವನ ಹಾಗೂ ವಾಣಿ ಪರಮಪೂಜ್ಯವೆನಿಸಿತು. ಇಲ್ಲಿ ತಮ್ಮ ಜೀವನವನ್ನೆಲ್ಲ ಇಂಥ ದಿವ್ಯ ಆದರ್ಶಕ್ಕಾಗಿ ಸಮರ್ಪಿಸಿದ ಸಂನ್ಯಾಸಿಗಳ ಜೀವನ ವಿಧಾನ ಒಂದೆಡೆ; ಅಂತಹ ತ್ಯಾಗ, ಸಾಧನೆ ಹಾಗೂ ಕಠಿಣ ಜೀವನ ನಡೆಸಲಾಗದ ಇತರ ಬಹುಸಂಖ್ಯಾತರ ಸಾಧಾರಣ ಜೀವನ ಕ್ರಮ ಇನ್ನೊಂದೆಡೆ. ಕೇವಲ ಸಂನ್ಯಾಸಿಗಳಿಗಷ್ಟೇ ಆಧ್ಯಾತ್ಮಿಕ ಮಾರ್ಗ ಎಂದಾದರೆ, ಉಳಿದವರ ಗತಿಯೇನು? ಅವರಿಗೂ ದಿವ್ಯ ಬದುಕಿನ ಆದರ್ಶ ಬೇಡವೆ? ಈ ಅಗತ್ಯಕ್ಕನುಗುಣವಾಗಿ ಎಲ್ಲರೂ ಅನುಸರಿಸಬಹುದಾದ ಧಾರ್ಮಿಕ, ಆಧ್ಯಾತ್ಮಿಕ ಜೀವನ ರೂಪುಗೊಂಡಿತು. ಹೀಗೆ ನಮ್ಮ ದೇಶದಲ್ಲಿ ತತ್ತ್ವ, ಆದರ್ಶಕ್ಕನುಗುಣವಾಗಿ ಸಮಾಜದ ಒಟ್ಟು ಜೀವನಕ್ರಮವನ್ನೇ ಬದಲಾಯಿಸಿಕೊಂಡ ಒಂದು ಅಭೂತಪೂರ್ವ ಉದಾಹರಣೆಯಿದೆ!

ಆಧ್ಯಾತ್ಮಿಕ ಜೀವನದಲ್ಲಿ ಹೊಸ ಆಯಾಮಗಳು

ಈಗಾಗಲೇ ನೋಡಿರುವಂತೆ ಹೊಸತನ್ನು ಅರಸುವ ಪ್ರವೃತ್ತಿ ಮಾನವನ ಜೈವಿಕ ಬೆಳವಣಿಗೆಯ ಒಂದು ಲಕ್ಷಣವಾಗಿ ಗೋಚರವಾಯಿತು. ಈ ಪ್ರವೃತ್ತಿ ಆಂತರಿಕವಾಗಿ ತೊಡಗಿಕೊಂಡಾಗ ಕಾಣಿಸಿಕೊಂಡ ಮಾರ್ಗವೇ ಆಧ್ಯಾತ್ಮಿಕ ಜೀವನ. ಅತ್ಯಂತ ಕುತೂಹಲಕಾರಿಯಾದ ಅಂಶವೇನೆಂದರೆ, ಹೊಸತಾಗಿ ರೂಪಿಸುವ ಈ ಮಾರ್ಗ ಬಾಹ್ಯಜಗತ್ತಿನಂತೆ ಹಳೆಯದಾಗುತ್ತ ಹೋಗಲಿಲ್ಲ; ಬದಲಾಗಿ ಪ್ರತಿಕ್ಷಣವೂ ಹೊಸದಾಗುತ್ತಾ ಸಾಗಿತು! ಈ ವಿಲಕ್ಷಣ, ವೈರುಧ್ಯದ ಕಾರಣದಿಂದ ಹಲವು ಬಾರಿ ಆಧ್ಯಾತ್ಮಿಕ ಜೀವನ ಅತ್ಯಂತ ರೋಚಕವೂ, ಕುತೂಹಲಕಾರಿಯೂ, ಅಷ್ಟೇ ರೋಮಾಂಚಕವೂ ಆಗಿರುವಂತೆ ಕಾಣಿಸುವುದು. ಆಧ್ಯಾತ್ಮಿಕ ಮಾರ್ಗದಲ್ಲಿನ ನಿತ್ಯನೂತನತೆಯನ್ನು ಹೀಗೆ ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಬಹುದು:

೧) ಮನಸ್ಸಿನ ಕಾರ್ಯವಿಧಾನ: ಪ್ರತಿಕ್ಷಣವೂ ಬದಲಾಗುತ್ತಿರುವುದು, ಹೊಸ ಹೊಸ ಆಲೋಚನೆಗಳನ್ನು ಮಾಡುತ್ತಿರುವುದು ಮನಸ್ಸಿನ ಲಕ್ಷಣ. ಆಧ್ಯಾತ್ಮಿಕ ಸಾಧನೆ ಪ್ರಧಾನವಾಗಿ ನಡೆಯುವುದು ಮನಸ್ಸಿನ ಮೂಲಕ; ಇದಕ್ಕನುಗುಣವಾಗಿ ಹೊಸ ವಿಚಾರ, ಭಾವನೆ, ಚಿಂತನೆಗಳು ಮನಸ್ಸಿನಲ್ಲಿ ನಿರಂತರ ನಡೆಯುತ್ತಿರುತ್ತದೆ. ಪತಂಜಲಿಯ ಯೋಗಸೂತ್ರಗಳಲ್ಲಿ '**ಯೋಗಶ್ಚಿತ್ತವೃತ್ತಿನಿರೋಧಃ**' *(ಸೂತ್ರ ೨)* ಎಂಬುದು ಅತ್ಯಂತ ಮುಖ್ಯವಾದ ಒಂದು ಸೂತ್ರ

ವಾಗಿದೆ. ನಿರಂತರ ಮನಸ್ಸಿನಲ್ಲಿ ಏಳುವ ಆಲೋಚನೆಗಳನ್ನು ನಿಗ್ರಹಿಸಿ, ಸಾಧಕನು ತನ್ನ ಸ್ವರೂಪದಲ್ಲಿ ನೆಲೆಸುವಂತೆ ಮಾಡುವುದೇ ಎಲ್ಲ ಸಾಧನೆಗಳ ಗುರಿ. ಸೂತ್ರ ಸಣ್ಣದು, ವಿಚಾರವೂ ಸುಲಭ — ಆದರೆ ಮಾತ್ರ ಅತ್ಯಂತ ವ್ಯಾಪಕವಾದುದು. ಗುರಿ ತಲುಪುವ ತನಕ ಸಾಧಕನು ಹಾದುಹೋಗುವ ಹತ್ತುಹಲವು ಏರಿಳಿತಗಳು, ಅವನು ಕಾಣುವ ದರ್ಶನಗಳು, ಮನಸ್ಸು ಹೊಂದುವ ಪರಿವರ್ತನೆ — ಇವುಗಳಿಗೆ ಲೆಕ್ಕವಿಲ್ಲ. ಆದ್ದರಿಂದ, ಮನಸ್ಸನ್ನು ಮಾಧ್ಯಮವಾಗಿ ಬಳಸುವುದೇ ಆಧ್ಯಾತ್ಮಿಕ ಜೀವನದ 'ನಿತ್ಯನೂತನ'ವೆಂಬ ವಿಶೇಷತೆಗೆ ಬಹುಪಾಲು ಕಾರಣವಾಗಿದೆ.

೨) ಬುದ್ಧಿಯ ಪ್ರಕಾಶ; ಹೊಸ ಮಿಂಚು: ಒಂದು ವಿಷಯವನ್ನು 'ಇದು ಹೀಗೆ' ಎಂದು ನಿಶ್ಚಯಾತ್ಮಕವಾಗಿ ಅರಿಯುವ ಶಕ್ತಿ ಬುದ್ಧಿಯದು. ಮನಸ್ಸು ಅರಿತದ್ದನ್ನು ವಿಶ್ಲೇಷಿಸಿ, ನಿರ್ಣಯಿಸುವ ಕಾರ್ಯ ಮಾಡುವ ವೇಳೆಗೆ ಬುದ್ಧಿಯಲ್ಲಿ ಮಿಂಚುವ ಪ್ರಕಾಶ, ಅನುಭವದಿಂದ ಮಾತ್ರ ಅರಿಯಬಹುದಾದ ಸಂಗತಿ. ಬುದ್ಧಿಗೆ ಬೆಳಗುವ ಗುಣವಿದೆ; ವಸ್ತುವಿನ ಅಥವಾ ವಿಷಯದ ಅಂತರಂಗವನ್ನು ಹೊಕ್ಕು ಅದರ ಅರಿವನ್ನು ಮೂಡಿಸುವ ಈ ಸಾಮರ್ಥ್ಯ ಅಸಾಧಾರಣವಾದುದು. ಒಂದು ಸಣ್ಣ ವಸ್ತುವನ್ನು ಅರಿತು, 'ಇದು ಇಂಥದು' ಎಂದು ನಿರ್ಣಯಿಸುವ ಸಣ್ಣ ಕಾರ್ಯದಿಂದ ಹಿಡಿದು, ಪರಬ್ರಹ್ಮನ ಕಾರ್ಯದಲ್ಲೆಲ್ಲ ಸದಾ ಮಿಂಚು, ಬೆಳಕು, ಆನಂದ ಜೊತೆಗೂಡಿರುತ್ತವೆ. ಈ ಕಾರಣದಿಂದಲೂ ಆಧ್ಯಾತ್ಮಿಕ ಜೀವನ ನಿತ್ಯನೂತನವೆನಿಸುವುದು.

೩) ಆತ್ಮದ ನಾವೀನ್ಯತೆ: ನಮ್ಮ ನೈಜಸ್ವರೂಪವನ್ನೇ ನಾವು 'ಆತ್ಮ'ಎನ್ನುತ್ತೇವೆ. ಆದಿ, ಅಂತ್ಯಗಳಿಲ್ಲದೆ, ಸರ್ವವ್ಯಾಪಕವೂ ಅನಂತವೂ ಆದ, ಎಲ್ಲ ಮಿತಿಗಳನ್ನೂ ಮೀರಿ ನಿತ್ಯದಲ್ಲಿ ನೆಲೆಗೊಂಡಿರುವ ಆತ್ಮನ ಅನುಭವವನ್ನು ನಮ್ಮ ಸಾಧಾರಣ ಗ್ರಹಿಕೆಯ ಮೂಲಕ ಭಾವಿಸಿಕೊಂಡರೂ ಸಾಕು, ಭವ್ಯವೂ ಅದ್ಭುತವೂ ಆದ ಒಂದು ಕಲ್ಪನೆ ನಮಗಾಗುತ್ತದೆ. ಆದರೆ ಆತ್ಮಾನುಭವವನ್ನು ಪಡೆದ, ಸಾಕ್ಷಾತ್ಕಾರ ಹೊಂದಿ ಸತ್ಯವನ್ನು ಕಂಡ ಮಹಾತ್ಮರ ಮಾತಿನಂತೆ, 'ಆತ್ಮವನ್ನು ವಿವರಿಸಲಾಗದು; ಅದರ ಅನುಭವದಿಂದ ಮಾತ್ರ ಒಬ್ಬನು ಪರಿಪೂರ್ಣತೆಯನ್ನು ಹೊಂದಬಹುದು'. ಶಾಸ್ತ್ರಗಳು ವಿವರಿಸುವಂತೆ ಆತ್ಮನ ಲಕ್ಷಣ **'ಸತ್-ಚಿತ್-ಆನಂದ'**. ಅದುವೇ ಎಲ್ಲದರ ಅಸ್ತಿತ್ವ ಹಾಗೂ ಆಧಾರ; ಅದುವೇ ಎಲ್ಲ ಚೈತನ್ಯಗಳ ಮೂಲ; ಅದುವೇ ಎಲ್ಲ ಆನಂದಗಳ ಆಗರ. 'ಕೊನೆಯಿಲ್ಲದ ಆನಂದ' ಎಂಬುದೇ ಆತ್ಮನ ವಿಶೇಷತೆ. **'ರಸೋ ವೈ ಸಃ'** ಅಂದರೆ, ಆತ್ಮನು ರಸವೇ ಆಗಿರುವನು — ಎಲ್ಲದರ ಸಾರವಾಗಿರುವನು. ಆದ್ದರಿಂದ ಇಲ್ಲಿ ಹಳೆಯದು, ಜಡ, ಏಕತಾನತೆ ಇತ್ಯಾದಿ ಭಾವಗಳಿರಲಾರವು. ಈ ತತ್ತ್ವದ ಹಿನ್ನೆಲೆಯಿಂದ ನೋಡಿದಾಗ, ಆಧ್ಯಾತ್ಮಿಕ ಜೀವನದ ಅಂತಿಮ ಗುರಿಯು ನಿತ್ಯನವೀನ ಲಕ್ಷಣವನ್ನು ಹೊಂದಿದೆ; ಆದ್ದರಿಂದ ಮಾರ್ಗವೂ ತನ್ನ ಗುರಿಯ ಲಕ್ಷಣದಿಂದ ಪ್ರಭಾವಿತವಾಗಿದೆ.

ಪ್ರಪಂಚದ ಪುನರಾವರ್ತನೆ

ಜಗತ್ತಿನಲ್ಲಿ ಪ್ರತಿಯೊಂದು ಬದಲಾವಣೆಯೂ ಕೆಲವೊಂದು ನಿಯಮಗಳಿಗೆ ಅನುಗುಣವಾಗಿ ನಡೆಯುವುದರಿಂದ, ಯಾವ ಒಂದು ಜಡವಸ್ತುವೂ ಸ್ವತಂತ್ರವಾಗಿ ಅಥವಾ ಸ್ವೇಚ್ಛೆಯಿಂದ ಬದಲಾಗಲು ಸಾಧ್ಯವಿಲ್ಲ. ಆತ್ಮನಿಗೆ ಮಾತ್ರವೇ ಸ್ವತಂತ್ರವಾದ ಇಚ್ಛೆ ಇರುವುದರಿಂದ, ಅದನ್ನು ಅವಲಂಬಿಸಿರುವ ಜೀವಿಗಳು ಮಾತ್ರ ಸ್ವ-ಇಚ್ಛೆಯಿಂದ ಚಲಿಸುವುವು. ಘನವಸ್ತುಗಳ ರಾಶಿ ಸಮಸ್ತ ಭೂಮಂಡಲವನ್ನೇ ತುಂಬಿಕೊಂಡಿದೆ; ಇನ್ನೆಷ್ಟೋ ಅಸಂಖ್ಯಾತ ಗ್ರಹ, ನಕ್ಷತ್ರಗಳಿಂದ ಕೂಡಿದ ವಿಶ್ವದುದ್ದಕ್ಕೂ ವ್ಯಾಪಿಸಿದೆ. ಅವೆಲ್ಲ ಒಟ್ಟಾಗಿ ಸೇರಿಕೊಂಡರೂ, ಒಂದು ಚಿಕ್ಕ ಇರುವೆಯ ಜೀವಕ್ಕೆ ಸಮಾನವಾಗಲಾರದು. ವ್ಯತ್ಯಾಸ ಇಷ್ಟೆ: ಒಂದು ಚೈತನ್ಯ, ಇನ್ನೊಂದು ಜಡ. ಜಡವಸ್ತುಗಳ ರಾಶಿಯಾದ ಭೌತಿಕ ಜಗತ್ತು ನಿರಂತರ ಬದಲಾಗುವುದು; ಆ ಬದಲಾವಣೆ ಬರೀ ಪುನರಾವರ್ತನೆಯಲ್ಲದೆ ಬೇರಲ್ಲ. ಸೃಷ್ಟಿ-ಸ್ಥಿತಿ-ನಾಶ ಈ ಮೂರು ಅವಸ್ಥೆಗಳ ಮೂಲಕ ತೋರಿಬರುವ ಜಗತ್ತು ಶಾಶ್ವತವೂ ಸತ್ಯವೂ ಆದ ಆತ್ಮಕ್ಕೆ ಹೇಗೆ ಸಮನಾಗುವುದು? ಪುನರಾವರ್ತನೆ ಹೊಂದುವ ಜಡಜಗತ್ತು ಪ್ರತಿಕ್ಷಣವೂ ಹಳೆಯದಾಗುವುದು; ಹೊಸತನ ತೋರಿಕೆ ಮಾತ್ರ. ಎಲ್ಲ ಜೀವಿಗಳಲ್ಲಿ ಅಡಗಿರುವ ಚೈತನ್ಯವೇ ಆತ್ಮ; ಅದೊಂದೇ ಶಾಶ್ವತ — ಅದು ಪ್ರತಿಕ್ಷಣವೂ ನೂತನ; ಅನಂತದಲ್ಲಿ ವ್ಯಾಪ್ತವಾಗಿರುವ ಅದನ್ನು 'ಅಖಂಡೈಕರಸ'ವೆನ್ನಬಹುದು. ಆಧ್ಯಾತ್ಮಿಕ ಮಾರ್ಗ ಇಂಥ ಆತ್ಮನೆಡೆಗೆ. ವಿವಿಧ ದೇವತೆಗಳ ಮೂಲಕ, ಜ್ಞಾನ-ಭಕ್ತಿ-ಯೋಗವೇ ಮುಂತಾದ ವಿಧಾನಗಳ ಮೂಲಕ ಈ ಮಾರ್ಗ ವೈವಿಧ್ಯಮಯವಾಗಿದೆ. ಆದರೆ ಗುರಿ ಒಂದೇ; ನಿತ್ಯನೂತನವಾದ, ಅನಂತವೂ ಶಾಶ್ವತವೂ ಆನಂದಮಯವೂ ಆದ ಗುರಿಯಾಗಿದೆ ಅದು. ಆತ್ಮನೆಡೆಗೆ ಸಾಗುವ ದಿವ್ಯಪಥವೂ ಅದೇ ರೀತಿ ನಿತ್ಯನೂತನವಾಗಿದೆ.

ನಕ್ಷತ್ರ ದೂರದಲ್ಲಿ ಮಿನುಗುತ್ತಿದೆ; ಕೋಟಿ ವರ್ಷಗಳಿಂದ ಹಾಗೆಯೇ ಮಿನುಗುತ್ತಿದೆ. ನೋಡುವಾಗ ಪ್ರತಿಕ್ಷಣವೂ ಅದು ಹೊಳೆಯುವಂತೆ ತೋರುವುದು. ಆದರೆ ನಕ್ಷತ್ರವೂ ಶಾಶ್ವತವಲ್ಲ; ಅದರ ಮಿನುಗುವಿಕೆಯೂ ಶಾಶ್ವತವಲ್ಲ. **ಆತ್ಮವೇ** ನಿಜವಾಗಿ ಶಾಶ್ವತ ಮಿನುಗುವ ನಕ್ಷತ್ರ; ಅದು ಚಿರಂತನ ಸತ್ಯವನ್ನೇ ಬೆಳಗುತ್ತಿದೆ. ಹೃದಯದಲ್ಲಿ ಅದನ್ನು ಕಂಡು, ಅನುಭವಿಸಿದ ಮಾನವನೇ ಧನ್ಯ.

ನವೆಂಬರ್ ತಿಂಗಳ ಕಾರ್ಯಕ್ರಮಗಳು

೩	ಶನಿವಾರ	ಏಕಾದಶಿ
೭	ಬುಧವಾರ	ಶ್ರೀ ಕಾಳೀ ಪೂಜೆ
೧೯	ಸೋಮವಾರ	ಏಕಾದಶಿ
೨೦	ಮಂಗಳವಾರ	ಸ್ವಾಮಿ ಸುಬೋಧಾನಂದ ಜಯಂತಿ
೨೨	ಗುರುವಾರ	ಸ್ವಾಮಿ ವಿಜ್ಞಾನಾನಂದ ಜಯಂತಿ

ಬೋಧಕ ಮತ್ತು ವಿನಯ



ಅಭಿಮಾನ ಹೋಯಿತು ಎಂದರೆ ಎಲ್ಲ ಸರಿಹೋಗುತ್ತದೆ. 'ನಾನು ಉಪನ್ಯಾಸ ಮಾಡುತ್ತೇನೆ, ನೀವು ಕೇಳಿ' ಎಂಬ ಈ ಅಭಿಮಾನ ಇಲ್ಲದೆ ಇದ್ದರೆ ಯಾವ ತೊಂದರೆಯೂ ಬರದು. ಅಹಂಕಾರ ಜ್ಞಾನಜನ್ಯವಾದುದೊ ಅಜ್ಞಾನಜನ್ಯವಾದುದೊ? ಯಾರು ನಿರಹಂಕಾರಿಯೊ ಆತನಿಗೆ ಮಾತ್ರವೇ ಜ್ಞಾನ ಲಭಿಸುತ್ತದೆ. ಮಳೆಯ ನೀರು ತಗ್ಗುಪ್ರದೇಶದಲ್ಲಿ ಶೇಖರವಾಗುತ್ತದೆ; ಎತ್ತರ ಪ್ರದೇಶದಿಂದ ಕೆಳಕ್ಕೆ ಹರಿದು ಬಂದುಬಿಡುತ್ತದೆ.

ಎಲ್ಲಿಯವರೆಗೆ ಅಹಂಕಾರವಿರುವುದೊ ಅಲ್ಲಿಯವರೆಗೆ ಜ್ಞಾನ ದೊರಕದು; ಈ ಸಂಸಾರಕ್ಕೆ ಮತ್ತೆ ಮತ್ತೆ ಹಿಂದಿರುಗಿ ಬರಬೇಕಾಗುತ್ತದೆ. ಹಸುವಿನ ಕರು, 'ಹಂಬಾ! ಹಂಬಾ!' ಅಂದರೆ, 'ನಾನು! ನಾನು!' ಅನ್ನುತ್ತದೆ. ಅದಕ್ಕಾಗಿಯೆ ಅದಕ್ಕೆ ಕಾದಿದೆ ಅಷ್ಟೊಂದು ಚಿತ್ರಹಿಂಸೆ. ಕಟುಕ ಅದನ್ನು ಕೊಲ್ಲುತ್ತಾನೆ. ಅದರ ಚರ್ಮದಿಂದ ಮೆಟ್ಟು ಆಗುತ್ತದೆ. ನಗಾರಿಯ ಮತ್ತು ಡೋಲಿನ ಬಾಯಿಮುಚ್ಚಳ ಆಗುತ್ತದೆ. ಅದನ್ನು ಜನ ದಯದಾಕ್ಷಿಣ್ಯವಿಲ್ಲದೆ ಸುಮ್ಮನೆ ಬಡಿಯುತ್ತಾರೆ. ಅದರ ಕಷ್ಟ ಅಷ್ಟಕ್ಕೇ ಮುಗಿಯೋ ಹಾಗಿಲ್ಲ. ಕಟ್ಟಕಡೆಗೆ ಅದರ ಕರುಳಿನಿಂದ ಹುರಿಯಾಗುತ್ತದೆ. ಆ ಹುರಿಯಿಂದ ಹತ್ತಿ ಎಕ್ಕುವ ಯಂತ್ರವನ್ನು ತಯಾರು ಮಾಡುತ್ತಾರೆ. ಆ ಯಂತ್ರದಿಂದ ಹತ್ತಿಯನ್ನು ಎಕ್ಕುವಾಗ ಆ ಹುರಿ ಯಾವಾಗ 'ತುಹ್ಹೂ! ತುಹ್ಹೂ!' ಅಂದರೆ, 'ನೀನು! ನೀನು!' ಎಂದು ಹೇಳಲು ಆರಂಭಿಸುವುದೊ ಆಗ ಅದಕ್ಕೆ ಬಿಡುಗಡೆ. ಬಳಿಕ ಅದು ಎಂದಿಗೂ 'ಹಂಬಾ! ಹಂಬಾ!' ಎಂದು ಹೇಳದು. 'ನೀನು! ನೀನು!' ಎಂದೇ ಹೇಳುತ್ತದೆ. ಅಂದರೆ, 'ಹೇ ಭಗವಂತ, ನೀನು ಕರ್ತ, ನಾನು ಅಕರ್ತ; ನೀನು ಯಂತ್ರಿ, ನಾನು ಯಂತ್ರ; ಸಮಸ್ತವೂ ನೀನೇ' ಅಂತ.

ಇವು ಮೂರು ಪದಗಳು —'ಗುರು', 'ತಂದೆ', 'ಕರ್ತ' — ಮಾತು ಎತ್ತಿದರೇ ನನಗೆ ಮುಳ್ಳು ಚುಚ್ಚಿದ ಹಾಗೆ ಅನುಭವ. ನಾನು ಆತನ ಮಗು, ಎಂದೆಂದಿಗೂ ಬಾಲಕನೆ. ಹೀಗಿರುವಲ್ಲಿ ನಾನು ಯಾವ ರೀತಿಯಾಗಿ ತಂದೆ ಆಗಬಲ್ಲೆ? ಭಗವಂತನೇ ಕರ್ತ, ನಾನು ಅಕರ್ತ; ಆತ ಯಂತ್ರಿ, ನಾನು ಯಂತ್ರ ಮಾತ್ರ.

ಯಾರಾದರೂ ನನ್ನನ್ನು, 'ಗುರು!' ಎಂದು ಸಂಬೋಧಿಸಿದರೆ ನಾನು ಉತ್ತರವೀಯುತ್ತೇನೆ, 'ತಿಳಿಗೇಡಿ, ದೂರ ಸರಿ! ಹೇಗೆ ನಾನು ಗುರು?' ಎಂದು. ಸಚ್ಚಿದಾನಂದನೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಗುರು ಎಂಬುವರೇ ಇಲ್ಲ. ಆತನ ವಿನಾ ಬೇರೆ ಯಾವ ಆಸರೆಯೂ ಇಲ್ಲ, ಕೇವಲ ಆತ ಮಾತ್ರನೇ ಈ ಭವಸಾಗರದ ಅಂಬಿಗ.

ಆಚಾರ್ಯಗಿರಿ ಕೆಲಸ ಬಹಳ ಕಠಿಣವಾದದ್ದು. ಅದರಿಂದ ಆಚಾರ್ಯನಿಗೇ ಹಾನಿಯುಂಟಾಗುತ್ತದೆ. ಒಂದು ಹತ್ತಾರು ಜನ ಗೌರವಿಸುವುದನ್ನು ನೋಡಿ, ಕಾಲಿನ ಮೇಲೆ ಕಾಲು ಹಾಕಿಕೊಂಡು ಹೇಳುತ್ತಾನೆ, 'ನಾನು ಉಪದೇಶ ಮಾಡುತ್ತೇನೆ, ನೀವೆಲ್ಲ ಕೇಳಿ' ಎಂದು. ಈ ಭಾವ ಬಹಳ ಕೆಟ್ಟದ್ದು. ಆತನಿಗೆ ನಿಜವಾಗಿ ದೊರೆಯುವುದು ಒಂದಷ್ಟು ಗೌರವ ಮಾತ್ರ! ಅತಿ ಹೆಚ್ಚೆಂದರೆ ಜನ ಹೇಳುತ್ತಾರೆ, 'ಆಹ! ವಿಜಯಬಾಬು ಬಹಳ ಚೆನ್ನಾಗಿ ಮಾತನಾಡುತ್ತಾನೆ; ಒಳ್ಳೆ ಜ್ಞಾನಿ' ಅಂತ. 'ನಾನು ಉಪದೇಶ ಮಾಡುತ್ತೇನೆ' ಎಂಬ ಭಾವನೆ ನಿನಗೆ ಎಂದಿಗೂ ಬಾರದೆ ಇರಲಿ. ನಾನು 'ಹೇ ತಾಯಿ! ನೀನು ಯಂತ್ರಿ, ನಾನು ಯಂತ್ರ; ನೀನು ಮಾಡಿಸಿದಂತೆ ಮಾಡುತ್ತೇನೆ, ನುಡಿಸಿದಂತೆ ನುಡಿಯುತ್ತೇನೆ' ಎಂದು ತಾಯಿಗೆ ಹೇಳುತ್ತೇನೆ.

ಎಲ್ಲಿಯವರೆಗೆ 'ನಾನು', 'ನೀನು' ಎಂಬ ಭಾವನೆ ಇರುವುದೊ, ಎಲ್ಲಿಯವರೆಗೆ 'ನಾನು ಪ್ರಾರ್ಥನೆ ಅಥವಾ ಧ್ಯಾನ ಮಾಡುತ್ತೇನೆ' ಎಂಬ ಭಾವನೆ ಇರುವುದೊ, ಅಲ್ಲಿಯವರೆಗೆ 'ನೀನು (ಭಗವಂತ) ಪ್ರಾರ್ಥನೆ ಕೇಳುತ್ತೀಯೆ ಎಂಬ ಭಾವನೆಯೂ ಇರುತ್ತದೆ, ಭಗವಂತ ಒಬ್ಬ ವ್ಯಕ್ತಿ ಎಂಬ ಬೋಧೆಯಿರುತ್ತದೆ, 'ನೀನು ಪ್ರಭು, ನಾನು ದಾಸ, ನೀನು ಪೂರ್ಣ, ನಾನು ಅಂಶ; ನೀನು ತಾಯಿ, ನಾನು ಮಗು' ಎಂಬ ಬೋಧೆ ಇರುತ್ತದೆ. ಆಗ ಈ ಭೇದಬೋಧೆ — ನಾನು ಪ್ರತ್ಯೇಕ ನೀನು ಪ್ರತ್ಯೇಕ ಎಂಬುದು — ಇದ್ದೇ ಇರುತ್ತದೆ. ಈ ಭೇದ ಬೋಧೆಯನ್ನು ಆತನೇ ನಿಮ್ಮ ಕೈಯಿಂದ ಮಾಡಿಸುತ್ತಾನೆ. ಅದಕ್ಕಾಗಿಯೆ ಗಂಡಸು ಹೆಂಗಸು, ಬೆಳಕು ಕತ್ತಲೆ, ಇವೇ ಮೊದಲಾದವುಗಳ ಬೋಧೆ ಆಗುತ್ತಿರುವುದು. ಎಲ್ಲಿಯವರೆಗೆ ಈ ಭೇದ ಬೋಧೆ ಇರುವುದೊ, ಅಲ್ಲಿಯವರೆಗೆ ಶಕ್ತಿಯನ್ನು (ಸಾಕಾರವನ್ನು) ಒಪ್ಪಬೇಕು. ಆತನು ನಮ್ಮ ಅಂತರ್ಯದಲ್ಲೇ 'ನಾನು' ಎಂಬುದನ್ನು ಇಟ್ಟುಬಿಟ್ಟಿದ್ದಾನೆ. ಎಷ್ಟೇ ವಿಚಾರ ಮಾಡಿದರೂ, ಸಾವಿರ ಬಾರಿ — 'ನಾನು' ಎಂಬುದು ಹೋಗದು. ಅದು ಹೋಗುವ ತನಕ ಆತ ವ್ಯಕ್ತಿರೂಪದಿಂದ ತೋರಿಸಿಕೊಳ್ಳುತ್ತಾನೆ.

ಅದಕ್ಕಾಗಿಯೆ ಎಲ್ಲಿಯವರೆಗೆ 'ನಾನು' ಎಂಬುದು ಇರುವುದೊ, ಭೇದಬುದ್ಧಿ ಇರುವುದೊ, — ಬ್ರಹ್ಮನನ್ನು ನಿರ್ಗುಣ ಎಂದು ಹೇಳುವ ಹಾಗಿಲ್ಲ. ಅದು ಇರುವವರೆಗೆ ಸಗುಣಬ್ರಹ್ಮನನ್ನು ಒಪ್ಪಿಕೊಳ್ಳಬೇಕು, ಈ ಸಗುಣಬ್ರಹ್ಮನನ್ನೇ ವೇದ ಪುರಾಣ ಶಾಸ್ತ್ರಗಳು, 'ಕಾಳಿ ಅಥವಾ ಆದ್ಯಾಶಕ್ತಿ' ಎಂದು ಕರೆದಿವೆ.

ಶ್ರೀರಾಮಕೃಷ್ಣ ವಚನವೇದದಿಂದ

ಮಾತಿನ ಮಹತ್ವ



ಜೆ. ಶಶಿಧರ್

ಲೌಕಿಕ ಜೀವನದಲ್ಲಿ ಮಾತಿಗಿರುವ ಮಹತ್ವ ಸರ್ವವಿದಿತವಾಗಿದೆ. ಆದರೂ ಮಾತಿನ ಪರಿಣಾಮ ವ್ಯಕ್ತಿಯ ಏರಿಳಿತಗಳನ್ನು ನಿರ್ಧರಿಸುವುದರಲ್ಲಿ ಪ್ರಧಾನ ಪಾತ್ರ ವಹಿಸುತ್ತದೆ. ಜೀವನದ ಪಕ್ವತೆಗೆ ಒಂದು ಉತ್ತಮ ಕೈಗನ್ನಡಿ ಮಾತು. ಈ ವಿಷಯವನ್ನು ಕುರಿತು ವಿವರಿಸಿರುವ ಲೇಖಕರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಹಲವು ಪತ್ರಿಕೆಗಳಲ್ಲಿ ಅವರ ಲೇಖನಗಳು ಪ್ರಕಟವಾಗಿವೆ.

‘‘**ಜೀ**ವನದಲ್ಲಿ ಸುಖ-ದುಃಖ, ಲಾಭ-ನಷ್ಟ, ಮಾನ-ಅವಮಾನ ಇವೆಲ್ಲಾ ಜೀವನ ಯಾತ್ರೆ ಮುಗಿಯುವವರೆಗೂ ಇರುವಂಥದ್ದು. ಇದನ್ನು ಸಮಭಾವದಿಂದ ಸ್ವೀಕರಿಸಲು ಪ್ರಯತ್ನಿಸು. ಆದರೆ ಅದು ಸುಲಭದ ಮಾತಲ್ಲ , ಕಷ್ಟಸಾಧ್ಯ. ಭಗವಂತನ ವಿಚಾರವನ್ನು ಬಿಟ್ಟು ಯಾವುದೇ ವಿಚಾರವನ್ನು ಅತಿಯಾಗಿ ಮನಸ್ಸಿಗೆ ತೆಗೆದುಕೊಳ್ಳಬೇಡ. ಏಕೆಂದರೆ ಇವೆಲ್ಲಾ ಯಾವುದೂ ಶಾಶ್ವತವಲ್ಲ. ಎಂದೆಂದೂ ಶಾಶ್ವತವಾಗಿ ಇರುವ ಭಗವಂತನನ್ನು ದೃಢವಾಗಿ ನಂಬು. ನಿನ್ನ ಪಾಲಿಗೆ ಬಂದ ಕೆಲಸವನ್ನು ಸಂತೋಷದಿಂದ ಮಾಡು. ಸದಾಕಾಲ ಸನ್ಮಾರ್ಗದಲ್ಲಿ ಜೀವನ ನಡೆಸಲು ದೃಢವಾದ ಮನಸ್ಸನ್ನು ನೀಡೆಂದು ದೇವರನ್ನು ಪ್ರಾರ್ಥಿಸು. ನೀನಾಡುವ ಮಾತಿನ ಮೇಲೆ ಹಿಡಿತವಿರಲಿ. ಯಾರಿಗೂ ನೋವಾಗದಂತೆ ಮಾತನಾಡಲು ಬೇಕಾದ ಶಕ್ತಿಯನ್ನು ಪಡೆ. ಹಿಡಿತವಿಲ್ಲದ ಮಾತಿನಿಂದಲೇ ಸಂಬಂಧಗಳು ಹಾಳಾಗುವುವು. ‘ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ’ ಎಂಬ ಗಾದೆಯನ್ನು ಮಾತನಾಡುವ ಮೊದಲು ಒಮ್ಮೆ ಸ್ಮರಿಸಿ, ನಂತರ ಮಾತನಾಡು. ಇದರಿಂದ ಅನೇಕ ಅನಾಹುತಗಳು ತಪ್ಪುವುದಂತೂ ಖಂಡಿತ’’ ಎಂದು ಎಚ್ಚರಿಸಿ ಉಪದೇಶಿಸಿದವರು ರಾಮಕೃಷ್ಣ ಮಠದ ಹಿರಿಯ ಸಂನ್ಯಾಸಿಗಳು. ಇಂದು ಅವರು ನಮ್ಮೊಂದಿಗೆ ಇರದಿದ್ದರೂ ಅವರು ಅಂದು ನೀಡಿದ ಆದೇಶ ಇಂದಿಗೂ ಪ್ರಸ್ತುತ.

ಒಂದು ಘಟನೆಯಿಂದ ಮಾನಸಿಕವಾಗಿ ಬಹಳ ನೊಂದು, ಮೇಲಧಿಕಾರಿಯೊಂದಿಗೆ ಯಾವುದೋ ಒಂದು ಕ್ಷುಲ್ಲಕ ಕಾರಣಕ್ಕಾಗಿ ಹಿಡಿತವಿಲ್ಲದೆ ಮಾತನಾಡಿ, ಅವರ ಸಂಬಂಧ ಕಳೆದುಕೊಂಡವನಿಗೆ, ಆ ಅಧಿಕಾರಿ ಕೂಡ ತಾನೇನೂ ಕಡಿಮೆ ಇಲ್ಲವೆಂಬಂತೆ ವರ್ತಿಸಿದ್ದರು. ಅದನ್ನು ಸರಿಪಡಿಸುವ ವಿಧಾನ ತಿಳಿಯದೆ ಮನನೊಂದ ವ್ಯಕ್ತಿ ಈ ವಿಚಾರವನ್ನು ಒಬ್ಬರು ಸ್ವಾಮೀಜಿಯವರ ಬಳಿ ಹೇಳಿಕೊಂಡಾಗ, ಅವರು ನೀಡಿದ ಉಪದೇಶ ಮೇಲಿನದು. ಇದರ ಪ್ರಭಾವದಿಂದ ಆತನಿಗೆ ಇದುವರೆಗೂ ಯಾವುದೇ ಮಾನವ ಸಂಬಂಧ ಕಳೆದುಕೊಳ್ಳುವ ಪ್ರಸಂಗ ಎದುರಾಗಲಿಲ್ಲ. ಲೌಕಿಕಜೀವನದಲ್ಲಿ ಯಾರೇ ಆಗಲಿ, ಅನೇಕ ವಿಭಿನ್ನ ಮಾನಸಿಕ ಸ್ಥಿತಿಯುಳ್ಳ ಮನುಷ್ಯರ ಜೊತೆ ಸಂಪರ್ಕಕ್ಕೆ ಬರಬೇಕಾಗುತ್ತದೆ. ಸಮಾನ ಮನಸ್ಕರು ಬೆರಳೆಣಿಕೆಯಷ್ಟಿದ್ದರೂ, ಅವರ ಸಹವಾಸ ಬೇಸಿಗೆಯಲ್ಲಿ ತಂಗಾಳಿ ಬೀಸಿದಂತೆ. ಸಮಾನ ಮನಸ್ಕರು ಆಡುವ ಮಾತಿನಿಂದ ಮನಸ್ಸಿಗೆ ಸಮಾಧಾನವಾಗುವುದಂತೂ ಖಂಡಿತ. ಆದರೆ ಮಿಕ್ಕವರ ಸಹವಾಸ ಇದಕ್ಕೆ ತದ್ವಿರುದ್ಧ. ಆದರೆ ಇದರಿಂದ ಮನಸ್ಸಿಗೆ ಪದೇ ಪದೇ ಬೇಸರವಾಗುತ್ತಿದ್ದರೂ ಅದನ್ನು ಸಹಿಸದೆ ಬೇರೆ ದಾರಿಯಿಲ್ಲ. ಒಂದೇ ಮಾತಿನಲ್ಲಿ ಕಡ್ಡಿ ಮುರಿದಂತೆ ಮಾತನಾಡಿ, ಅಂಥವರ ಸಂಬಂಧ ಕಡಿದುಕೊಳ್ಳಬಹುದು. ಆದರೆ ಇದನ್ನು ಸಹಿಸಿಕೊಂಡು ಅಂಥವರಿಂದ ದೂರ ಇರುವುದೇ ಲೇಸು. ಆದರೆ ಇದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಲಂಗುಲಗಾಮಿಲ್ಲದೆ ಮಾತನಾಡುವ ಪ್ರವೃತ್ತಿಯನ್ನು ಹೊಂದಿರುವ ವ್ಯಕ್ತಿಗಳಿಗೆ ಯಾವುದೇ ಪ್ರತಿಕ್ರಿಯೆ ತೋರದೆ, ಸಹಿಸುವ ಪ್ರವೃತ್ತಿ ಬೆಳೆಸಿಕೊಂಡರೆ ಇದರಿಂದ ಒಂದು ವಿಶೇಷ ಶಕ್ತಿ ಜಾಗೃತವಾಗುವುದರಲ್ಲಿ ಸಂದೇಹವಿಲ್ಲ. ಸಹನೆ

ಒಂದು ತಪಸ್ಸು. ಇದನ್ನು ಅನುಷ್ಠಾನಕ್ಕೆ ತರಲು ಪ್ರಾರಂಭಿಸಿದಾಗ ಬರುವ ಅಡೆತಡೆಗಳಿಗೆ ಲೆಕ್ಕವಿಲ್ಲ.

ಸಾಮಾನ್ಯವಾಗಿ ಹಿಡಿತವಿಲ್ಲದೆ ಮಾತನಾಡುವ ಪ್ರವೃತ್ತಿಗೆ ಕಾರಣಗಳು ಅನೇಕ. ಅತಿಯಾದ ಆಸೆ, ಕೋಪ, ತನಗೆ ದೊರಕ ಬೇಕಾದ್ದು ಇತರರಿಗೆ ದೊರಕುವುದು, ಶಾರೀರಿಕ ಮತ್ತು ಮಾನಸಿಕ ದುರ್ಬಲತೆ, ಮತ್ತು ಹಿಂದೆ ಅನೇಕ ಜನ್ಮಗಳಲ್ಲಿ ಅನುಭವಿಸಿದ ತೊಂದರೆಗಳ ಸಂಸ್ಕಾರ ಮತ್ತು ಇನ್ನೂ ಅನೇಕ ಬಗೆಯ ಕಾರಣ ಗಳು ಇದಕ್ಕೆ ಪೋಷಣೆ ನೀಡುತ್ತವೆ. ನಮ್ಮ ಪುರಾಣಗಳ ಪ್ರಕಾರ ೮೪ ಲಕ್ಷ ಜೀವರಾಶಿಗಳ ಜನ್ಮವಾದ ಮೇಲೆ ಈ ಪವಿತ್ರ ಮಾನವ ಜನ್ಮ ಲಭಿಸುವುದು.

ಎಲ್ಲಾ ಜೀವರಾಶಿಗಳಿಗೂ ತನ್ನದೇ ಆದ ರೀತಿಯಲ್ಲಿ ಭಾವನೆ ಗಳನ್ನು ವ್ಯಕ್ತಪಡಿಸುವ ರೀತಿಯನ್ನು ಭಗವಂತ ಕರುಣಿಸಿದ್ದಾನೆ. ಅದರೆ ಮಾನವನಿಗೆ ಮಾತ್ರ ಅಕ್ಷರಗಳ ಸಹಾಯದಿಂದ ಪದ ಗಳನ್ನು ಜೋಡಿಸಿ ಮಾತನಾಡುವ ಶಕ್ತಿ ನೀಡಿರುವುದು ನಿಜಕ್ಕೂ ಪರಮಾಶ್ಚರ್ಯ. ಇದು ಭಗವಂತನ ವಿಶೇಷ ಕೃಪೆಯೆಂದೇ ನಿಸ್ಸಂದೇಹವಾಗಿ ಹೇಳಬಹುದು.

ಈ ಜಗತ್ತಿನಲ್ಲಿ ಪ್ರತಿಯೊಂದು ಜೀವಿಯೂ ದೈವಾಂಶ ಸಂಭೂತವೇ ಆಗಿದ್ದರೂ, ಈ ಅಸಮಾನತೆಯ ವೈಭವದಿಂದ ಶಾರೀರಿಕವಾಗಿ ಮತ್ತು ಮಾನಸಿಕವಾಗಿ ಎಲ್ಲವೂ ಭಿನ್ನ. ಪ್ರತಿ ಯೊಂದು ಜೀವರಾಶಿಗೂ ಇಂದ್ರಿಯಗಳ ಮೂಲಕ ತನ್ನ ಆಸೆ ಯನ್ನು ತೀರಿಸಿಕೊಳ್ಳುವ ವ್ಯವಸ್ಥೆ ಪ್ರಕೃತಿಯಲ್ಲಿದೆ. ಇದರ ಪ್ರಭಾವದಿಂದ ಮತ್ತೆ ಮತ್ತೆ ಜನ್ಮವೆತ್ತಿ ಪಡುವ ಪಾಡು ವಿವರಿಸ ಲಸಾಧ್ಯ. ಆದರೆ ಮಾನವನಿಗೆ ಇಂದ್ರಿಯಗಳಾದ ಕಣ್ಣು, ಕಿವಿ, ಮೂಗು, ಚರ್ಮ ಇವುಗಳಿಗೆ ಒಂದೇ ಒಂದು ಗುಣಗಳನ್ನು ನೀಡಿ, ನಾಲಿಗೆಗೆ ಮಾತ್ರ ರುಚಿಯ ಜೊತೆಗೆ ಮಾತನಾಡುವ ಶಕ್ತಿ ಯನ್ನು ಕರುಣಿಸಿರುವುದು ಊಹೆಗೂ ನಿಲುಕದ್ದು. ಕೆಲವರಿಗೆ ಅವರ ಪೂರ್ವಜನ್ಮದ ಕರ್ಮದ ಫಲದಿಂದಲೋ ಅಥವಾ ದೈಹಿಕ ಕಾರಣಗಳಿಂದಲೋ ಮಾತನಾಡುವ ಶಕ್ತಿ ಇರುವುದಿಲ್ಲ.

ಈ ಅದ್ಭುತವಾದ ಮಾತನಾಡುವ ಶಕ್ತಿಯ ವಿಚಾರವಾಗಿ ಎಷ್ಟು ಆಲೋಚಿಸಿದರೂ ಸಾಲದು. ಹುಟ್ಟಿದ ಮಗು ಕ್ರಮೇಣ ಮಾತನಾಡುವ ಈ ವ್ಯವಸ್ಥೆ ಎಷ್ಟು ಅದ್ಭುತ! ನಾವಾಡುವ ಮಾತನ್ನು ಅದು ನಿಧಾನವಾಗಿ ಗ್ರಹಿಸಿ, ಪ್ರತ್ಯುತ್ತರ ನೀಡುವ ಶಕ್ತಿ ಯಾವುದು? ಭಾಷೆ ಬೇರೆ, ಅಕ್ಷರಗಳು ಬೇರೆ ಆದರೂ ಅದು ಬೆಳೆಯುವ ಪರಿಸರದ ಪ್ರಭಾವದಿಂದ ಅದು ಕಲಿತು ಭಾವನೆ ಗಳನ್ನು ಮಾತಿನ ಮೂಲಕ ವ್ಯಕ್ತಪಡಿಸುವ ರೀತಿ ಅತ್ಯಂತ ವಿಶೇಷ ವಾದುದು.

ಇಂತಹ ಅದ್ಭುತವಾದ ಮಾತಿನ ಶಕ್ತಿಯ ಮೂಲಕ ನಾವು ಶಾಂತಿಯ ವಾತಾವರಣವನ್ನು ನಿರ್ಮಾಣ ಮಾಡಲು ಸಹಕರಿಸದೆ ಇದ್ದರೆ ಮುಂದಿನ ಜನ್ಮಗಳಲ್ಲಿ ಮಾತಿಲ್ಲದೆ ಸನ್ನೆಯ ಮೂಲಕ ಭಾವನೆಗಳನ್ನು ತಿಳಿಸುವ ಸ್ಥಿತಿ ತಲುಪಿದರೆ ಆಶ್ಚರ್ಯವೇನಿಲ್ಲ. ಕರ್ಮಕ್ಕೆ ತಕ್ಕಂತೆ ರೋಗ, ರೋಗಕ್ಕೆ ತಕ್ಕಂತೆ ಅನುಭವ.

''ಮಾತೇ ಮುತ್ತು, ಮಾತೇ ಮೃತ್ಯು'' ಎಂಬ ಗಾದೆ ಮನನ ಯೋಗ್ಯ. ಆದುದರಿಂದಲೇ ಅನೇಕ ಸಾಧು ಸಂತರು, ಜ್ಞಾನಿಗಳು ಹೆಚ್ಚು ಮಾತನಾಡದೆ ಯಾರಿಗೆ ಎಷ್ಟು ಆವಶ್ಯಕತೆಯೋ ಅಷ್ಟನ್ನು ಮಾತ್ರ ಹೇಳಿ ಕಳಿಸುವ ಪದ್ಧತಿಯನ್ನು ರೂಢಿಸಿಕೊಂಡಿರುತ್ತಾರೆ. ಇದರಿಂದ ಸಮಯವೂ ನಷ್ಟವಾಗದು; ಅತಿಯಾದ ಮಾತಿನಿಂದ ಆಗುವ ಅನಾಹುತವೂ ತಪ್ಪುತ್ತದೆ. ಅವರ ಮೇಲಿರುವ ಗೌರವವೂ ಹೆಚ್ಚುತ್ತದೆ.

ನಾವಿರುವ ಪರಿಸರ ಹಾಳಾಗಲು ಅನೇಕ ಕಾರಣಗಳಲ್ಲಿ ಹಿಡಿತವಿಲ್ಲದ ಮಾತೂ ಒಂದು. ಇದರಿಂದ ಸಂಬಂಧಗಳು ಹಾಳಾ ಗುವುದಲ್ಲದೆ ದ್ವೇಷಭಾವನೆ ಚಿಗುರುವುದರಲ್ಲಿ ಸಂದೇಹವಿಲ್ಲ. ''ಮಾತು ಲೋಕಾಭಿರಾಮವಾಗಿದ್ದರೆ ಅದು ಪ್ರಕೃತಿ; ಮಾತು ಅಶ್ಲೀಲವಾಗಿದ್ದರೆ ಅದು ವಿಕೃತಿ. ಮಾತು ಮನವನ್ನು ಅರಳಿಸು ವಂತಿದ್ದರೆ ಅದು ಸಂಸ್ಕೃತಿ'' ಎಂದು ರಾಮಕೃಷ್ಣಮಠದ ಹಿರಿಯ ಸಂನ್ಯಾಸಿಯೊಬ್ಬರು ಹೇಳಿದ್ದಾರೆ. ಇದು ನಿಜಕ್ಕೂ ಮನಸ್ಸನ್ನು ಮುಟ್ಟುವ ಮಾತು. ಬಸವಣ್ಣನವರ 'ಮೃದು ವಚನವೇ ಸಕಲ ಜಪಂಗಳಯ್ಯ' ಎಂಬುದು ಎಲ್ಲರೂ ಒಪ್ಪುವಂತಹ ಮಾತು.

ಒಬ್ಬ ಅವಿದ್ಯಾವಂತ ಯುವಕ ಅನೇಕ ವರ್ಷಗಳ ನಂತರ ತನ್ನ ಪರಿಚಯದವನ ಮೇಲೆ ದಾವೆ ಹೂಡಿದ. ನ್ಯಾಯಾಧೀಶ ಇವನನ್ನು ಕೇಳಿದ, ''ನಿನಗೆ ಈ ರೀತಿ ಹಂಗಿಸಿದವನಿಗೆ ನೀನು ಆವಾಗಲೇ ಯಾಕೆ ದಾವೆ ಹಾಕಲಿಲ್ಲ?'' ಎಂದು. ಅದಕ್ಕೆ ಉತ್ತರ ವಾಗಿ ಯುವಕ ಹೇಳಿದ, ''ನಾನು ಈಗಲೇ ಆ ಪದದ ಅರ್ಥ ಅರಿತಿದ್ದು'' ಎಂದು. ಯಾವಾಗಲೋ ಹೇಳಿದ ಒಂದು ಕೆಟ್ಟ ಪದದ ಪ್ರಭಾವದಿಂದ ಅನೇಕ ವರ್ಷಗಳ ನಂತರ ಶಿಕ್ಷೆಗೆ ಗುರಿ ಯಾಗಬೇಕಾಯಿತು. ಅದೇ ರೀತಿ ಒಳ್ಳೆಯ ಮಾತೂ ಅಷ್ಟೆ. 'ಮಾತಿನಿಂ ನಗೆ ನುಡಿಯು, ಮಾತಿನಿಂ ಹಗೆ ಹೊಲೆಯು, ಲೋಕಕ್ಕೆ ಮಾತೇ ಮಾಣಿಕ್ಯ — ಸರ್ವಜ್ಞ' ಎಂಬ ಸರ್ವಜ್ಞನ ನುಡಿ ಸದಾ ಕಾಲ ಮನನಯೋಗ್ಯ.

ಸಂತ ಕಬೀರದಾಸರು ತಮ್ಮ ದೋಹೆಯಲ್ಲಿ ಮಾತಿನ ಮಹತ್ವ ವನ್ನು ಈ ರೀತಿ ವಿವರಿಸಿದ್ದಾರೆ: ''ಕಾಗೆಯ ಕಂಡರೆ ಓಡಿಸುವರು, ಕೋಗಿಲೆಯನು ನೀ ನೋಡು, ಮಧುರ ನಿನಾದವ ಕೇಳಿಸುತಲಿ ಜಗವ ಗೆದ್ದಿತಲ್ಲ, ಕಬೀರಾ'' ಎಂದು. ಕಾಗೆ ತನ್ನ ವಿಕಾರ ಧ್ವನಿ ಯಿಂದ ಕೂಗುತ್ತಿದ್ದರೆ ಜನ ಅದನ್ನು ಸಹಿಸಲು ಸಿದ್ಧರಿಲ್ಲ. ಅದನ್ನು ಓಡಿಸುತ್ತಾರೆ. ಅದು ಶನಿದೇವರ ವಾಹನವಾಗಿದ್ದರೂ, ಅದು ರಸ್ತೆಯಲ್ಲಿ ಬಿದ್ದಿರುವ ಗಲೀಜನ್ನು ತಿಂದು ಶುಚಿಗೊಳಿಸಿದರೂ ಅದರ ವಿಕಾರ ಧ್ವನಿಯಿಂದ ಅದನ್ನು ಯಾರೂ ಹತ್ತಿರ ಸೇರಿಸುವು ದಿಲ್ಲ. ಇಂದು ಅನೇಕರು ಒಳ್ಳೆಯ ಕೆಲಸಗಳನ್ನು ಮಾಡಿಯೂ ಅವರ ಹಿಡಿತವಿಲ್ಲದ ಮಾತಿನ ಪ್ರಭಾವದಿಂದ ಸುತ್ತಮುತ್ತಲಿನ

ವಾತಾವರಣವನ್ನು ಹಾಳು ಮಾಡಿ, ಇತರರು ಮಾನಸಿಕವಾಗಿ ನೊಂದು ಬೇಯುವಂತೆ ಮಾಡುತ್ತಾರೆ. ಇದರಿಂದ ಏನೂ ಪ್ರಯೋಜನವಿಲ್ಲ. ಒಳ್ಳೆಯ ಕೆಲಸವನ್ನು ಮಾಡಬೇಕು, ಒಳ್ಳೆಯ ಮಾತನ್ನೂ ಆಡಬೇಕು. ಆಗಲೇ ಆ ಕರ್ಮಕ್ಕೆ ಬೆಲೆ ಎಂಬುದು ತಾತ್ಪರ್ಯ. ಆದರೆ ಕೋಗಿಲೆಯ ವಿಚಾರವೇ ಬೇರೆ. ಅದು ಸುಮ್ಮನೆ ಕೂಗುತ್ತಿದ್ದರೂ ಅದನ್ನು ಯಾರೂ ಓಡಿಸುವ ಗೋಜಿಗೆ ಹೋಗುವುದಿಲ್ಲ. ಅದರ ಧ್ವನಿ ಅಷ್ಟು ಮಧುರ. ಅದೇ ರೀತಿ ಸುಸಂಸ್ಕೃತವಾಗಿ ಮಾತನಾಡುವ, ಇತರರ ಭಾವನೆಗಳಿಗೆ ಒಳ್ಳೆಯ ಮಾತಿನ ಮೂಲಕ ಸ್ಪಂದಿಸಿ, ಅವರನ್ನು ಸ್ವಲ್ಪ ಕಾಲವಾದರೂ ಸಂತೋಷದಲ್ಲಿಡಲು ಸಹಾಯಕವಾಗುವ ವ್ಯಕ್ತಿಗಳನ್ನು ಕೋಗಿಲೆಗೆ ಹೋಲಿಸಲಾಗಿದೆ. ನಮ್ಮಲ್ಲಿರುವ ಸದ್ಭಾವನೆಗಳನ್ನು ಇತರರ ಮನಸ್ಸಿಗೆ ಹಿತವಾಗುವ ರೀತಿಯಲ್ಲಿ ಮಾತನಾಡುವ ಕಲೆಯನ್ನು ಆ ಗುರುವಿನ ರೂಪದ ಭಗವಂತನೇ ಕರುಣಿಸಬೇಕು.

ನಮ್ಮನ್ನಾಳುವ ಸರ್ಕಾರ ಮಾತಿನ ಮಹತ್ವವನ್ನು ಅರಿತು ಸುಸಂಸ್ಕೃತವಾಗಿ ಮಾತನಾಡುವ ರೀತಿಯನ್ನು ಶಿಕ್ಷಣದಲ್ಲಿ ಪ್ರಾಥಮಿಕ ಹಂತದಿಂದಲೇ ನೀಡಬೇಕು. ಇಂದು ಸಮಾಜದಲ್ಲಿ ಮಾನವ ಸಂಬಂಧಗಳು ಹಾಳಾಗಲು ಅನೇಕ ಕಾರಣಗಳಿದ್ದರೂ, ಅವುಗಳಲ್ಲಿ ಹಿಡಿತವಿಲ್ಲದೆ ಮಾತನಾಡುವ ಪ್ರವೃತ್ತಿಯ ಕೊಡುಗೆಯೇ ಹೆಚ್ಚೆಂದು ಹೇಳಬಹುದು. ಇಂದು ಅನೇಕ ಸಂಸಾರಗಳಲ್ಲಿ ದ್ವೇಷಭಾವನೆ ಮೂಡಿ ಒಬ್ಬರನ್ನೊಬ್ಬರು ಕಂಡರೆ ಮಾತನಾಡಿಸದೆ ಇರುವ ಪರಿಸ್ಥಿತಿ ಇದೆ. ''ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ'' ಎಂಬ ಗಾದೆ ಮಾತು ಸದಾ ಮನನ ಯೋಗ್ಯ. ಇತರರ ದೋಷಗಳನ್ನು ಎತ್ತಿ ತೋರಿಸಿ ತಾವು ಮಾತ್ರ ಪರಿಶುದ್ಧರೆಂಬಂತೆ ಪ್ರತಿಕ್ರಿಯಿಸುವ ವ್ಯಕ್ತಿಗಳ ಸಂಪರ್ಕಕ್ಕೆ ಬಂದವರು ಪಡುವ ಪಾಡನ್ನು ಎಲ್ಲೆಡೆ ನೋಡುತ್ತೇವೆ. ವಿಧಿಯಿಲ್ಲದೆ ಇಂಥವರ ಸಹವಾಸಕ್ಕೆ ಸಿಕ್ಕಿ ನರಳುತ್ತಿರುವ, ಸಮಾಜಕ್ಕೆ ಹೆದರಿ ಸಹಿಸಿಕೊಂಡು ಸಂಸಾರ ನಡೆಸುತ್ತಿರುವ ಕುಟುಂಬಗಳು ಅನೇಕ. ಇದರಿಂದ ಮನೆ ಮಂದಿಯ ಶಾಂತಿ ಹಾಳಾಗುವುದು ಖಂಡಿತವಾದರೂ, ದೋಷ ನೋಡುವವರ ಜೀವನವೇ ಹಾಳಾಗುವುದು ಖಂಡಿತ. ಆದುದರಿಂದಲೇ ಶ್ರೀಮಾತೆ ಶಾರದಾದೇವಿಯವರು, ''ಶಾಂತಿ ಬೇಕಾದರೆ ಇತರರ ದೋಷಗಳನ್ನು ನೋಡದೆ, ನಿಮ್ಮ ದೋಷಗಳನ್ನು ನೋಡಿ ಸರಿಪಡಿಸಿಕೊಳ್ಳಿ'' ಎಂದು ಹೇಳಿರುವುದು.

ಮಾನವ ಸಂಘಜೀವಿ. ಅವನು ಎಷ್ಟೇ ಬಲಿಷ್ಠನಾದರೂ ಇತರರನ್ನು ಅವಲಂಬಿಸಲೇಬೇಕು. ಎಲ್ಲರಲ್ಲೂ ದೋಷ ನೋಡುತ್ತಾ, ಎಲ್ಲರನ್ನೂ ದ್ವೇಷಿಸುತ್ತಾ ಸಮಾಜದಲ್ಲಿ ಇರಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿಯುವುದು ಆವಶ್ಯಕ. ಈ ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ. ಒಳ್ಳೆಯ ಮಾತುಗಳಿಂದ ಇತರರ ದೋಷಗಳನ್ನು ಸರಿಪಡಿಸುವ ದೆಸೆಯಲ್ಲಿ ಶ್ರಮಿಸುವವರ ಸಂಖ್ಯೆ ಹೆಚ್ಚಾಗಬೇಕು. ಇದರಿಂದ ಶಾಂತಿಯ ವಾತಾವರಣದ ಜೊತೆಗೆ ಸಂಪರ್ಕಕ್ಕೆ ಬಂದವರ ಮನಸ್ಸು ಪ್ರಫುಲ್ಲವಾಗುತ್ತದೆ. ಉತ್ತಮ ಕಾರ್ಯಗಳು ನೆರವೇರಲು ಇದರಿಂದ ಸಾಧ್ಯವಾಗುತ್ತದೆ. ಆದ್ದರಿಂದ ಒಳ್ಳೆಯ ಮಾತುಗಳನ್ನೇ ಆಡೋಣ. ಇದಕ್ಕೆ ಬೇಕಾದ ಸ್ಫೂರ್ತಿಯನ್ನು ನೀಡಲು ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸೋಣ. ಸಕಾಲ ಬರುವವರೆಗೂ ಕಾಯೋಣ. ಇಲ್ಲದಿದ್ದರೆ ಮೌನವ್ರತ ಆಚರಿಸಿ, ಶಾಂತಿಗೆ ಭಂಗ ಬರದಂತೆ ಶ್ರಮಿಸೋಣ. ನಾವಾಡುವ ಮಾತಿನಿಂದ ಇತರರ ಮನಸ್ಸಿಗೆ ನೋವಾಗದಂತೆ ಎಚ್ಚರವಹಿಸೋಣ. ಇದೇ ಒಂದು ಬಗೆಯ ತಪಸ್ಸು.

ನಾವಾಡುವ ಸುಸಂಸ್ಕೃತ, ಪರಿಶುದ್ಧ ಮಾತುಗಳಿಂದ ಪರಿವರ್ತನೆ ಸಾಧ್ಯವಾಗುವುದು. ಅನೇಕ ಸಾಧುಸಂತರ ಅಮೃತವಾಣಿಯೇ ಇದಕ್ಕೆ ಉತ್ತಮ ಉದಾಹರಣೆ. ಸ್ವಾಮಿ ವಿವೇಕಾನಂದರಂತಹ ಅನೇಕ ಸಾಧು, ಸಂತರು ತಮ್ಮ ಅದ್ಭುತ ಮಾತಿನ ಪ್ರಭಾವದಿಂದ ಜಗತ್ತೇ ಬೆರಗಾಗುವಂತೆ ಮಾಡಿ ಅಮರರಾಗಿದ್ದಾರೆ. ಆಡುವ ಮಾತಿಗೂ, ಜೀವನಕ್ಕೂ ಯಾವುದೇ ವ್ಯತ್ಯಾಸವಿಲ್ಲದಿದ್ದಾಗ ಜನಸಾಮಾನ್ಯರಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ. ನಾವಾಡುವ ಮಾತು ಅದು ಒಳ್ಳೆಯದೇ ಆಗಿರಲಿ, ಕೆಟ್ಟದ್ದೇ ಆಗಿರಲಿ ಬಿಟ್ಟ ಬಾಣದಂತೆ ಅದು ತಲುಪಬೇಕಾದ ಗುರಿಯನ್ನು ಸೇರಿಯೇ ಸೇರುತ್ತದೆ. ಮಾತಿಗೆ ಅಷ್ಟು ಶಕ್ತಿಯಿದೆ.

ಇಂದು ವ್ಯಾವಹಾರಿಕ ಜೀವನಕ್ಕೆ ಬೇಕಾದ ಮಾತಿನ ಕಲೆಯನ್ನು ಕಲಿಸುವ ಅನೇಕ ಕೋರ್ಸುಗಳು ಇವೆ. ಇದರಿಂದ ಅನೇಕರು ಪ್ರಯೋಜನ ಪಡೆದು ಸಫಲರಾಗಿದ್ದಾರೆ. ಆದರೆ ಇಂತಹ ಕೋರ್ಸುಗಳಿಂದ ಹಣ ಗಳಿಸಬಹುದೇ ಹೊರತು ಉತ್ತಮ ಮಾನವ ಸಂಬಂಧವನ್ನಲ್ಲ ಎಂಬ ಸತ್ಯ ಅರಿವಾಗಲು ಬಹಳ ಸಮಯ ಹಿಡಿಯದು. ಯಾವುದೋ ಒಂದು ವಸ್ತುವನ್ನು ಮಾರಲು ಗ್ರಾಹಕರಿಗೆ ಮೋಡಿ ಮಾಡುವ ಮಾತನಾಡುವ ಕಲೆಯಿಂದ ಮಾನವ ಸಂಬಂಧ ಬಹಳ ದಿನ ಉಳಿಯದು. ವ್ಯವಹಾರ ಮುಗಿದ ಮೇಲೆ ಇವನ ದಾರಿ ಇವನಿಗೆ, ಅವನ ದಾರಿ ಅವನಿಗೆ.

ಆದರೆ ಪರಿಶುದ್ಧ ಜೀವನ ನಡೆಸಿದ ಅನೇಕ ಮಹಾಪುರುಷರು ಹೇಳಿದ ಕೆಲವೇ ನುಡಿಮುತ್ತುಗಳನ್ನು ಪದೇ ಪದೇ ಸ್ಮರಿಸಿ, ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಜನರು ಬೇಕಾದಷ್ಟಿದ್ದಾರೆ. ಶ್ರೀಮಾತೆ ಶಾರದಾದೇವಿಯವರು ವಿದ್ಯಾವಂತರಲ್ಲದಿದ್ದರೂ, ಅವರ ಪರಿಶುದ್ಧ ಜೀವನದಿಂದ ಪ್ರಭಾವ ಹೊಂದಿ ಇಂದು ಅನೇಕರು ಅವರ ಮಾತುಗಳನ್ನು ಅನುಸರಿಸಿ ಉತ್ತಮ ಜೀವನ ನಡೆಸುತ್ತಿದ್ದಾರೆ. ಅವರಾಡಿದ ಅನೇಕ ಉಪದೇಶಗಳಲ್ಲಿ ಒಂದು ಹೀಗಿದೆ:

''ಮಗು, ನಿನಗೆ ನಿಜಕ್ಕೂ ಮನಶ್ಶಾಂತಿ ಬೇಕಿದ್ದರೆ ಇತರರ ದೋಷಗಳನ್ನು ನೋಡಬೇಡ. ನಿನ್ನಲ್ಲಿರುವ ದೋಷಗಳನ್ನು ನೋಡಿಕೋ. ಇಲ್ಲಿ ಯಾರೂ ಪರಕೀಯರಲ್ಲ. ಎಲ್ಲರೂ ನಿನ್ನವರೆ.'' ಈ ಮಾತನ್ನು ಓದಿದ, ಅಥವಾ ಕೇಳಿದ ಯಾರೇ ಆಗಲಿ ತಮ್ಮ ಹೃದಯದಿಂದ ಅದನ್ನು ಸ್ವೀಕರಿಸಲೇಬೇಕಾಗುವುದು. ಇದೇ

ಪರಿವರ್ತನೆಗೆ ದಾರಿ. ಮೊದಲು ತಾವು ಅದನ್ನು ಆಚರಣೆಗೆ ತಂದು, ಅನಂತರ ಅದರ ಅನುಭವದೊಂದಿಗೆ ಇತರರಿಗೆ ಹೇಳಿದಾಗ ಅದರ ಪರಿಣಾಮ ವಿಶೇಷವಾಗಿರುತ್ತದೆ. ಬಸವಣ್ಣನವರ, 'ನುಡಿದರೆ ಮುತ್ತಿನ ಹಾರದಂತಿರಬೇಕು, ಮಾಣಿಕ್ಯದ ದೀಪ್ತಿಯಂತಿರಬೇಕು' ಎಂಬ ಮಾತು ಇದಕ್ಕೆ ಪೂರಕವಾಗಿದೆ.

ಇಂದು ಆಧುನಿಕ ವಿಜ್ಞಾನದ ಕೊಡುಗೆಯಿಂದ ಮನೆಯಲ್ಲೇ ಕುಳಿತು ಅನೇಕ ಸಾಧುಸಂತರ, ಗೃಹಸ್ಥರ ಮತ್ತು ಇನ್ನೂ ಅನೇಕ ಪಂಡಿತರ ಮಾತುಗಳನ್ನು ಕೇಳುವ ಸೌಭಾಗ್ಯ ಲಭಿಸಿದೆ. ಸುಮ್ಮನೆ ವೇಷ ಬದಲಿಸಿದ ಸಾಧುಸಂತರು, ಬೂಟಾಟಿಕೆಯ ಗೃಹಸ್ಥರು, ಪುಸ್ತಕ ಪಾಂಡಿತ್ಯದ ಪಂಡಿತರು ಅನೇಕರು ಮಾಧ್ಯಮದ ಮೂಲಕ ನುಡಿಮುತ್ತುಗಳನ್ನೇನೋ ಆಡುತ್ತಾರೆ. ಆದರೆ ಅದು ಎಷ್ಟು ಜನರ ಆಂತರಿಕ ಪರಿವರ್ತನೆಗೆ ಕಾರಣವಾಗುವುದು ಎಂಬುದು ಸಂದೇಹಾಸ್ಪದ. ಇದರಲ್ಲಿ ಯಾರು ಪರಿಶುದ್ಧ ಜೀವನ ನಡೆಸಿರುತ್ತಾರೋ ಅವರಾಡಿದ ಮಾತಿಗೆ ಬೆಲೆ ಬಂದೇ ಬರುತ್ತದೆ. ಅದನ್ನು ಜನ ಸ್ವೀಕರಿಸಿಯೇ ತೀರುತ್ತಾರೆ.

ಶ್ರೀರಾಮಕೃಷ್ಣ ಪರಮಹಂಸರು ಹೇಳುವಂತೆ, ''ಮೂಲಂಗಿ ತಿಂದವನು ತೇಗಿದಾಗ ಮೂಲಂಗಿಯ ವಾಸನೆಯೇ ಬರುವುದು.'' ಇದೇ ರೀತಿ ನಮ್ಮ ಮನಸ್ಸಿನ ಭಾವನೆಗಳು ಮಾತಿನ ಮೂಲಕ ಹೊರಹೊಮ್ಮುತ್ತವೆ. ಸಾಮಾನ್ಯವಾಗಿ ನಾವು ಇಲ್ಲಸಲ್ಲದ ವಿಚಾರಗಳ ಬಗ್ಗೆ ಮಾತನಾಡುತ್ತಾ ಸಮಯ ಕಳೆಯುವುದೇ ಹೆಚ್ಚು. ಮನಸ್ಸು ದುರ್ಭಾವನೆಗಳನ್ನು ತುಂಬಿಸಿಕೊಂಡರೆ ಅಂತಹ ಮಾತುಗಳೇ ಹೊರಬರುತ್ತವೆ. ಸದ್ಭಾವನೆಗಳನ್ನು ನಾವು ಮೈಗೂಡಿಸಿಕೊಂಡರೆ ಅದರಂತೆ ಮಾತಿನ ಶೈಲಿ ಸುಮಧುರವಾಗುವುದು. 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಎಂಬ ಗಾದೆ ಸದಾಕಾಲ ಚಿಂತನಯೋಗ್ಯ.

ಲೌಕಿಕ ಜೀವನದಲ್ಲಿ ಸಫಲರಾಗಲು ಬೇಕಾದ ಅನೇಕ ಕಾರಣಗಳಲ್ಲಿ ಮನಮುಟ್ಟುವಂತೆ ಮಾತನಾಡುವ ಕಲೆಯೂ ಒಂದು. ಇತರ ಮಾನವರಲ್ಲಿರುವ ಒಳ್ಳೆಯ ಗುಣಗಳನ್ನು ಗುರುತಿಸಿ ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಬೇಕು. ಇದರಿಂದ ಒಬ್ಬರ ಮೇಲೆ ಇನ್ನೊಬ್ಬರಿಗೆ ಒಳ್ಳೆಯ ಅಭಿಪ್ರಾಯ ಮೂಡಲು ಸಾಧ್ಯವಾಗಿ, ದ್ವೇಷಭಾವನೆ ದೂರವಾಗಲು ಕಾರಣವಾಗುತ್ತದೆ. ಮಾತು ಸಮಾಜದಲ್ಲಿ ವ್ಯಕ್ತಿಯ ಉನ್ನತಿಗೆ ಪೂರಕವಾಗಿ ಜೀವನ ಸುಗಮವಾಗುತ್ತದೆ.

ಇನ್ನು ಆಧ್ಯಾತ್ಮಿಕ ಜೀವನ ನಡೆಸಲು ಸಿದ್ಧರಾಗಿರುವವರು ಮಾತಿನ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕಾಗುತ್ತದೆ. ಮೊದಲನೆಯದಾಗಿ ಪರಿಶುದ್ಧ ಜೀವನ, ಸಾಧುಸಂಗ, ಶಾಸ್ತ್ರಾಧ್ಯಯನ, ಮತ್ತು ನುಡಿದಂತೆ ನಡೆಯುವ ಮಾನಸಿಕ ಸ್ಥಿತಿಯನ್ನು ದೃಢವಾಗಿ ಹೊಂದಿರಬೇಕಾಗುತ್ತದೆ. ತಮಾಷೆಗಾಗಿ ಕೂಡಾ ಅಸತ್ಯವನ್ನು ನುಡಿಯಬಾರದು. ಆದರೆ ಅಪ್ರಿಯವಾದ ಸತ್ಯವನ್ನಲ್ಲ. ಮಾತಿನಿಂದ ಮೊದಲನೆಯದಾಗಿ ನಮ್ಮ ಶಕ್ತಿ ಕುಂದುವುದು ಖಂಡಿತ — ಅದು ಒಳ್ಳೆಯ ಮಾತೇ ಆಗಿರಲಿ ಅಥವಾ ಇನ್ನಾವುದೇ ಲೌಕಿಕ ಸಂಬಂಧಿಯಾದ ಮಾತೇ ಆಗಿರಲಿ. ಆಧ್ಯಾತ್ಮಿಕ ಜೀವನ ನಡೆಸಲು ಮಾತಿನ ಮೇಲೆ ಸಂಯಮ ಇರಲೇಬೇಕು. ಆದುದರಿಂದಲೇ ಸಂತ ಕಬೀರದಾಸರು ತಮ್ಮ ಒಂದು ದೋಹೆಯಲ್ಲಿ ''ಮಾತಿನ ಗದ್ದಲ ನಿಲ್ಲಿಸಿ, ಸ್ಮರಣೆಯ ಸುಖದಲಿ ಮುಳುಗು'' ಎಂದಿದ್ದಾರೆ. ಇದನ್ನು ಅನುಷ್ಠಾನಕ್ಕೆ ತಂದಾಗ ಮಾತ್ರ ಅದರ ಪ್ರಭಾವದ ಅರಿವಾಗುವುದು ಎಂಬುದು ಅನೇಕ ಸಾಧು-ಸಂತರ ಜೀವನದ ಅನುಭವ.

ಮನುಷ್ಯನ ಅಂತರಾಳದಲ್ಲಿರುವ ಭಾವನೆಗಳನ್ನು ಮಾತಿನ ಮೂಲಕ ತಿಳಿಸುವ ಈ ಅದ್ಭುತವಾದ ಶಕ್ತಿಯನ್ನು ಕರುಣಿಸಿರುವ ಆ ಭಗವಂತನಿಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ಸಾಲದು. ನಮ್ಮ ಅಮೂಲ್ಯ ಸಮಯವನ್ನು ಉಪಯೋಗವಿಲ್ಲದ ಮಾತುಗಳನ್ನಾಡಿ, ಮನಸ್ಸನ್ನು ಹಾಳುಮಾಡಿಕೊಳ್ಳದಂತೆ ಶಕ್ತಿ ನೀಡಲು ಆ ಸರ್ವಶಕ್ತನಾದ ಭಗವಂತನನ್ನು ಪ್ರಾರ್ಥಿಸೋಣ.

ಸಂತ ಕಬೀರದಾಸರು ಹೇಳುತ್ತಾರೆ:

ಆಡುವ ನುಡಿ ಇಂತಿರಬೇಕು
ಶಾಂತಿ ನೆಲಸಬೇಕು ।
ಇತರರ ಶಾಂತಿಗೆ ಶ್ರಮಿಸುತ ನಾವೇ
ಶಾಂತಿ ಪಡೆಯುವೆವು ॥

ಈ ವಾಣಿಯನ್ನು ಪಾಲಿಸಲು ಪ್ರಯತ್ನಿಸೋಣ. ಮಾತಿನ ಮೂಲಕ ಆಗಬಹುದಾದ ಅನಾಹುತಗಳನ್ನು ತಪ್ಪಿಸಲು ಶ್ರಮಿಸೋಣ. ಶಾಂತಿಯ ವಾತಾವರಣ ನಿರ್ಮಿಸಲು ಸಹಕಾರಿಗಳಾಗೋಣ.

ಯೋಗಸ್ಯ ಪ್ರಥಮದ್ವಾರಂ ವಾಙ್ನಿರೋಧೋಽಪರಿಗ್ರಹಃ ।
ನಿರಾಶಾ ಚ ನಿರೀಹಾ ಚ ನಿತ್ಯಮೇಕಾಂತಶೀಲತಾ ॥


ವಾಕ್ ಸಂಯಮ, ಅಪರಿಗ್ರಹ, ಆಸೆಯಿಲ್ಲದಿರುವುದು, ಕರ್ಮವಿಲ್ಲದಿರುವುದು, ನಿತ್ಯವೂ ಏಕಾಂತದಲ್ಲಿರುವುದು ಇವು ಯೋಗಕ್ಕೆ ಮೊದಲನೆಯ ಬಾಗಿಲು.

ವಾಚಂ ನಿಯಚ್ಛಾತ್ಮನಿ ತಂ ನಿಯಚ್ಛ
ಬುದ್ಧೌ ಧಿಯಂ ಯಚ್ಛ ಚ ಬುದ್ಧಿಸಾಕ್ಷಿಣಿ ।
ತಂ ಚಾಪಿ ಪೂರ್ಣಾತ್ಮನಿ ನಿರ್ವಿಕಲ್ಪೇ
ವಿಲಾಪ್ಯ ಶಾಂತಿಂ ಪರಮಾಂ ಭಜಸ್ವ ॥


ವಾಕ್ಕನ್ನು ಮನಸ್ಸಿನಲ್ಲಿ ನಿಯಮಿಸಿಕೊ; ಮನಸ್ಸನ್ನು ಬುದ್ಧಿಯಲ್ಲಿ ನಿಯಮಿಸಿಕೊ; ಬುದ್ಧಿಯನ್ನು ಬುದ್ಧಿಸಾಕ್ಷಿಯಲ್ಲಿ ನಿಯಮಿಸಿಕೊ; ಬುದ್ಧಿಸಾಕ್ಷಿಯನ್ನು ಕಲ್ಪನಾಶೂನ್ಯನಾದ ಪೂರ್ಣಾತ್ಮನಲ್ಲಿ ಲಯಹೊಂದಿಸಿ ಪರಮಶಾಂತಿಯನ್ನು ಹೊಂದು.

(ವಿವೇಕಚೂಡಾಮಣಿ, ೩೬೭, ೩೬೮)

ಯುವಚೇತನ



“ಹಿಂದೂಗಳಲ್ಲಿ ನೀವು ಒಂದು ರಾಷ್ಟ್ರೀಯ ಭಾವನೆಯನ್ನು ನೋಡುವಿರಿ; ಅದು ಆಧ್ಯಾತ್ಮಿಕತೆ. ಮತ್ತಾವ ಧರ್ಮದಲ್ಲಿಯೂ, ಪ್ರಪಂಚದ ಮತ್ತಾವ ಶಾಸ್ತ್ರದಲ್ಲಿಯೂ ಭಗವಂತನನ್ನು ವಿವರಿಸುವುದಕ್ಕೆ ಅಷ್ಟೊಂದು ಶಕ್ತಿ ವ್ಯಯವಾಗಿಲ್ಲ. ಪ್ರಾಪಂಚಿಕತೆಯ ಸ್ಪರ್ಶದಿಂದ ಮಲಿನವಾಗದಂತೆ ಆತ್ಮವನ್ನು ವಿವರಿಸಲು ಯತ್ನಿಸಿದರು. ಆತ್ಮವು ದಿವ್ಯವಾದುದು. ಅದನ್ನು ದುರ್ಬಲ ಮಾನವನ ಅಧೋಗತಿಗೆ ತರಬಾರದು. ಏಕತೆ, ಭಗವತ್ಸಾಕ್ಷಾತ್ಕಾರ, ಅವನ ಸರ್ವವ್ಯಾಪಿತ್ವ ಇವನ್ನೇ ಎಲ್ಲಾ ಕಡೆಗಳಲ್ಲಿಯೂ ವಿವರಿಸಿರುವರು. ದೇವರು ಸ್ವರ್ಗ ಮುಂತಾದ ಕಡೆಗಳಲ್ಲಿ ಇರುವನು ಎಂದು ಹೇಳುವುದಕ್ಕೆ ಅರ್ಥವಿಲ್ಲ ಎನ್ನುವರು. ಇವೆಲ್ಲ ಕೇವಲ ಮಾನವೀಯ ದೃಷ್ಟಿ. ಇರುವ ಸ್ವರ್ಗವೆಲ್ಲ ಈಗ ಇಲ್ಲಿದೆ. ಅನಂತಕಾಲದಲ್ಲಿ ಒಂದು ಕ್ಷಣ ಮತ್ತೊಂದು ಕ್ಷಣದಂತೆಯೇ ಇರುವುದು. ನೀವು ದೇವರನ್ನು ನಂಬಿದರೆ ಈಗಲೂ ಅವನನ್ನು ನೋಡಬಹುದು. ನಾವು ಅವನನ್ನು ಸಾಕ್ಷಾತ್ಕಾರ ಮಾಡಿಕೊಂಡಾಗ ಮಾತ್ರ ಧರ್ಮ ಪ್ರಾರಂಭವಾಗುವುದೆಂದು ಭಾವಿಸುತ್ತೇವೆ. ಕೇವಲ ಸಿದ್ಧಾಂತವನ್ನು ನಂಬುವುದಲ್ಲ. ಯುಕ್ತಿಯ ಸಮ್ಮತಿಯನ್ನು ಈಯುವುದಲ್ಲ ಅಥವಾ ಬಹಿರಂಗವಾಗಿ ಸಾರುವುದಲ್ಲ ; ದೇವರಿದ್ದರೆ ಅವನನ್ನು ನೀವು ನೋಡಿರುವಿರಾ? ಇಲ್ಲವಾದರೆ ಅವನನ್ನು ನಂಬುವುದಕ್ಕೆ ನಿಮಗೆ ಏನು ಅಧಿಕಾರವಿದೆ? ದೇವರು ಇರುವನೆ ಇಲ್ಲವೆ ಎಂಬ ಸಂಶಯ ನಿಮಗೆ ಇದ್ದರೆ ಅವನನ್ನು ನೋಡಲು ಏಕೆ ಹೋರಾಡಬಾರದು? ಈ ಒಂದು ಗುರಿಗಾಗಿ ಜೀವನವನ್ನು ಮುಡಿಪಾಗಿಟ್ಟು ಪ್ರಪಂಚವನ್ನೇಕೆ ತ್ಯಜಿಸಬಾರದು? ತ್ಯಾಗ ಮತ್ತು ಆಧ್ಯಾತ್ಮಿಕತೆ ಭರತಖಂಡದ ಎರಡು ಮಹಾಭಾವನೆಗಳು. ಭರತಖಂಡ ಇನ್ನೂ ಈ ಆದರ್ಶಗಳನ್ನು ತ್ಯಜಿಸದೆ ಇರುವುದರಿಂದ ಅದು ಮಾಡಿದ ತಪ್ಪುಗಳು ಅಷ್ಟು ಗಣನೆಗೆ ಬರುವುದಿಲ್ಲ.” *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೨, ಪು.೨೧೪-೧೫)*



ಸುಬೋಧಾನಂದರು ಮತ್ತು ಚಹಾ

ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸುಬೋಧಾನಂದರಿಗೆ ಬಾಲ್ಯದಿಂದಲೂ ಚಹಾ ಎಂದರೆ ತುಂಬ ಇಷ್ಟ. ಒಂದು ರಾತ್ರಿ ಬೇಲೂರು ಮಠದಲ್ಲಿ ವಿವೇಕಾನಂದರು ತಮ್ಮ ಕೊಠಡಿಯಲ್ಲಿ ಧ್ಯಾನ ಮಾಡುತ್ತಿದ್ದರು; ಪಕ್ಕದ ಕೊಠಡಿಯಲ್ಲಿ ಬ್ರಹ್ಮಾನಂದರೂ ಸುಬೋಧಾನಂದರೂ ನಿದ್ರಿಸುತ್ತಿದ್ದರು. ಸ್ವಾಮೀಜಿ ಧ್ಯಾನ ಮುಗಿಸಿದ ಮೇಲೆ ಸುಬೋಧಾನಂದರನ್ನು ಎಬ್ಬಿಸಿ, “ಸ್ವಲ್ಪ ಗುಡುಗುಡಿ ತಂದುಕೊಡುತ್ತಿಯಾ?” ಎಂದು ಕೇಳಿದರು. ಸುಬೋಧಾನಂದರು ಹಾಗೆಯೇ ಮಾಡಲು, ವಿವೇಕಾನಂದರಿಗೆ ತುಂಬ ಸಂತೋಷವಾಗಿ, “ನಿನಗೇನು ವರ ಬೇಕು ಕೇಳು, ಕೊಡುತ್ತೇನೆ” ಎಂದು ಕೇಳಿದರು. ಸ್ವಾಮಿ ಸುಬೋಧಾನಂದರು “ಏನು ಕೇಳಲಿ? ನಮಗೆ ಆವಶ್ಯಕವಾದುದನ್ನೆಲ್ಲ ಗುರು ಮಹಾರಾಜರು ಕೊಟ್ಟಿರುವರಲ್ಲ” ಎಂದರು. ಆದರೆ ಬ್ರಹ್ಮಾನಂದರು, “ಇಲ್ಲ, ಖೋಕಾ, ಈ ಸಂದರ್ಭವನ್ನು ಬಿಡಬೇಡ. ಏನನ್ನಾದರೂ ಕೇಳು” ಎಂದು ಒತ್ತಾಯಿಸಲು, ಸುಬೋಧಾನಂದರು ತುಂಬ ಯೋಚನೆ ಮಾಡಿ, “ಉಳಿದ ನನ್ನ ಜೀವನದಲ್ಲಿ ಯಾವತ್ತೂ ನನಗೆ ನನ್ನ ನಿತ್ಯದ ಚಹಾ ತಪ್ಪದೆ ಇರುವಂತೆ ಅನುಗ್ರಹಿಸು” ಎಂದು ಕೇಳಿದರು. ಅನೇಕ ವರ್ಷಗಳ ನಂತರ, “ಈ ವರ ನಿಜವಾಗಿಯೂ ಕೊಡಲ್ಪಟ್ಟಿತೆ?” ಎಂದು ಯಾರೋ ಕೇಳಿದಾಗ ಸುಬೋಧಾನಂದರು, “ಹೌದು, ಕೆಲವೊಮ್ಮೆ ಚಹಾ ಅನಿರೀಕ್ಷಿತವಾಗಿಯಾದರೂ ಬರುತ್ತಿತ್ತು — ಕೊನೆಗೆ ನಾನು ಇನ್ನೇನು ರಾತ್ರಿ ಮಲಗಬೇಕು ಎನ್ನುವಾಗ” ಎಂದರು.


(‘ದೇವರೊಡನೆ ಬಾಳಿದವರು’, ಸಂ.೧, ಪು.೬೩೯-೪೦)

ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೨೨

ಶ್ರೀಮಾತೆ : ನಾನಾ ಭಾವಗಳಲ್ಲಿ



ಶ್ರೀಮಾತೆಯವರ ಕೊನೆಯ ಚಿತ್ರ

॥ ೫೩ ॥

ಶ್ರೀಮಾತೆಯವರಿಗೆ ಕಿತ್ತಳೆ ಹಾಗೂ ಹಾಲಿನ ಪಾನೀಯ ('ಖೀರ್‌ಕೋಮಲಾ' ಎನ್ನುತ್ತಾರೆ) ವೆಂದರೆ ತುಂಬ ಇಷ್ಟವೆಂದು ಯೋಗಿನ್ ಮಾ ಎಲ್ಲಿಂದಲೋ ಅದನ್ನು ತಂದು, ತಾವೇ ತಯಾರಿಸಿ ಕೊಡುತ್ತಿದ್ದಳು. ಒಂದು ಸಲ ಹೀಗೆ ತಂದಿದ್ದಾಗ ಶ್ರೀಮಾತೆ ಅದನ್ನು ನಮಗೆ ಕೊಡಬಂದರು. ''ಅಮ್ಮಾ, ನಿಮಗೆ ಇಷ್ಟವೆಂದೇ ಯೋಗಿನ್ ಮಾ ಇದನ್ನು ತಂದು ಕೊಟ್ಟಿದ್ದಾರೆ. ನೀವು ಇದನ್ನು ಕುಡಿಯಿರಿ'' ಎಂದು ನಾವು ಹೇಳಿದೆವು. ಶ್ರೀಮಾತೆ ಪ್ರೀತಿಯಿಂದ, ''ನನಗೆ ಇಷ್ಟವೆಂದೇ ಇದನ್ನು ನಾನು ನಿಮಗೆ ಕೊಡುತ್ತಿದ್ದೇನೆ. ನಿಮಗೆ ಕೊಡದಿದ್ದರೆ ನನಗೆ ಕುಡಿಯಲಾದೀತೆ?'' ಎಂದರು ನಾವು ಹಠ ಮಾಡಿದ್ದರಿಂದ ಅವರೂ ಕುಡಿದರು, ನಾವೂ ಕುಡಿದೆವು.

॥ ೫೪ ॥

ಶ್ರೀಮಾತೆಯವರ ಒಬ್ಬರು ಶಿಷ್ಯರು ಬೇಲೂರು ಮಠದಲ್ಲಿ ಗಂಗಾಸ್ನಾನ ಮಾಡಲು ಹೋಗಿದ್ದಾಗ, ನದಿಯಲ್ಲಿ ಪ್ರಚಂಡ ಉಬ್ಬರ ಬಂತು. ಅವರು ನೀರಿನಲ್ಲಿ ಸಿಕ್ಕಿಹಾಕಿಕೊಂಡು, ತೇಲುತ್ತ ಮುಳುಗುತ್ತ ಹೋಗುತ್ತಿದ್ದರು. ಬೇರೆ ಸಾಧುಗಳೆಲ್ಲ ಸೇರಿ ತುಂಬ ಕಷ್ಟದಿಂದ ಅವರನ್ನು ಉಬ್ಬರದಿಂದ ರಕ್ಷಿಸಿದರು. ಆಕಸ್ಮಿಕವಾಗಿ ಡಾಕ್ಟರ್ ಕಂಜೀಲಾಲ್ ಆಗ ಬೇಲೂರು ಮಠದಲ್ಲಿದ್ದರು. ಅವರು ಆ ಶಿಷ್ಯರಿಗೆ ಕೃತಕ ಉಸಿರಾಟ ಮಾಡಿಸಿ, ಅವರ ಹೊಟ್ಟೆಯಿಂದ ನೀರು ಹೊರ ಹಾಕಿಸಿ, ಸೂಕ್ತವಾದ ರೀತಿಯಲ್ಲಿ ಆರೈಕೆ ಮಾಡಿ ಅವರನ್ನು ಬದುಕಿಸಿದರು. ಆಗ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರು. ಅವರು ಲಲಿತನ ಮೂಲಕ ಈ ಘಟನೆಯನ್ನೆಲ್ಲ ಕೇಳಿ ತಿಳಿದು, ''ಮಗೂ, ನನಗೆ ಚಿಂತೆಯಾಗಿಬಿಟ್ಟಿತ್ತು ; ಆತಂಕಗೊಂಡಿದ್ದೆ. ಶ್ರೀರಾಮಕೃಷ್ಣರಿಗೆ ತುಳಸಿ ಅರ್ಪಿಸುತ್ತೇನೆ. ವಾಸಿಯಾದ ಮೇಲೆ ಅವನಿಗೆ ಇಲ್ಲಿಗೆ ಬರಲು ಹೇಳು'' ಎಂದರು.

॥ ೫೫ ॥

ಸೋದರಿ ನಿವೇದಿತಾ ಹಾಗೂ ಕ್ರಿಸ್ಟೀನ್ (ವಿದೇಶಿ ಮಹಿಳೆ, ನಿವೇದಿತೆಯ ಜೊತೆಗೆ ಕಾರ್ಯನಿರತಳಾಗಿದ್ದಳು) ಹೆಚ್ಚಾಗಿ ಕತ್ತಲಾದ ಬಳಿಕವೇ ಶ್ರೀಮಾತೆಯವರ ಬಳಿಗೆ ಬರುತ್ತಿದ್ದರು. ನಿವೇದಿತಾಗೆ ವ್ಯವಹಾರ ಮಾಡಬಹುದಾದಷ್ಟು ಬಂಗಾಳಿ ಬರುತ್ತಿತ್ತು. ಕ್ರಿಸ್ಟೀನ್‌ಗೆ ಎರಡು ಮೂರು ಪದಗಳು ಮಾತ್ರ ಬರುತ್ತಿದ್ದವು. ಆದರೂ ಸ್ವಲ್ಪ ಸ್ವಲ್ಪ ಅರ್ಥವಾಗುತ್ತಿತ್ತು. ಕ್ರಿಸ್ಟೀನ್ ಒಬ್ಬಳೇ ಬಂದರೆ ನಾವು ದ್ವಿಭಾಷಿಗಳಾಗಿ ಕೆಲಸ ಮಾಡಬೇಕಾಗುತ್ತಿತ್ತು. ಒಂದು ದಿನ ಇಬ್ಬರೂ ಜೊತೆಗೇ ಬಂದರು. ಮೇಲಂತಸ್ತಿಗೆ ಹೋದಾಗ ನಿವೇದಿತಾ ಹೇಳುತ್ತಿದ್ದುದು ಕೇಳುತ್ತಿತ್ತು: ''ಓ ಮಾತೃದೇವಿ, ನೀ-ವು ನ-ಮ್ಮ ಪಾ-ಲಿ-ಗೆ ಕಾಳಿ.'' ಕ್ರಿಸ್ಟೀನ್‌ಗೆ ನಿವೇದಿತಾಳ ಮಾತು ತಿಳಿದು, ಅವಳೆಂದಳು, ''O! Holy Mother is our Kali — Yes.'' ಶ್ರೀಮಾತೆ ನಗುತ್ತ, ''ಇಲ್ಲ ಮಗೂ,

ನಾನು ಕಾಳಿ ಅಥವಾ ಇನ್ನೊಂದು ಆಗಲಾರೆ. ಹಾಗೆ ಆಗಿಬಿಟ್ಟರೆ ನಾಲಿಗೆ ಹೊರಚಾಚಿ ನಿಲ್ಲಬೇಕಾದೀತು'' ಎಂದರು. ಶ್ರೀಮಾತೆಯವರ ಉತ್ತರ ಏನೆಂದು ತಿಳಿಯದೆ ಅವರಿಬ್ಬರೂ ನಮ್ಮತ್ತ ನೋಡಿದರು. ನಾನು ಅವರಿಗೆ ಅದರರ್ಥ ತಿಳಿಸಿದೆ. ಆಗ ಅವರಿಬ್ಬರೂ ಹೇಳಿದರು, '' We shall look upon Her as our Kali; for Sri Ramakrishna is our Shiva.'' ('ನಾವು ಅವರನ್ನು ಕಾಳಿಯೆಂದೇ ಭಾವಿಸುತ್ತೇವೆ — ಏಕೆಂದರೆ ಶ್ರೀರಾಮಕೃಷ್ಣರೇ ನಮ್ಮ ಪಾಲಿಗೆ ಶಿವ.') ಶ್ರೀಮಾತೆಗೆ ಈ ಮಾತನ್ನು ತಿಳಿಸಿದಾಗ, ಅವರು ನಗುತ್ತ, ''ಅದು ಹೇಗಲ್ಲವೋ ನೋಡೋಣ'' ಎಂದರು. ಅವರಿಬ್ಬರಿಗೆ ಅದನ್ನು ತಿಳಿಸಿದಾಗ ಅವರು ಕೇಳಿದರು, — ''She admits?'' ('ಅವರು ಒಪ್ಪಿದರೆ?') ನಾನೆಂದೆ, ''ಹೌದು ಒಪ್ಪಿದಂತೆಯೇ.'' ಆಗ ಅವರು, ''Then let us take the dust of your holy feet'' (ಹಾಗಿದ್ದರೆ ನಿಮ್ಮ ಪಾದಕಮಲಗಳ ಧೂಳಿಯನ್ನು ತೆಗೆದುಕೊಳ್ಳುತ್ತೇವೆ) ಎಂದು ಹೇಳಿ, ಹಾಗೆಯೇ ಮಾಡಿ ಹೊರಟು ಹೋದರು.

॥ ೫೬ ॥

ಅನ್ನಪೂರ್ಣೆಯ ತಾಯಿ ಒಬ್ಬಾಕೆ ಯುವತಿಯೊಂದಿಗೆ ಶ್ರೀಮಾತೆಯವರ ಬಳಿಗೆ ಬಂದಳು. ಯುವತಿಯನ್ನು ತೋರಿಸಿ ಆಕೆ ದೂರಿತ್ತಳು, ಅವಳ ಗಂಡ ಆಕೆಯನ್ನು ಜೊತೆಗೆ ಕರೆದುಕೊಂಡಿಲ್ಲ, ತಾನು ಸಾಧುವಾಗುತ್ತೇನೆಂದು ಹೆದರಿಸುತ್ತಿದ್ದಾನಂತೆ. ಇದನ್ನು ಕೇಳಿದ ಶ್ರೀಮಾತೆ ಅವನು ಮನೆಗೆ ಬರುವಂತೆ ಮಾಡಬಹುದೆಂದು ಅವರ ಎಣಿಕೆ. ಉತ್ತರವಾಗಿ ಶ್ರೀಮಾತೆ, ''ಅವನಿಗೆ ನಿಜವಾಗಿಯೂ ವೈರಾಗ್ಯವುಂಟಾದರೆ, ನಾನು ಹೇಗೆ ಆ ರೀತಿ ಹೇಳಲಿ?'' ಎಂದರು. ಅನ್ನಪೂರ್ಣೆಯ ತಾಯಿ ಹಠ ಮಾಡತೊಡಗಿದಳು. ಆ ಯುವತಿ ಶ್ರೀಮಾತೆಯವರ ಪಾದಗಳನ್ನು ಹಿಡಿದು, ದಯನೀಯವಾಗಿ ಪ್ರಾರ್ಥಿಸಿಕೊಂಡಳು. ಶ್ರೀಮಾತೆ ನಗುತ್ತ, ''ಸರಿ, ಅವನು ಇಲ್ಲಿಗೆ ಬಂದರೆ ನಾನು ಅವನನ್ನು ನೋಡುತ್ತೇನೆ. ಅಷ್ಟಾಗಿಯೂ ಅವನಿಗೆ ವೈರಾಗ್ಯ ಬಂದರೆ ನಾನು ಏನೂ ಹೇಳಲಾಗದು ಮಗೂ'' ಎಂದರು.

॥ ೫೭ ॥

ಪ್ರಸಿದ್ಧ ನಟಿ ತಿನ್‌ಕಾರಿ ಶ್ರೀಮಾತೆಯವರ ಬಳಿಗೆ ಬಂದಿದ್ದಳು. ಅವಳನ್ನು ಹಾಡುವಂತೆ ಲಕ್ಷ್ಮೀದೇವಿ ಕೇಳಿಕೊಂಡಳು. ಆಗ ಆಕೆ ಹಿಂದುಮುಂದು ನೋಡುತ್ತ, ''ನಿಮ್ಮ ಎದುರು ನಾನು ಏನು ಹಾಡಬಲ್ಲೆ?'' ಎಂದಳು. ಅನಂತರ ಶ್ರೀಮಾತೆ, ''ಅದರಿಂದ ಏನಾಯಿತಂತೆ? ಹಾಡಮ್ಮಾ. ನಿನ್ನ ಆ ಹುಚ್ಚಿಯ ಹಾಡನ್ನು ಹಾಡು'' ಎಂದರು. ಆಗ ಆಕೆ ಹಾಡಲು ಆರಂಭಿಸಿದಳು. ಈ ವಿವರಗಳನ್ನೆಲ್ಲ ನಾವು ಅನಂತರ ಕೇಳಿದ್ದೆವು; ಆದರೆ ಆಗ ಸ್ವಲ್ಪವೂ ನಮಗೆ ಗೊತ್ತಿರಲಿಲ್ಲ. ಆಗ ನಾವು ಕೆಳಂತಸ್ತಿನಲ್ಲಿ ಏನೇನೋ ಕೆಲಸಗಳಲ್ಲಿ ಮುಳುಗಿದ್ದೆವು. ಆಗ ಸಮಯ ಒಂಬತ್ತೂವರೆ ಗಂಟೆ. ಇದ್ದಕ್ಕಿದ್ದಂತೆ ಸಾರಂಗೀ ವಾದ್ಯದ ಮೂಲಕ ಪಳಗಿದ ಕೈ ಶ್ರುತಿಬದ್ಧವಾಗಿ ಅದ್ಭುತವಾಗಿ, ಹೃದಯಗ್ರಾಹಿಯಾಗುವಂತೆ ಹೇಗೆ ಸ್ವರ ಹೊರಡಿಸುವುದೋ, ಅದೇ ರೀತಿ ತಿನ್‌ಕಾರಿಯ ಕೋಮಲ ಕಂಠದಿಂದ 'ಛಾಯಾನಟ' ರಾಗದಲ್ಲಿ 'ಆಮಾಯ್ ನಿಯೇ ಬೇಡಾಯ್ ಹಾತ್ ಧೊರೇ' (ನನ್ನ ಕೈ ಹಿಡಿದು ತಿರುಗಾಡು) ಎಂಬ ಹಾಡು ಹೊರಹೊಮ್ಮಿತು. ಅದನ್ನು ಕೇಳುತ್ತಲೇ ನಾನು ಯಾವ ಕೆಲಸದಲ್ಲಿ ಮುಳುಗಿದ್ದೆನೋ, ಅದನ್ನು ಅಲ್ಲೇ ಬಿಟ್ಟು ಮೇಲಂತಸ್ತಿಗೆ ಹೋದೆ. ಶರತ್ ಮಹಾರಾಜ್ ಕುಳಿತುಕೊಂಡು ಏನೇನೋ ಬರೆಯುತ್ತಿದ್ದರು, ಅವರು ಲೇಖನಿಯನ್ನು ಅಲ್ಲೇ ಬಿಟ್ಟು ಗಂಭೀರ ಭಾವವನ್ನು ಧರಿಸಿ ಕುಳಿತರು. ಯೋಗಿನ್ ಮಾ ತರಕಾರಿ ಹೆಚ್ಚುತ್ತಿದ್ದಳು, ಅದನ್ನು ಅಲ್ಲೇ ಬಿಟ್ಟು ಮೇಲಂತಸ್ತಿಗೆ ಹೋದಳು. ಅಡಿಗೆಯವನು ಅಡಿಗೆಯ ಪಾತ್ರೆಯನ್ನಿಳಿಸಿದ, ಕೆಲಸಗಾರ ಬೀಸುವ ಕಲ್ಲನ್ನು ಬಿಟ್ಟುಬಿಟ್ಟ. ಇಬ್ಬರೂ ಮೇಲಂತಸ್ತಿಗೆ ಹೋದರು. ಅಲ್ಲಿಗೆ ಹೋಗಿ ನೋಡಿದಾಗ, ಶ್ರೀಮಾತೆ ಪೂಜೆ ಮುಗಿಸಿದ್ದರು. ಅವರು ದೇವಾಲಯದಲ್ಲಿ ಕಾಲು ನೀಡಿ ಕುಳಿತು ಹಾಡು ಕೇಳುತ್ತಿದ್ದರು. ನಾನು ಅದನ್ನು ಗಮನಿಸುತ್ತ ಇದ್ದುಬಿಟ್ಟೆ. ಗಾಯಕಿ ದೇವಾಲಯದ ಹೊರಗಿನ ಸಣ್ಣ ವರಾಂಡದಲ್ಲಿ೧ ಕುಳಿತು ಈ ಸಾಲುಗಳನ್ನು ಭಕ್ತಿರಸದಲ್ಲಿ ತೇಲಿಸಿ, ತಾನವನ್ನು ಹಿಡಿದಿದ್ದಾಳೆ:

ಆಮಾಯ್ ನಿಯೇ ಬೇಡಾಯ್ ಹಾತ್‌ಧೋರೇ
ಆಮಿ ಜೆಖಾನೆ ಜಾಯ್, ಸೇ ಜಾಯ್ ಪಾಛೇ,
ಬೋಲ್‌ತೆ ಹೊಯ್‌ನಾ ಜೋರ್‌ಕೋರೇ..

(ನನ್ನ ಕೈ ಹಿಡಿದು ತಿರುಗಾಡು ಬಾ
ನಾನೆಲ್ಲಿ ಹೋದರೂ ಹೋಗುವನು ಅಲ್ಲಲ್ಲೆ,
ಹೇಳಬೇಕಿಲ್ಲ ಬಲವಂತವಾಗಿ..)

ಶ್ರೀಮಾತೆ ಒಂದು ಸಲ ಠಾಕೂರರತ್ತ ನೋಡಿ, ಕಣ್ಣು ಮುಚ್ಚಿದರು. ಸ್ವಲ್ಪ ಹೊತ್ತಿನ ನಂತರ ಕಣ್ತೆರೆದರು. ಆದರೆ ಅವರ ದೃಷ್ಟಿ ಬಾಹ್ಯಜಗತ್ತಿನ ಕಡೆಗೆ ಇರಲಿಲ್ಲವೆಂದು ನಮಗರ್ಥವಾಯಿತು. ಕಣ್ಣುಗಳು ತೆರೆದಿದ್ದವು; ಆದರೆ ಅವರು ಏನನ್ನೂ ನೋಡುತ್ತಿರಲಿಲ್ಲ. ಅತ್ತ ಗಾಯಕಿ ಹಾಡುತ್ತಿದ್ದಳು:

ಮುಖಖಾನಿ ಸೇ ಮೂಛಾಯ್, ಅಮಾರ್ ಮುಖೇರ್ ಪಾನೇ
ಅಮಿ ಹಾಸ್‌ಲೇ ಹಾಸೇ, ಕಾಂದ್ ಲೇ ಕಾಂದೇ,
ಕೊತೊಯ್ ಚಾಯ್ ರಾಖೇ ಆದರೇ

(ಮುಖವನೊರಸುವನವನು, ಯತ್ನದಿ, ನನ್ನ ಮುಖ ನೋಡಲು,
ನಾ ನಕ್ಕರೆ ನಗುವ, ಅತ್ತರೆ ಅಳುವ, ಎನಿತೊಂದು ಆದರಿಸುವ!)

ಇಡೀ ಮನೆಯೇ ನಿಶ್ಶಬ್ದವಾಗಿತ್ತು, ಮನೆಯಲ್ಲಿ ಯಾರೂ ಇಲ್ಲವೇನೋ ಎಂಬಂತೆ ಎಲ್ಲರೂ ಮುಗ್ಧರಾಗಿ, ಭಾವೋನ್ನತ್ತರಾಗಿ

---

೧ ಆಗ ಶ್ರೀಮಾತೆಯವರಿದ್ದ ಕೋಣೆಯ ಹೊರಗಿನ ವರಾಂಡ ಚಿಕ್ಕದಾಗಿತ್ತು. ಮುಂದೆ ಆ ಕೋಣೆಯನ್ನು ಇಂದಿನ ದೇವರಕೋಣೆಯಲ್ಲಿ ಸೇರಿಸಿಕೊಳ್ಳಲಾಯಿತು. *(–ಸಂ.)*

ಹೋಗಿದ್ದರು. ಇದು ಗಾಯಕಿಯ ಪ್ರಭಾವವೇ, ಅಥವಾ ಶ್ರೀಮಾತೆಯವರ ಶಕ್ತಿಯೆ? ಯಾರು ಅರಿಯಬಲ್ಲರು?

ಅನಂತರ ಹಾಡುತ್ತಿದ್ದಳು:

ಅಮಿ ಜಾನ್‌ತೇ ಏಲಾಂ ತಾಯಿ,
ಕೇ ಬೋಲೇರೇ ಆಪನ್ ರತನ್ ನಾಯಿ
ಸತ್ಯಿ ಮಿಥೇ ದೇಖೊನಾ ಏಶೇ – ಕಚ್ಛೇ ಕಥಾ ಸೊಹಾಗ್ ಭರೇ

(ಅದನೆ ನಾನರಿವೆ, ನೀ ರತ್ನವಲ್ಲವೆನುವರಾರು?
ನಿಜಕು ನೀ ನೋಡು ಬಾ, ಮಿಥ್ಯೆಯನು
ಮಾತಾಡುವೆನು ನಾನು ಶುದ್ಧಿಯನು ತುಂಬಿ)

ಶ್ರೀಮಾತೆ ಭಾವಾವಸ್ಥೆಯಲ್ಲೇ ''ಆಹಾ! ಆಹಾ!'' ಎಂದರು. ಹಾಡು ಮುಗಿದಾಗ ಶ್ರೀಮಾತೆ ಸ್ವಲ್ಪ ಹೊತ್ತು ಅದೇ ಅವಸ್ಥೆಯಲ್ಲಿ ಕುಳಿತಿದ್ದರು. ಸ್ವಲ್ಪವೂ ಸದ್ದಿಲ್ಲ, ಯಾವ ಪ್ರತಿಕ್ರಿಯೆಯೂ ಇಲ್ಲ. ಸ್ವಲ್ಪ ಹೊತ್ತು ಹಾಗೇ ಕುಳಿತ ನಂತರ, ಕಣ್ಣಂಚಿನ ನೀರನ್ನು ಒರೆಸಿಕೊಳ್ಳುತ್ತ ಅವರು ಗಾಯಕಿಗೆ, ''ಇಂದು ಎಂಥ ಹಾಡು ಕೇಳುವಂತೆ ಮಾಡಿದೆಯಮ್ಮಾ!'' ಎಂದರು.

॥ ೫೮ ॥

ಇನ್ನೊಂದು ಬಾರಿ ಶರನ್ನವರಾತ್ರಿ ಪೂಜೆಗೆ ಮೊದಲು ನಾನು ಜಯರಾಮಬಾಟಿಯಲ್ಲಿದ್ದೆ. ದುರ್ಗಾಪೂಜೆಯ ಸಮಯದಲ್ಲಿ ಒಬ್ಬ ಭಿಕಾರಿ ಬಂದು ಶ್ರೀಮಾತೆಯವರ ಮನೆಯ ಕಿಟಕಿ ಬಾಗಿಲ ಬಳಿ ನಿಂತು 'ಆಗಮನಿ'[೨] ಹಾಡುತ್ತಿದ್ದ. ಹಾಡನ್ನು ಕೇಳಲು ಅಲ್ಲಿಗೆ ಹೋದಾಗ, ಶ್ರೀಮಾತೆ ಬಾಗಿಲಿನ ಒಳಭಾಗದಲ್ಲಿ ಕುಳಿತು ಹಾಡು ಕೇಳುತ್ತಿದ್ದರು. ಹಾಡುಗಾರ ಹಾಡುತ್ತಿದ್ದ—

ಜಾವು ಜಾವು ಗಿರಿ ಆನೀತೆ ಗೌರಿ,
ಉಮಾ ಬಡೊ ದುಃಖೇ ರೊಯೇಛೇ ।
ದೇಖೇಛಿ ಸ್ವಪನ್, ನಾರದ ವಚನ್
ಉಮಾ 'ಮಾ ಮಾ' ಬೋಲೆ ಕೇಂದೇಛೇ ॥

ಭಾಂಗಡೊ ಭಿಖಾರಿ ಜಾಮಾತಾ ತೊಮಾರ್
ಸೋನಾರ್ ಭ್ರಮರಿ ಗೌರಿ ಆಮಾರ್ ।
ಉಮಾರ್ ಯತೊ ವಸನ್ ಭೂಷಣ್
ಬೇಟಾ ತಾವು ಬೇಚೇ ಭಾಂಗ್ ಖೇಯೇಛೆ ॥

(ಹೋಗು ಹೋಗು ಗಿರಿ, ಗೌರಿಯ ಕರೆತರಲು
ಉಮೆ ಭಾರಿ ದುಃಖದಲ್ಲಿಹಳು ।
ಕನಸಿನಲಿ ನೋಡಿದ್ದೆ, ನಾರದನೇ ಹೇಳಿದ್ದ
'ಅಮ್ಮ ಅಮ್ಮಾ' ಎಂದು ಉಮೆ ಅಳುವಳು ॥
ಭಂಗಿ ತಿನ್ನುವ ತಿರುಕ ನಿನ್ನಳಿಯ, ನನ ಮಗಳು
ಬಂಗಾರ ದುಂಬಿಯಂತಿರುವ ಗೌರಿ ।
ಉಮೆಯದೇನಂಥ ವಸನ ಆಭರಣಗಳು,
ಆದರೂ ಅವನೇನು ಭಂಗಿ ಸೇದುವನು ॥)

ಹಾಡು ಮುಗಿಯಿತು. ಶ್ರೀಮಾತೆ ಸುಮ್ಮನೆ ಒಂದೇ ಭಾವದಲ್ಲಿ ಕುಳಿತಿದ್ದರು. ಭಿಕ್ಷುಕನಿಗೆ ಭಿಕ್ಷೆ ಬೇಕಿತ್ತು — ಆದರೆ ಶ್ರೀಮಾತೆಯವರ ಕಡೆಯಿಂದ ಉತ್ತರವಿಲ್ಲ. ಭಿಕ್ಷುಕನಿಗೆ ನಾಲ್ಕಾಣೆ ಕೊಟ್ಟು ಕಳುಹಿಸಿದೆ. ಹತ್ತು ನಿಮಿಷ ಕಳೆಯಿತು — ಶ್ರೀಮಾತೆ ಒಂದೇ ಭಾವದಲ್ಲಿ ಕುಳಿತಿದ್ದಾರೆ. ಆಗ ಅವರಿಗೆ ಕೋಣೆಗೆ ಹೋಗಲು ಹೇಳಿದೆ. ಮೊದಲ ಬಾರಿ ಅವರಿಂದ ಉತ್ತರ ಬರಲಿಲ್ಲ. ಎರಡನೇ ಬಾರಿ ಹೇಳಿದಾಗ ಅವರು, ''ನಡೆ, ಹೊಗೋಣ. ಯಾಕೋ ಚೆನ್ನಾಗಿಲ್ಲ'' ಎಂದರು. ನಾನು ಕಾದೆ, ಅವರು ಏಳುವಲ್ಲಿಯವರೆಗೂ ಕಾದಿದ್ದೆ. ಅನಂತರ ಅವರು ಎದ್ದು ಕೋಣೆಗೆ ಹೋಗಿ, ನೆಲದ ಮೇಲೆ ಕುಳಿತರು. ಅವರ ಭಾವವನ್ನು ನೋಡುತ್ತಾ ನಿಂತೆ. ಸ್ವಲ್ಪ ಹೊತ್ತು ಕಳೆದ ಮೇಲೆ ಅವರು ಹೇಳತೊಡಗಿದರು, ''ಇನ್ನೆಷ್ಟು ದಿನ? — ಎಷ್ಟೋ ಕಾಲ ಕಳೆದುಹೋಯಿತಲ್ಲ!'' ಕ್ರಮೇಣ ಅವರು ಪ್ರಕೃತಿಸ್ಥರಾಗಿ, ಎಣ್ಣೆ ಹಚ್ಚಿಕೊಳ್ಳತೊಡಗಿದರು. ಅದನ್ನು ನೋಡಿ ನಾನು ಹೊರಟುಬಂದೆ.

॥ ೫೯ ॥

ಶ್ರೀಮಾತೆಯವರ ದೇಹ ಕ್ಷೀಣಗೊಂಡು, ಅವರು ಅತಿ ಹೆಚ್ಚಿನ ಕಷ್ಟಕ್ಕೆ ಒಳಗಾಗಿದ್ದರೂ, ಅವರು ತಮ್ಮ ಶಿಷ್ಯಂದಿರಿಗೆ ತಿನ್ನಿಸಲು ತುಂಬಾ ಇಷ್ಟಪಡುತ್ತಿದ್ದರು. ಇದಕ್ಕೆ ಒಂದು ಉತ್ತಮ ಉದಾಹರಣೆಯನ್ನು ಇಲ್ಲಿ ನೀಡುತ್ತಿದ್ದೇನೆ.

ಪೌಷಮಾಸದಲ್ಲಿ ಒಂದು ಬಾರಿ ಜಯರಾಮಬಾಟಿಯಲ್ಲಿದ್ದೆ. ಸಂಕ್ರಾಂತಿಗೆ ಹಿಂದಿನ ದಿನ ಸಾಯಂಕಾಲ, ಉಪೇಂದ್ರನಾಥ ಮಾಯಿತಿ ಬಂದಿದ್ದ. ಸಂಕ್ರಾಂತಿಯಂದು ಬೆಳಿಗ್ಗೆ ಹೂಗಳನ್ನು ತರುವಷ್ಟರಲ್ಲಿ ಶ್ರೀಮಾತೆ ಟಂಕಸಾಲೆಯಲ್ಲಿ ಅಕ್ಕಿ ಕುಟ್ಟುತ್ತಿದ್ದರು. ತಾನೇ ಒರಳಿಗೆ ಅಕ್ಕಿ ಹಾಕುತ್ತ, ಅಕ್ಕಿ ಕುಟ್ಟಿದ ನಂತರ ಹೊರ ತೆಗೆಯುತ್ತಿದ್ದರು. ಅವರು ಹೀಗೆ ಮಾಡುತ್ತಿರುವಾಗ, ಅವರ ಕೈಯಿಂದ ಒನಕೆ ಬಿದ್ದುಹೋಗುವುದೋ ಎಂದು ಅನ್ನಿಸಿ ಹೇಳಿದೆ, ''ನೀವೇಕೆ ಇದನ್ನು ಮಾಡುತ್ತೀರಮ್ಮಾ? ಕೈಯಿಂದ ಒನಕೆ ಬಿದ್ದು ಹೋದೀತು.'' ಶ್ರೀಮಾತೆ ಬೇಸರದಿಂದ, ''ನೀನು ಸುಮ್ಮನಿರು. ನನಗೆಲ್ಲ ಅಭ್ಯಾಸವಾಗಿ ಹೋಗಿದೆ'' ಎಂದರು. ನಾನು ಸುಮ್ಮನಾಗಿ ಹೊರಟುಹೋದೆ. ಸ್ವಲ್ಪ ಹೊತ್ತಿನ ನಂತರ, ಅವರು ಬುಟ್ಟಿಯಲ್ಲಿ ಬೇಳೆಯನ್ನು ಒಯ್ದು, ನೀರಿನಲ್ಲಿ ತೊಳೆದು ಅದರ ಸಿಪ್ಪೆಯನ್ನು ಬೇರ್ಪಡಿಸತೊಡಗಿದರು. ಮರಳಿ ಬಂದು ಅದನ್ನು ನಳಿನಿ ಹಾಗೂ ಸಣ್ಣತ್ತೆಗೆ ಕೊಟ್ಟರು. ನಾನು ಕೇಳಿದೆ, ''ಏನು ಮಾಡುತ್ತೀರಿ ಅಮ್ಮಾ?'' ಅದಕ್ಕೆ ಶ್ರೀಮಾತೆ, ''ಕಾದು ನೋಡು'' ಎಂದರು. ಅನಂತರ ಅವರು ಸ್ನಾನ-ಪೂಜೆಗಳನ್ನು ಮುಗಿಸಿ,

---

[೨] ದುರ್ಗಾಪೂಜೆ ಆರಂಭವಾಗುವ ಮೊದಲು ಶ್ರೀದುರ್ಗೆಯನ್ನು ಆಹ್ವಾನ ಮಾಡುವ ಹಾಡುಗಳು 'ಆಗಮನಿ' ಹಾಡುಗಳು. ಶಿವ, ಪಾರ್ವತಿ, ದುರ್ಗೆ, ಗಣೇಶ ಮೊದಲಾದ ದೇವತೆಗಳ ಕೌಟುಂಬಿಕ ಹಿನ್ನೆಲೆಯಲ್ಲಿ ರಚಿತವಾದ ಈ ಹಾಡುಗಳನ್ನು ಸಾಮೂಹಿಕವಾಗಿ ಹಾಡುವ ಸಂಪ್ರದಾಯ ಬಂಗಾಳದಲ್ಲಿದೆ. *(–ಅನು.)*

ಅಡುಗೆ ಮನೆಗೆ ಹೋಗಿ, ಸೆರಗನ್ನು ಟೊಂಕಕ್ಕೆ ಕಟ್ಟಿ ಕಡುಬು ಮಾಡಲು ಹಾಗೂ ಕರಿಯಲು ಕುಳಿತರು. ಇಡೀ ದಿನ ಹಲವು ಬಗೆಯ ಕಡುಬುಗಳನ್ನು ತಯಾರಿಸಿದರು. ಒಲೆಯ ಬಳಿ ಕುಳಿತು ಅವರ ಮುಖದ ಬಣ್ಣ ಬದಲಾಗಿತ್ತು, ಆದರೂ ಅವರು ಸಂಜೆಯ ತನಕ ಅದನ್ನು ಮಾಡುತ್ತಲೇ ಇದ್ದರು. ರಾತ್ರಿ ಊಟದ ವೇಳೆಗೆ ಸರುಚಾಕಲಿ, ಸಿದ್ಧ ಹಾಗೂ ಹಲವು ಬಗೆಯ ಕರಿದ ಸಿಹಿತಿಂಡಿಗಳು, ರಸವಡೆ, ಪಾಟಿಸಾಪಟಾ ಹಾಗೂ ಪಾಯಸ (ಇವೆಲ್ಲ ಬಂಗಾಳಿ ಅಡುಗೆ ಪದಾರ್ಥಗಳು) ಇವನ್ನೆಲ್ಲ ತಂದಿಟ್ಟರು. ಅನಂತರ ಅವರು, ''ತುಂಬಾ ಆಗಿಹೋಯಿತು; ಇಟ್ಟುಬಿಟ್ಟಿದ್ದೇನೆ. ನಾಳೆ ಮತ್ತೆ ತಿನ್ನಿ. ಹಳಸಿ ಹೋದರೆ ಎಲ್ಲ ಹಾಳಾದೀತು'' ಎಂದರು. ನಾನು ಚೆನ್ನಾಗಿ ತಿಂದೆ. ಅವರು ಪಕ್ಕದಲ್ಲೇ ಕುಳಿತು ಬಡಿಸುತ್ತಿದ್ದರು. ದೊಡ್ಡ ಸಂಸಾರ — ಎಲ್ಲರಿಗಾಗಿ ಇಡೀ ದಿನ ಕಷ್ಟಪಟ್ಟು ಇದನ್ನೆಲ್ಲ ತಯಾರಿಸಿದರಲ್ಲ ಎಂದು ನೆನೆದು ಮನಸ್ಸಿಗೆ ಸಂಕಟವಾಯಿತು.

॥ ೬೦ ॥

ಸಮಯ ಸುಮಾರು ಹತ್ತುಗಂಟೆ. ಶ್ರೇಷ್ಠ ಭಕ್ತರಾದ ನಾಗ ಮಹಾಶಯ ಶ್ರೀಮಾತೆಯವರ ದರ್ಶನಕ್ಕಾಗಿ ಬಂದಿದ್ದರು. ಅವರನ್ನು ಕಂಡು ಶ್ರೀಮಾತೆಗೆ ಸುದ್ದಿ ತಲುಪಿಸಲಾಯಿತು. ಅವರು ಭಕ್ತರಿಗಾಗಿ ಕೈಯಲ್ಲಿ ಪ್ರಸಾದವನ್ನು ಹಿಡಿದುಕೊಂಡು, ಮೆಟ್ಟಿಲ ಬಳಿಯವರೆಗೂ ಬಂದು, ಕಾಯುತ್ತ ನಿಂತಿದ್ದರು. ಇತ್ತ ನಾಗ ಮಹಾಶಯರು ಶ್ರೀಮಾತೆಯವರ ಮನೆಯ ಮುಂಬಾಗಿಲ ಬಳಿ, ''ಮಹಾಮಾಯೀ, ಮಹಾಮಾಯೀ'' ಎನ್ನುತ್ತ ಸಾಷ್ಟಾಂಗಗಳನ್ನು ಮುಂದಾಗಿಸಿಕೊಂಡು ಬರುತ್ತಿದ್ದರು. ಇಡೀ ಮೆಟ್ಟಿಲನ್ನು ಆ ಭಾವದಿಂದಲೇ ಹತ್ತುತ್ತಿದ್ದರು. ಅವರು ಮೇಲಕ್ಕೆ ಬಂದಾಗ, ''ಬಾ ಮಗೂ, ಬಾ ಮಗೂ'' ಎಂದರು ಶ್ರೀಮಾತೆ. ಆಗ ಅವರು, ''ಮಹಾಮಾಯೀ, ಮಹಾಮಾಯೀ'' ಎನ್ನುತ್ತಾ ತಲೆಯನ್ನು ಬಾಗಿಸಿ ಪ್ರಣಾಮ ಮಾಡಿದರು. ಶ್ರೀಮಾತೆ ತಾರಸಿಗೆ ಹೋಗುವ ಮೊದಲ ಮೆಟ್ಟಿಲಲ್ಲೇ ಕುಳಿತು, ಅವರನ್ನು ಏಳಲು ಹೇಳಿದರು. ಆಗ ನಾಗ ಮಹಾಶಯರು ಬಾಗಿ ನಮಸ್ಕರಿಸಿದರು. ಅವರ ಸರ್ವಾಂಗವೂ ಕಂಪಿಸುತ್ತಿತ್ತು, ಎರಡೂ ಕಣ್ಣುಗಳಿಂದ ಧಾರಾಕಾರ ಕಣ್ಣೀರು ಸುರಿದು, ಕೆನ್ನೆಗಳು ಒದ್ದೆಯಾಗಿದ್ದವು. ಶ್ರೀಮಾತೆ ಹೇಳಿದರು, ''ಬಾ, ಠಾಕೂರರ ಪ್ರಸಾದ ಸ್ವೀಕರಿಸು.'' ಅದಕ್ಕೆ ಅವರು, ''ಮಹಾಮಾಯಿಯ ಪ್ರಸಾದ!'' ಎಂದರು. ಶ್ರೀಮಾತೆ ಅದನ್ನು ತಮ್ಮ ನಾಲಿಗೆಯಿಂದ ತುಸು ಸ್ಪರ್ಶಿಸಿ ಪ್ರಸಾದ ಮಾಡಿ, ಅದನ್ನು ಅವರಿಗೆ ತಿನ್ನಿಸತೊಡಗಿದರು. ಅವರು ಬಾಲಕನಂತೆ ಅದನ್ನು ತಿನ್ನತೊಡಗಿದರು. ಇನ್ನೂ ಅವರ ಕೆನ್ನೆಗಳು ಒದ್ದೆಯಾಗಿದ್ದವು. ಪ್ರಸಾದ ತಿನ್ನಿಸಿದ ನಂತರ ಶ್ರೀಮಾತೆ, ಅವರಿಗೆ ನೀರನ್ನು ಒಂದೊಂದು ಹನಿಯಾಗಿ ಬಾಯಿಗೆ ಎರೆದರು. ಅದನ್ನು ಅವರು ಕುಡಿದರು. ಹೀಗೆ ಪ್ರಸಾದ ತಿಂದ ನಂತರ ಶ್ರೀಮಾತೆ ಕೈತೊಳೆದು ಬಂದು, ಬಲಗೈಯಿಂದ ಅವರ ಹಣೆಯನ್ನು ಸ್ಪರ್ಶಿಸಿ ಆಶೀರ್ವಾದ ಮಾಡಿದರು. ಆಗ ಅವರು, ''ಮಹಾಮಾಯಿ, ಮಹಾಮಾಯಿ'' ಎನ್ನುತ್ತ ಹಿಂದಕ್ಕೆ ಹಿಂದಕ್ಕೆ ಹೋಗಿ, ಇಳಿದು ಹೋದರು. ಎಲ್ಲಿಯವರೆಗೆ ನೋಡಬಹುದಾಗಿತ್ತೋ, ಅಲ್ಲಿಯವರೆಗೂ ಶ್ರೀಮಾತೆ ಅವರನ್ನೇ ಕಣ್ಣು ಮಿಟುಕಿಸದೆ ನೋಡುತ್ತಾ ನಿಂತರು. ಎಂಥ ಅಲೌಕಿಕ ದೃಶ್ಯ!

॥ ೬೧ ॥

ಕರತಾಳದಿಂದ ತಾಳ ಹಾಕುತ್ತ, ಬಾಯಲ್ಲಿ ಗುಣಗುಣಿಸುತ್ತ ಒಬ್ಬಾಕೆ ಹುಚ್ಚಿ ಮೇಲಂತಸ್ತಿಗೆ ಹೋದಳು. ಆಗ ಶರತ್ ಮಹಾರಾಜ್ ನಮಗೆ, ''ನೋಡಯ್ಯಾ, ಯಾರೋ ಒಬ್ಬಳು ಹುಚ್ಚಿ ಮೇಲಂತಸ್ತಿಗೆ ಹೋದಳು'' ಎಂದರು. ನಾವು ಮೇಲೆ ಹೋಗಿ ನೋಡಿದರೆ, ಶ್ರೀಮಾತೆ ಆಕೆಗೆ, ''ಬಾಮ್ಮಾ, ಬಾ'' ಎಂದು ಹೇಳಿ ಕರೆದರು. ಆಕೆ ದೇವಾಲಯದ ಹೊರಗೆ ನಿಂತು ಹಾಡತೊಡಗಿದಳು. ಹುಚ್ಚಿ ಚಿಂದಿ ವಸ್ತ್ರವನ್ನು ಧರಿಸಿದ್ದಳು; ಅವಳ ಕೂದಲೆಲ್ಲಾ ಗಂಟುಕಟ್ಟಿದ್ದವು. ಎಷ್ಟರ ಮಟ್ಟಿಗೆ ಕೂದಲು ಗಂಟುಗಂಟಾಗಿತ್ತೆಂದರೆ, ಅದರಲ್ಲಿ ಹುಳಗಳು ಹರಿದಾಡುತ್ತಿದ್ದವು. ಆಕೆ ಶ್ರೀಮಾತೆಗೆ ಪ್ರಣಾಮ ಮಾಡಲಿಲ್ಲ, ಮಾತೂ ಆಡಲಿಲ್ಲ. ಸುಮ್ಮನೆ ಹಾಡುತ್ತಿದ್ದಳು. ತನ್ನ ಮನಸ್ಸಿನಲ್ಲೇ ಹಾಡುತ್ತಿದ್ದಳು, ಅನಂತರ ನಮಸ್ಕರಿಸಿದಳು. ಇನ್ನೊಮ್ಮೆ ನಿಂತುಕೊಂಡೇ ಹಾಡುತ್ತಿದ್ದಳು. ಹಾಡುತ್ತಿದ್ದಾಗಲೆಲ್ಲ ಒಂದು ಸಲವೂ ಕಣ್ಣುಗಳನ್ನು ತೆರೆಯಲಿಲ್ಲ. ಆಕೆ ತುಂಬಾ ಗಲೀಜು, ಅಶುಚಿಯಿಂದ ಕೂಡಿದ್ದಳು. ಅವಳ ಕಂಠ ಮಾತ್ರ ಬಹಳ ಮಧುರವಾಗಿತ್ತು. ಆ ಸ್ವರದಿಂದಲೇ ಆಕೆ ಈ ಕೀರ್ತನೆಯನ್ನು ಹಾಡಿದಳು:

ದೇ, ದೇ ಅಮಾಯ್ ಸಾಜಾಯೇ ದೇ- ತೋರಾ ಸಾಜಾಯೇ ದೇ,
ಅಮಿ ಯೋಗಿ ಹೊಬೊ-ಪ್ರಾಣಕಾನು ಲಾಗಿ ಅಮಿ ಯೋಗಿನಿ ಹೊಬೊ
ಗೆರುವಾ ವಸನ್ ಅಂಗೇತೇ ಪರಿಬೊ-ಶಂಖೇರ್ ಕುಂಡಲ ಪರಿ ॥
(ಅಮಾಯ್ ಸಾಜಾಯೇ ದೇ- ತೋರಾ ಸಾಜಾಯೇ)
(ಅಮಿ) ಜಾಯಿಬೊ ಶೆಯಿ ದೇಶೇ, ಯೋಗಿನೀರ್ ವೇಷೇ
ಯಥಾಯ್ ನಿಚೂರ್ ಹರಿ ।
ಯದಿ ಗೋಕುಲಚಂದ್ರ ವ್ರಜೇ ನ ಏಲೇ,
(ಅಮಾರ್) ಏಯಿ ರೂಪಯೌವನ್, ಪರಶ್ ರತನ್
ಕಾಚೇರ್ ಸಮಾನ್ ಭೇಲೊ ॥
(ಅಮಾಯ್ ಸಾಜಾಯೇ ದೇ- ಆರ್ ಘರೇ ರಯಿತೇ ನಾರಿ
ಅಮಾಯ್ ಸಾಜಾಯೇ ದೇ-)
(ಅಮಿ) ಮಥುರಾ ನಗರೇ ಪ್ರತಿ ಘರೇ ಘರೇ ಖೂಜಿಬೊ ಪ್ರಾಣೇರ್ ಹರಿ।
ಯದಿ ರೋಧೇ ಕೇವು, ತ್ಯಜಿಬೊ ಎಯಿ ಜಿವು, ನಾರೀವಧ ದಿಬೊ ತಾರೇ ॥
(ಆರ್ ಜೇ ರಯಿತೇ ನಾರಿ – ಅಮಾಯ್ ಸಾಜಾಯೇ ದೇ)

(ಬಿಡು ಬಿಡು ನನ್ನನು, ಬಟ್ಟೆಯ ಧರಿಸಲು,
ಬಟ್ಟೆಯ ಧರಿಸುವೆ ನಾನು ।
ಯೋಗಿನಿಯಾಗುವೆ, ಪ್ರಾಣವನರ್ಪಿಸಿ
ಪ್ರಾಣಕೃಷ್ಣನಿಗೆ ನಾನಿಂದು ॥

ಧರಿಸುವೆ ಕಾವಿಯ, ಶಂಖದ ಕುಂಡಲ
ಬಿಡು ಬಿಡು ನನ್ನನು, ಬಟ್ಟೆಯ ಧರಿಸಲು ॥

ಬಾಗಿ ನಿಂತ ಹರಿ ತಾನೆಲ್ಲಿರುವನೊ
(ಆ) ಊರಿಗೆ ಹೋಗುವೆ ನಾನು ।
ಗೋಕುಲಚಂದ್ರಮ ವ್ರಜಮಂಡಲಕೆ
ಬರದಿರೆ ನಾನೇನಾಗುವೆನೊ –
ಎನ್ನ ರೂಪಯೌವನಗಳು ಕರಗಿ
ಸ್ಪರ್ಶಮಣಿಯು ಗಾಜಿನ ತೆರದಿ ॥

ಬಿಡು ಬಿಡು ನನ್ನನು, ಬಟ್ಟೆಯ ಧರಿಸಲು,
ಮನೆಯಲಿ ನಾನಿರಲಾರೆ ।
ಪ್ರಾಣಕೃಷ್ಣನನು ಮಥುರಾ ನಗರದಿ
ಮನೆ ಮನೆ ಹುಡುಕುವೆ ನಾನು ।
ಯಾರೋ ತಡೆದರೆ ಪ್ರಾಣವ ತ್ಯಜಿಸುವೆ
ನಾರೀವಧೆ ಹೊರಿಸುವೆನವಗೆ ॥

ಬಿಡು ಬಿಡು ನನ್ನನು ಬಟ್ಟೆಯ ಧರಿಸಲು,
ನಾನಿರಲಾರೆನು, ಇನ್ನೆಂದೂ ॥)

ಹೀಗೆ ಹಾಡುತ್ತ ಹುಚ್ಚಿ ಹೊರಟು ಹೋದಳು. ಶ್ರೀಮಾತೆ ಅವಳ ಚಿಂದಿಬಟ್ಟೆಯನ್ನು ನೋಡಿ ಒಂದು ಹೊಸ ವಸ್ತ್ರನೀಡಿದರು — ಅದು ಅಲ್ಲೇ ಉಳಿಯಿತು. ಅವಳಿಗೆ ಊಟ ಮಾಡಲು ಹೇಳಿದರು, ಆಕೆ ಊಟ ಮಾಡದೆ ಹೊರಟು ಹೋದಳು. ಶ್ರೀಮಾತೆ ಹೇಳಿದರು, ''ತೀವ್ರ ವೈರಾಗ್ಯ! ಊಟ ಮಾಡಲಾರಳು, ಏನನ್ನೂ ತೆಗೆದುಕೊಳ್ಳಲಾರಳು. ಶರೀರ ತ್ಯಾಗ ಮಾಡಿಬಿಡುತ್ತಾಳೆ!''

॥ ೬೨ ॥

ಕಾಳೀಘಾಟಿನಲ್ಲಿ ಭದ್ರಕಾಳಿಯ ದರ್ಶನವಾದ ಮೇಲೆ ಶ್ರೀಮಾತೆ ಬರಿಗಾಲಿನಲ್ಲಿ ನಕುಲೇಶ್ವರದ ಕಡೆಗೆ ಹೋಗುತ್ತಿದ್ದರು. ದಾರಿಯ ನಡುವೆ ಒಬ್ಬಾಕೆ ತ್ರಿಶೂಲಧಾರಿಯಾದ, ಕಾವಿ ಬಟ್ಟೆಯನ್ನು ಉಟ್ಟುಕೊಂಡಿದ್ದ ಭೈರವಿ ಅವರನ್ನು ತಡೆಗಟ್ಟಿ ನಿಂತುಬಿಟ್ಟಳು. ಶ್ರೀಮಾತೆಯವರ ಮುಖವನ್ನೇ ಸ್ವಲ್ಪಹೊತ್ತು ದಿಟ್ಟಿಸುತ್ತಾ ನಿಂತ ಆಕೆ, ಅನಂತರ ಹಾಡತೊಡಗಿದಳು. ಶ್ರೀಮಾತೆ ಬರೆದ ಚಿತ್ರದಂತೆ ನಿಂತುಬಿಟ್ಟಿದ್ದರು. ಭೈರವಿಯ ಹಾಡಿನಿಂದ ರಸ್ತೆಯಲ್ಲಿ ಭಿಕ್ಷುಕರು, ಯಾತ್ರಿಕರು ನೆರೆದು ಅಲ್ಲೊಂದು ಗುಂಪು ಸೇರಿಬಿಟ್ಟಿತು. ಆಕೆ ಹಾಡಿದಳು:

ಕೇಮನ್ ಕೊರೇ ಪರೇರ್ ಘರೇ ಚಿಲಿ ಉಮಾ ಬೊಲೊ ಮಾ ತಾಯಿ।
ಕೊತೊ ಲೋಕ್ ಕೊತೊ ಬೊಲೆ, ಶುನೇ ಪ್ರಾಣ್ ಮರೇ ಜಾಯ್ ॥
ಮಾಯೇರ್ ಪ್ರಾಣ್ ಕಿ ಧೈರ್ಯ ಧರೇ, ಜಾಮಾಯ್ ನಾಕಿ ಭಿಕ್ಷಾ ಕರೆ?
ಏಬಾರ್ ನಿತೇ ಏಲೇ ಹರೇ, ಬೊಲ್‌ಬೊ ಉಮಾ ಘರೇ ನಾಯ್ ॥

(ಹೌದೇನೇ ಉಮಾ ಹೌದೇನೇ
ಜನವೆನ್ನುವುದಿದು ನಿಜವೇನೇ ? –
ಮಸಣದ ಬೂದಿಯ ಮೈಗೆ ಬಳಿದು ಶಿವ
ಎಲ್ಲೆಲ್ಲೋ ತಿರುಗುವನಂತೆ !

ಹೊಟ್ಟೆಬಟ್ಟೆಗೂ ಗತಿಯಿಲ್ಲದರೊಲು
ಊರೂರಲು ತಿರಿದುಂಬುವನಂತೆ !
ನೀನು ಕೂಡ ಬಂಗಾರದ ಮೈಗೆ
ಆ ಬೂದಿಯನೇ ಬಳಿಯುವೆಯಂತೆ !

ನಿನ್ನ ತಾಯಿ ನಾನಾಗಿಹ ತಪ್ಪಿಗೆ
ಸಹಿಸಬೇಕೆ ಅವಮಾನವನು?
ಮತ್ತೆ ನಿನ್ನ ಶಿವ ಕರೆಯಲು ಬರಲಿ
'ಮನೆಯೊಳಿಲ್ಲ ಉಮೆ' – ಎನ್ನುವೆನು !)

ಹಾಡು ಮುಗಿದ ನಂತರ ಶ್ರೀಮಾತೆ ಸನ್ನೆ ಮಾಡುತ್ತ ಹಣ ಕೊಡಲು ಮುಂದಾದರು. ಭೈರವಿ ಅದನ್ನು ಸ್ವೀಕರಿಸದೆ ಹೇಳಿದಳು: ''ಯಾರಿಂದ ಏನನ್ನು ತೆಗೆದುಕೊಳ್ಳಬೇಕೋ ಅದನ್ನೇ ತೆಗೆದುಕೊಳ್ಳಬೇಕು, ಅಮ್ಮಾ. ನಿಮ್ಮಿಂದ ಏನನ್ನು ತೆಗೆದುಕೊಳ್ಳಬೇಕೋ, ಅದನ್ನು ನಾನೇ ಪಡೆದುಕೊಳ್ಳುತ್ತೇನಮ್ಮಾ. ನೀವು ಎಲ್ಲಿಗೆ ಹೋಗುತ್ತೀರೋ ಹೋಗಿ'' ಎಂದಳು. ಶ್ರೀಮಾತೆ ಮುಂದುವರಿದರು. ನಾನು ಗಮನಿಸಿದೆ, ಶ್ರೀಮಾತೆಯವರು ಹೋದ ಹೆಜ್ಜೆಗಳ ಮೇಲಿನ ಧೂಳನ್ನು ಭೈರವಿ ಸಂಗ್ರಹಿಸಿ, ಅದನ್ನು ಹಣೆಯಲ್ಲಿ ಧರಿಸಿಕೊಂಡು ಹೊರಟುಹೋದಳು.

ನಕುಲೇಶ್ವರವನ್ನು ತಲುಪಿದ ನಂತರ ಶ್ರೀಮಾತೆ ದರ್ಶನ ಮಾಡಲು ಹೋಗಲಿಲ್ಲ. ನಳಿನಿ, ರಾಧು, ಸಣ್ಣತ್ತೆ ಹಾಗೂ ಗೋಲಾಪ್ ಮಾಗೆ ದರ್ಶನ ಮಾಡಲು ಹೇಳಿ, ತಾವೊಬ್ಬರೇ ಪ್ರಾಂಗಣದಲ್ಲಿ ಕುಳಿತರು. ಅವರು ತಮ್ಮೊಳಗೇ ಯಾವುದೋ ಒಂದು ಭಾವದಲ್ಲಿದ್ದರು. ಗೋಲಾಪ್ ಮಾ ಮೊದಲಾದವರು ಮರಳಿ ಬಂದು, ಶ್ರೀಮಾತೆಯವರನ್ನು ಒಂದೆರಡು ಬಾರಿ ಕರೆದರೂ ಅವರು ಮನಸ್ಸಿಲ್ಲದ ಮನಸ್ಸಿನಿಂದ ಹೇಗೋ ಎದ್ದರು. ದಾರಿಯಿಡೀ ಅವರು ಏನೂ ಮಾತನಾಡದೆ ಮೌನವಾಗಿದ್ದರು. ಮನೆಗೆ ಮರಳಿದ ನಂತರ ಕೇಳಿದರು: ''ಯಾರು ಆ ಭೈರವಿ? '' ನಾನೆಂದೆ, ''ಆಕೆ ಗಿರೀಶಬಾಬುವಿನ ಥಿಯೇಟರಿನಲ್ಲಿ ಇದ್ದ ಯಾರೋ ಒಬ್ಬಾಕೆ ಇರಬೇಕೆನ್ನಿಸುತ್ತದೆ. ಈಗ ಹೀಗಾಗಿ ಬಿಟ್ಟಿದ್ದಾಳೆ.'' ಅವರು ವಿಶೇಷವಾಗಿ ಏನನ್ನೂ ಹೇಳದೆ, ''ಓ!'' ಎಂದಷ್ಟೇ ಹೇಳಿ ಸುಮ್ಮನಾದರು.

ಪರಿಶಿಷ್ಟ

॥ ೧ ॥

ನಾನೊಮ್ಮೆ ಶ್ರೀಮಾತೆಯವರನ್ನು ಅವರ ಜಾತಕದ ವಿಷಯವಾಗಿ ಕೇಳಿದಾಗ ಹೇಳಿದರು: ''ಅದೆಲ್ಲವನ್ನೂ ಶಾರದ (ಸ್ವಾಮಿ ತ್ರಿಗುಣಾತೀತಾನಂದರು, ಪ್ರಸ್ತುತ ಲೇಖಕನ ಪೂರ್ವಾಶ್ರಮದ ಅಣ್ಣ) ಇಟ್ಟುಕೊಳ್ಳುತ್ತಿದ್ದ. ಅವನಿಗೆ ಬರೆದು ನೋಡು, ಕಳುಹಿಸು

ತ್ತಾನೋ ಅಂತ...'' ಆಗ ಶಾರದಾ ಮಹಾರಾಜ್ ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ಹಿಂದೂ ದೇವಾಲಯದ ಪ್ರತಿಷ್ಠಾಪನೆಯ ಕಾರ್ಯವನ್ನು ಮುಗಿಸಿ, ಅಲ್ಲಿ ಠಾಕೂರರ ಭಾವಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ಅವರಿಗೆ ಪತ್ರ ಬರೆದಾಗ ಅವರು ಬರೆದ ಉತ್ತರ ಹೀಗಿದೆ:

The Hindu Temple
2963, Webster Street,
San Francisco, California,
U. S. A.
೨೫ ಶ್ರಾವಣ, ೧೯೦೯, ಶುಕ್ರವಾರ.

ಬ್ರಹ್ಮಮಯಿ ಮಾತೆ,

ತಮ್ಮ ಶ್ರೀಪಾದಪದ್ಮಗಳಲ್ಲಿ ನನ್ನ ಸಾಷ್ಟಾಂಗ ಪ್ರಣಾಮಗಳು. ತಾವು ಕಲ್ಕತ್ತೆಗೆ ಬಂದಿರುವುದನ್ನು ಕೇಳಿ ತುಂಬಾ ಆನಂದವುಂಟಾಯಿತು. ತಮ್ಮ ದೇಹಾರೋಗ್ಯ ತುಂಬ ಚೆನ್ನಾಗಿರುವುದೆಂದು ನಾನು ನಂಬಿದ್ದೇನೆ. ಅಂತೆಯೇ ವಾತ ಅಥವಾ ವಾಯುದೋಷ ಮೊದಲಾದವು ಇಷ್ಟು ದಿನಗಳ ನಂತರ ಒಂದೇ ಬಾರಿಗೆ ಹೊರಟು ಹೋಗಿದೆ. ತಮ್ಮ ಶ್ರೀಪಾದಪದ್ಮಗಳ ಆಶೀರ್ವಾದದಿಂದ ಸುಶೀಲ[೩], ಹರಿಪದ[೪], ಹಾಗೂ ನಾವು ಈಚೆಗೆ ತುಂಬ ಚೆನ್ನಾಗಿದ್ದೇವೆ.

ಅಮ್ಮಾ, ಪ್ರಸ್ತುತ ಆಶು ಒಂದು ಪೋಸ್ಟ್‌ಕಾರ್ಡ್ ಮೂಲಕ ನನಗೆ ಬರೆದಿದ್ದಾನೆ, ನಿಮ್ಮ ಜಾತಕಕ್ಕಾಗಿ. ಅಮ್ಮಾ, ನಾನು ಹಲವು ದಿನಗಳ ಹಿಂದೆ ಅದನ್ನು ಅಜ್ಜಿಗೆ (ಶ್ರೀಮಾತೆಯವರ ತಾಯಿ), ಅಥವಾ ಪ್ರಸನ್ನ ಮಾವನಿಗೆ ಅಥವಾ ಬೇರೆ ಯಾವುದೋ ಮಾವನಿಗೆ ಅದನ್ನು ಹಿಂದಿರುಗಿಸಿದ್ದೇನೆ. ಅದರ ಪ್ರತಿಯನ್ನು ತಯಾರಿಸಿ, ಅನಂತರ ಹಿಂದಿರುಗಿಸಿದ್ದೇನೆ. ಅದಾಗಿ ಬಹಳ ದಿನಗಳಾಗಿವೆ, ಯಾರಿಗೆ ಹಿಂದಿರುಗಿಸಿದೆ ಎಂದು ಈಗ ಚೆನ್ನಾಗಿ ನೆನಪಿಲ್ಲ. ಈಗಂತೂ ಅದು ನನ್ನ ಬಳಿ ಇಲ್ಲ. ಆದರೂ, ಅಮ್ಮಾ, ಒಂದು ಸಲ ಆಶು ಅಥವಾ ಇನ್ನಾರ ಮೂಲಕ ವಾದರೂ ಸರಿ, ಶಶಿ–ಡಾಕ್ಟರ್ ಅಥವಾ ಮಹೇಂದ್ರ ಮಾಸ್ಟರ್ ಮಹಾಶಯನನ್ನು ಕೇಳಿನೋಡಿ. ನಾನು ಮರೆತು ಬೇರೆ ಯಾರ ಬಳಿಯಾದರೂ ಕೊಟ್ಟಿರಬಹುದು. ಆದರೆ, ಅದನ್ನು ಅಜ್ಜಿ ಅಥವಾ ಯಾರೋ ಒಬ್ಬರು ಮಾವನ ಬಳಿ ಕೊಟ್ಟಿರಬೇಕೆಂದೇ ನನಗೆ ಹೆಚ್ಚಾಗಿ ಅನ್ನಿಸುತ್ತದೆ. ಅದೇನೇ ಇರಲಿ, ಅದು ಕಳೆದೇ ಹೋಗಿದ್ದರೂ ಕೂಡ, ಅದರಿಂದೇನೂ ಹಾನಿಯಾಗದು. ಏಕೆಂದರೆ ನಿಮ್ಮ ಆ ಜಾತಕದ ನಿಜವಾದ ಪ್ರತಿ ನಕಲು ಮಾಡಿ ಈ ಪತ್ರದೊಂದಿಗೆ ಇಟ್ಟು ಕಳುಹಿಸುತ್ತಿದ್ದೇನೆ. ಈ ಪತ್ರದೊಳಗೆ ತಮ್ಮ ದೈನಂದಿನ ಖರ್ಚಿಗಾಗಿ ಐದು ರೂಪಾಯಿಗಳನ್ನು ಕಳುಹಿಸುತ್ತಿದ್ದೇನೆ. ತಮ್ಮ ಶ್ರೀಪಾದಪದ್ಮಗಳಲ್ಲಿ ನಮ್ಮೆಲ್ಲರ ಸಾಷ್ಟಾಂಗ ಪ್ರಣಾಮಗಳು. ಇತಿ —

ತಮ್ಮ ಸ್ನೇಹಪಾತ್ರನಾದ ಶಿಷ್ಯ,
ಶಾರದಾಪ್ರಸನ್ನ

---

೩ ಸ್ವಾಮಿ ಪ್ರಕಾಶಾನಂದ ೪ ಸ್ವಾಮಿ ಬೋಧಾನಂದ

॥ ೨ ॥

ಏಕಾದಶಿಯಂದು ಶ್ರೀಮಾತೆ ಅನ್ನ ಸೇವಿಸುತ್ತಿರಲಿಲ್ಲ. ಅಂದು ಲೂಚಿ, ರಾಧಾವಲ್ಲಭಿ, ಕಡಲೆಬೇಳೆ ದಾಲ್ ಅಥವಾ ಧೋಂಕಾ, ರವೆಯ ಪಾಯಸ ಅಥವಾ ಖೀರ್‌ಕೋಮಲ ಸೇವಿಸುತ್ತಿದ್ದರು. ಯಾರಾದರೂ ಭಕ್ತರು ಶ್ರೀಮಾತೆಯವರ ಪೂಜೆ ಮಾಡಲು ಬಂದರೆ, ಅವರು ಬಿಲ್ವಪತ್ರೆಯಿಂದ ಪೂಜೆ ಮಾಡುವುದನ್ನು ನಿಷೇಧಿಸುತ್ತಿದ್ದರು. ಆಗಾಗ ತುಳಸೀದಳದಿಂದ ಪೂಜೆ ಮಾಡುವುದನ್ನು ನಿಷೇಧಿಸುತ್ತಿದ್ದರು. ಅವರು ಉತ್ತರೀಯದಿಂದ ದೇಹವನ್ನು ಆವರಿಸಿ ನಿಂತುಕೊಂಡಿದ್ದಾಗ, ಅವರು ನಿಷೇಧ ಮಾಡಿದ ನಂತರವೂ ಕೆಲವು ಮಂದಿ ಭಕ್ತರು ಅಲಕ್ಷ್ಯದಿಂದ ಬಿಲ್ವಪತ್ರ ಅಥವಾ ತುಳಸೀದಳದಿಂದ ಪೂಜೆ ಮಾಡಿ ಹೋಗಿದ್ದನ್ನು ನಾವು ನೋಡಿದ್ದೆವು. ಭಕ್ತನು ಹೊರಟುಹೋದ ನಂತರ ಅವರು ಅದನ್ನು ನೋಡಿ ನಮ್ಮನ್ನು ಬಯ್ಯುತ್ತಿದ್ದರು. ಅವರು ಹೇಳುತ್ತಿದ್ದರು, ''ನೀವೇಕೆ ತಡೆಯಲಿಲ್ಲ?'' ನಾವು ಹೇಳುತ್ತಿದ್ದೆವು, ''ಭಕ್ತರಿಗೆ ನಾವು ಹೇಗೆ ಕಷ್ಟ ಕೊಡಲಿ?'' ಅವರು ಕೇಳುತ್ತಿರಲಿಲ್ಲ, ಹೇಳುತ್ತಿದ್ದರು — ''(ಎದೆ) ಒಡೆದರೆ ಒಡೆಯಲಿ, ಅವರಿಗೆ ಅದನ್ನು ಹಾಕಲು ಬಿಡಬೇಡ.''

ಶ್ರೀಮಾತೆಯವರ ಜನನ

೮ನೇ ಪೌಷ, ೧೨೬೦, ಗುರುವಾರ (೧೮೫೩)

ತಿರೋಧಾನ

೪ನೇ ಶ್ರಾವಣ, ೧೩೨೭, ಮಂಗಳವಾರ (೧೯೨೦)

(ಮುಗಿಯಿತು)

''ಕಾಳೀಮಾತೆ ಭಗವಂತನ ಪರಿಪೂರ್ಣ ಆವಿರ್ಭಾವ'' ಎಂದು ಸ್ವಾಮೀಜಿ ಹೇಳುತ್ತಿದ್ದರು. ಸೃಷ್ಟಿ, ಸ್ಥಿತಿ, ಲಯ ಇವುಗಳನ್ನು ಅವಳೇ ಮಾಡುತ್ತಿರುವಳು. ಒಂದೆಡೆ ಅವಳು ಖಡ್ಗದಿಂದ ಎಲ್ಲವನ್ನೂ ಸಂಹಾರ ಮಾಡುತ್ತಿರುವಳು; ಇನ್ನೊಂದೆಡೆ ಅವಳು ಅಭಯ ಹಾಗೂ ವರಗಳನ್ನು ನೀಡುತ್ತಾಳೆ. ಇದೆಲ್ಲವೂ ಭಗವಂತನ ಲೀಲೆ. ಒಂದು ರೂಪದಿಂದ ಅವನು ಅಸಂಖ್ಯಾತ ಜನರಿಗೆ ನೋವು ತರುವನು; ನೆರೆ, ರೋಗರುಜಿನಗಳಿಂದಲೂ ದುಃಖದುಮ್ಮಾನಗಳಿಂದಲೂ ಅವರನ್ನು ವಿನಾಶದೆಡೆಗೆ ತಳ್ಳುವನು. ಮಾನವಕೋಟಿಯ ಸಂಕಟವನ್ನು ದೂರಮಾಡುವಂತೆ ಪ್ರೇರಣೆ ನೀಡುವವನೂ ಅವನೇ. 'ಜಯವಾಗಲಿ ನಿನಗೆ! ತಾಯೆ, ಜಯವಾಗಲಿ ನಿನಗೆ. ನಿನ್ನ ಬಗೆಯನ್ನು ತಿಳಿಯುವವರಾರು?' ಜಗನ್ಮಾತೆಯನ್ನು ಯಾರೂ ಅರಿತಿಲ್ಲ, ಯಾರೂ ಅರಿಯಲಾರರು. ಸೃಷ್ಟಿಯ ಆದಿಯಿಂದ ಯಾವ ಯೋಗಿಯಾಗಲಿ, ಋಷಿಯಾಗಲಿ ಅವಳನ್ನು ಅರಿತಿಲ್ಲ. ತಾಯಿಯ ಲೀಲೆ ಅನಂತ.

— ಸ್ವಾಮಿ ಶಿವಾನಂದ



ಅವತಾರ ವರಿಷ್ಠರ ದಿವ್ಯಾಸ್ತ್ರಗಳು

ಸಿ.ಎಸ್. ಮಂಗಳಮ್ಮ

ಶ್ರೀರಾಮಕೃಷ್ಣರ ಜೀವನ, ದೈವೀ ವ್ಯಕ್ತಿತ್ವ ಹಾಗೂ ಅವರ ಅವತರಣದ ವಿಶೇಷತೆಯನ್ನು ಕುರಿತು ಚಿಂತಿಸಿದಷ್ಟೂ ಅದೊಂದು ಮಾನಸಿಕ ಆರಾಧನೆಯೇ ಆಗುವುದು. ಅಂತಹ ದಿವ್ಯ ಬದುಕಿನ ಜೊತೆಯಲ್ಲಿ ಪ್ರಪಂಚದ ಬೆಳಕಾಗಿ ಬಂದ ಶ್ರೀಮಾತೆ, ಸ್ವಾಮೀಜಿ ಇವರ ವ್ಯಕ್ತತ್ವವನ್ನೂ ಇಲ್ಲಿ ವಿವರಿಸಲಾಗಿದೆ. ಲೇಖಕಿ ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಮೈಸೂರು ನಿವಾಸಿಯಾಗಿರುವ ಅವರು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಅವರು ಉತ್ತಮ ವಾಗ್ಮಿ ಕೂಡ ಹೌದು.

‘ಓಂ ಸ್ಥಾಪಕಾಯ ಚ ಧರ್ಮಸ್ಯ ಸರ್ವಧರ್ಮ ಸ್ವರೂಪಿಣೇ।
ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ ॥’

ವಿಶ್ವವಿಖ್ಯಾತ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರು ತಮ್ಮ ಗುರುಗಳನ್ನು ಸ್ಮರಿಸುತ್ತಾ ಮೇಲ್ಕಂಡ ಸ್ತವ ಕುಸುಮಾಂಜಲಿಯನ್ನು ಅರ್ಪಿಸಿದ್ದಾರೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಪರಮಾತ್ಮನು ಇತ್ತಿರುವ, ‘ಧರ್ಮಕ್ಕೆ ಗ್ಲಾನಿಯುಂಟಾದಾಗ ಅದರ ರಕ್ಷಣೆಗಾಗಿ, ಅಧರ್ಮದ ನಾಶಕ್ಕಾಗಿ ಆಗಾಗ ನಾನು ಅವತರಿಸುತ್ತೇನೆ’ ಎನ್ನುವ ಅಭಯವಾಣಿಗೆ ಶ್ರೀರಾಮಕೃಷ್ಣರ ಅವತಾರ ಉದಾಹರಣೆಯಂತಿದೆ. ಸ್ವಾಮೀಜಿಯವರು ಅವತಾರಕ್ಕೆ ಒಂದು ವಿಶೇಷಣವನ್ನು ಸೇರಿಸಿದ್ದಾರೆ, ‘ವರಿಷ್ಠಾಯ’ ಎಂದು. ವರಿಷ್ಠತೆಯ ವೈಶಿಷ್ಟ್ಯವೇನು? ಅದಕ್ಕಾಗಿ ಬಳಸಿದ ಅಸ್ತ್ರಗಳಾವುವು ಎಂಬುದನ್ನು ಅರಿಯೋಣ.

ನಮ್ಮ ಪುರಾಣಗಳಲ್ಲಿ ಬರುವ ಅವತಾರಗಳು ಪ್ರಮುಖವಾಗಿ ಹತ್ತು . ಸಾಧುಸಜ್ಜನರು, ದೇವಾಧಿದೇವತೆಗಳು ರಾಕ್ಷಸರ ಬಾಧೆಗಳಿಂದ ಕಷ್ಟನಷ್ಟಗಳಿಗೆ ಈಡಾದಾಗ ಭಗವಂತ ವಿಷ್ಣುವನ್ನು ಪರಿಹಾರಕ್ಕಾಗಿ ಪ್ರಾರ್ಥಿಸಿದರು. ಸಮಯಸಂದರ್ಭಗಳಿಗೆ ತಕ್ಕಂತೆ ವೇಷವನ್ನು ತಾಳಿ, ದುಷ್ಟಸಂಹಾರ ಮಾಡಿ, ಶಾಂತಿ ಸ್ಥಾಪನೆ ಮಾಡಿದ ಭಗವಂತ. ಸಂತ ಕಬೀರರ ಒಂದು ಹಾಡಿನ ರೀತಿ ಹೀಗಿದೆ: ಮೊದಲೆರಡು ಅವತಾರಗಳು ಜಲಚರಗಳಾಗಿ (ಮತ್ಸ್ಯ – ಕೂರ್ಮ) ಮೂರು ನಾಲ್ಕನೆಯದು ಮೃಗರೂಪ (ವರಾಹ – ನರಸಿಂಹ) ಐದು–ಆರು ಬ್ರಾಹ್ಮಣರೂಪಿನಲ್ಲಿ (ವಾಮನ–ಪರಶುರಾಮ) ಏಳು–ಎಂಟು ಕ್ಷತ್ರಿಯವೇಷದಲ್ಲಿ (ರಾಮ–ಕೃಷ್ಣ) ಒಂಭತ್ತು–ಹತ್ತು , ನಂಗಾ–ಭಿಂಗಾ (ಬುದ್ಧ–ಬೆತ್ತಲೆಯಾಗಿ, ಕಲ್ಕಿ–ವಿಚಿತ್ರ ವೇಷಧಾರಿಯಾಗಿ). ಆದರೆ ಅನೇಕ ಮಹನೀಯರು ಆಗಾಗ ಅವತರಿಸಿ ಸಮಾಜಕಲ್ಯಾಣಕಾಗಿ ಶ್ರಮಿಸಿ ಅಮರರಾಗಿ

ದ್ದಾರೆ. ಅಂಬಿಕಾತನಯದತ್ತರು 'ಗಂಗಾವತರಣ' ಕವನದಲ್ಲಿ ಪ್ರಾರ್ಥಿಸುತ್ತಾರೆ: 'ಇಳಿದು ಬಾ ತಾಯಿ, ಇಳಿದು ಬಾ' ಎಂದು. ಅದೇ ಕವನದ ಒಂದು ಸಾಲು ಹೀಗಿದೆ. 'ಅವತಾರವೆಂದೆಂಬೆ ಈ ಅಧಃಪಾತವನ್ನೆ' ಎಂದು. ಭಗವಂತ ಧರೆಗೆ ಇಳಿದು ಬಂದು, ಧರ್ಮರಕ್ಷಣೆ ಮಾಡಿ, ಜನಜೀವನವನ್ನು ಸುಗಮಗೊಳಿಸಿ, ಪತಿತ-ಪಾಮರರನ್ನು ಪಾವನಗೊಳಿಸಿ, ಉದ್ಧಾರ ಮಾಡುವ ಸಲುವಾಗಿ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬಾಳಿ ಅಧರ್ಮ ನಾಶಮಾಡುವುದೇ ಅವತಾರದ ಮಹತ್ವವೆಂದು ತಿಳಿಸುತ್ತಾರೆ.

ಒಂದು ಸತ್ಯಕಥೆ ನೆನಪಿಗೆ ಬರುತ್ತಿದೆ. ಮೊಗಲ್ ಚಕ್ರವರ್ತಿ ಅಕ್ಬರ್, ಒಂದು ದಿನ ಬೀರಬಲ್ಲನಿಗೆ ಪ್ರಶ್ನೆ ಹಾಕುತ್ತಾನೆ. ''ಲೋಕದಲ್ಲಿ ಕಷ್ಟ-ಕೋಟಲೆಗಳಿಗೆ ಜನರು ಸಿಲುಕಿದಾಗ ದೇವರು ತಾನೇ ಏಕೆ ಅವತಾರವೆತ್ತಿ ಬರುತ್ತಾನೆ? ಪರಿವಾರ ದೇವತೆಗಳಲ್ಲಿ ಯಾರೋಬ್ಬರನ್ನಾದರೂ ಕಳುಹಿಸಬಹುದಲ್ಲವೆ?'' ಎಂದು. ಬೀರ್‌ಬಲ್ ''ಮಹಾಸ್ವಾಮಿ ಇದಕ್ಕೆ ಉತ್ತರ ತಕ್ಷಣ ನೀಡಲು ಅಸಾಧ್ಯ. ಸ್ವಲ್ಪ ಕಾಲಾವಕಾಶ ಕೊಡಿ'' ಎಂದ. ''ಸರಿ'' ಎಂದ ಅಕ್ಬರ್. ಅವನಿಗೆ ನಾನಾ ಕೆಲಸ, ಕಾರ್ಯಗಳ ನಡುವೆ ಈ ವಿಷಯ ಮರೆತೇ ಹೋಗಿತ್ತು. ಕೆಲವು ದಿನಗಳ ನಂತರ ಅಕ್ಬರ್ ಒಂದು ದಿನ ಯಮುನಾ ನದಿಯಲ್ಲಿ ನೌಕಾವಿಹಾರವನ್ನು ಏರ್ಪಡಿಸಿದ. ಬೀರಬಲ್ಲನಿಗೂ ಆಹ್ವಾನವಿತ್ತು. ಸಂಜೆ ಸಮಯಕ್ಕೆ ಸರಿಯಾಗಿ ಅಕ್ಬರ್ ಹಾಗೂ ಪರಿವಾರದವರೆಲ್ಲ ನಿಗದಿತ ಸ್ಥಳಕ್ಕೆ ಬಂದು ಸೇರಿದರು. ಆದರೆ ಬೀರಬಲ್ ಇನ್ನೂ ಬಂದಿರಲಿಲ್ಲ. ಬೀರಬಲ್ ಇಲ್ಲದಿದ್ದರೆ ಹೇಗೆ? ಅವನಿಗಾಗಿ ಕಾಯುತ್ತಿದ್ದರು. ಮುಸ್ಸಂಜೆ ಸಮಯ. ಬೀರಬಲ್ ಕೈಯಲ್ಲಿ ಏನನ್ನೋ ಎತ್ತಿಕೊಂಡು ಓಡೋಡುತ್ತ ಬಂದ. ''ಮಹಾಸ್ವಾಮಿ, ರಾಜಕುಮಾರರು ತಾವೂ ನನ್ನ ಜೊತೆ ಬರುತ್ತೇನೆಂದು ಹಠ ಹಿಡಿದಿದ್ದರಿಂದ ಅವರನ್ನು ಸುಧಾರಿಸುತ್ತ ಕರೆತರಲು ತಡವಾಯಿತು, ಕ್ಷಮಿಸಬೇಕು'' ಎನ್ನುತ್ತಾ ಆತುರಾತುರವಾಗಿ ನೌಕೆಯನ್ನು ಹತ್ತಿದ. ಅಕ್ಬರನಿಗೆ ಬೀರಬಲ್ಲನ ಆಗಮನದಿಂದ ಸಂತೋಷವಾಯಿತು. ಕೂಡಲೇ ನೌಕೆಯನ್ನು ಮುಂದೆ ಸಾಗಿಸುವಂತೆ ಅಪ್ಪಣೆ ಕೊಟ್ಟ. ಬೇರೆ ಕಡೆ ಗಮನವಿಲ್ಲ. ನೌಕೆ ಸ್ವಲ್ಪದೂರ ಸಾಗಿತಷ್ಟೆ. ಬೀರಬಲ್, ''ಹಾ! ರಾಜಕುಮಾರರು ನದಿಗೆ ಬಿದ್ದುಬಿಟ್ಟರು'' ಎಂದು ಕೂಗಿದ. ಅಕ್ಬರ್, ''ಏನಂದೆ?'' ಎನ್ನುತ್ತಾ ನದಿಯಲ್ಲಿ ಬಿದ್ದ ರಾಜಕುಮಾರನನ್ನು ರಕ್ಷಿಸಲು ತಾನೇ ನದಿಗೆ ಧುಮುಕಿದ! ಬೀರಬಲ್ ತೋರಿಸಿದ ಸ್ಥಳದಲ್ಲಿ ಹುಡುಕಿ, ಮೇಲಕ್ಕೆ ತಂದ. ಆದರೆ ಅದು ಒಂದು ಮೇಣದ ಬೊಂಬೆಯಾಗಿತ್ತು! ಅಕ್ಬರ್ ಸಿಟ್ಟಿನಿಂದ, ''ಇದೇನು ಬೀರಬಲ್? ನನ್ನೊಂದಿಗೆ ಹುಡುಗಾಟ?'' ಎಂದಾಗ ಬೀರಬಲ್ ಸಾವಧಾನವಾಗಿ, ''ಮಹಾಸ್ವಾಮಿ, ಅಂದಿನ ನಿಮ್ಮ ಪ್ರಶ್ನೆಗೆ ಇದು ಉತ್ತರ. ಇಲ್ಲಿ ನಿಮ್ಮ ಸೇವಕರು ಇದ್ದರೂ ಸಹ, 'ರಾಜಕುಮಾರರು ಬಿದ್ದುಬಿಟ್ಟರು' ಎಂದಾಗ ನೀವೇಕೆ ನೀರಿಗೆ ಧುಮುಕಿ ಬಿಟ್ಟಿರಿ? ನಿಮ್ಮ ಸಂತಾನದ ರಕ್ಷಣೆಗಾಗಿ ಅಲ್ಲವೆ? ಹಾಗೆಯೇ ಭಗವಂತ ತನ್ನ ಸಂತಾನದ ಕಷ್ಟವನ್ನು ಪರಿಹರಿಸಿ, ರಕ್ಷಿಸುವುದಕ್ಕಾಗಿ ತಾನೇ ಅವತರಿಸಿ ಬರುತ್ತಾನೆ'' ಎಂದು ಉತ್ತರಿಸಿದ.

ಶ್ರೀರಾಮಕೃಷ್ಣರ ಅವತಾರದ ವಿಶೇಷತೆ ಇಲ್ಲಿವೆ. ಭಾರತದಲ್ಲಿದ್ದ ಅಂದಿನ ಸಾಮಾಜಿಕ, ಧಾರ್ಮಿಕ ಗೊಂದಲದ ಪರಿಹಾರಕ್ಕಾಗಿ ತಾನೇ ಮುನ್ಸೂಚನೆ ಕೊಟ್ಟು, ಖುದಿರಾಮ ಚಟ್ಟೋಪಾಧ್ಯಾಯ ಮತ್ತು ಚಂದ್ರಮಣೀ ದೇವಿ ದಂಪತಿಗಳ ಮಗನ ರೂಪದಲ್ಲಿ ಜನಿಸಿದ, ಗಯಾವಿಷ್ಣು ಗದಾಧರ! ಇವರಲ್ಲಿ ಬಾಲ್ಯದಿಂದಲೇ ಎರಡು ವಿಶೇಷತೆಗಳನ್ನು ಕಾಣುತ್ತೇವೆ. ಪ್ರಕೃತಿಯ ಸೌಂದರ್ಯದಲ್ಲಿ ಮೈಮರೆತು, ಆನಂದವನ್ನು ಅನುಭವಿಸುವುದು, ಮತ್ತೊಂದು ತಮ್ಮ ಸರಳ ಭಾಷೆಯಲ್ಲಿ ಪಂಡಿತೋತ್ತಮರ ವಾದ-ವಿವಾದಗಳಿಗೆ ಪರಿಹಾರ ಸೂಚಿಸುತ್ತಿದ್ದುದು. ಇವೇ ಮುಂದೆ ಧರ್ಮಸಂಸ್ಥಾಪನೆಗೆ ಪ್ರಯೋಗಿಸಿದ ದಿವ್ಯಾಸ್ತ್ರಗಳಾದುವೆನ್ನಬಹುದು.

ಯುವಕ ಶ್ರೀರಾಮಕೃಷ್ಣರು ತಮ್ಮ ಅಣ್ಣನೊಡನೆ ಕೋಲ್ಕತ್ತಕ್ಕೆ ಬಂದರು. ಅವರು ಸ್ಪಷ್ಟವಾಗಿ ಹೇಳುತ್ತಾರೆ, ''ಮೂರು ಕಾಸು ಸಂಪಾದನೆಯ ವಿದ್ಯೆ ನನಗೆ ಬೇಡ. ವಿಶ್ವವನ್ನೇ ಆವರಿಸುವ 'ಶಕ್ತಿ'ಯನ್ನು ಅರಿಯಲು ಸಾಧನೆ ಮಾಡುತ್ತೇನೆ'' ಎಂದು. ಅದಕ್ಕೆ ತಕ್ಕಂತೆ ರಾಣಿ ರಾಸಮಣಿ ಕಟ್ಟಿಸಿದ ಭವತಾರಿಣಿ ದೇವಾಲಯದ ಅರ್ಚಕರಾಗಿ ಸೇವೆ ಸಲ್ಲಿಸುವ ಅವಕಾಶ ತಾನಾಗಿಯೇ ಒದಗಿ ಬಂತು. ಸುಮಾರು ಹನ್ನೆರಡು ವರ್ಷಗಳ ಕಠಿಣ ಸಾಧನೆಯಿಂದ ಅವರು ಸತ್ಯಸಾಕ್ಷಾತ್ಕಾರವನ್ನು ಪಡೆದರು. 'ಭವತಾರಿಣಿ' ಅವರಿಗೆ ಶಿಲಾಮೂರ್ತಿಯಲ್ಲ, ಚಿನ್ಮಯಿ! ಅವರು ತಾಯಿಯ ಮಡಿಲಿನ ಶಿಶುವಾದರು! ವಿಶ್ವವೆಲ್ಲವೂ ಒಂದೇ ಶಕ್ತಿಯಿಂದ ಆವೃತವಾಗಿದೆ. ಪ್ರತಿಯೊಂದರಲ್ಲಿಯೂ 'ತಾಯಿ'ಯನ್ನೇ ಕಂಡರು. 'ಜೀವ-ಶಿವ' ಅಭೇದವೆಂದರಿತರು. 'ದೇವನೊಬ್ಬ-ನಾಮ ಹಲವು' ಎಂದು ಖುದ್ದಾಗಿ, ಸಾಧಿಸಿ ಅನುಭವಿಸಿದರು. ಇಂತಹ ಉನ್ಮಾದದ ಅವಸ್ಥೆಯನ್ನು ಆಗಿನ ಜನರು ತಮ್ಮದೇ ದೃಷ್ಟಿಕೋನದಲ್ಲಿ ನೋಡಿ, ''ಹುಚ್ಚು ಹಿಡಿದಿದೆ, ಹುಚ್ಚು ಪೂಜಾರಿ'' ಎಂದು ಕರೆದರು. ದೇವಸ್ಥಾನದ ಮೇಲ್ವಿಚಾರಕ ಮಥುರನಾಥ ಮಾತ್ರ ಇದನ್ನು ಒಪ್ಪಲಿಲ್ಲ. ಶ್ರೀರಾಮಕೃಷ್ಣರಲ್ಲಿ ಅವನಿಗೆ ಶ್ರದ್ಧಾ-ಭಕ್ತಿ ಗಳಿದ್ದವು.

ಇವರ ವಿಶೇಷತೆಯನ್ನು ಬಹಿರಂಗಪಡಿಸುವ ಸಲುವಾಗಿ ಎಂಬಂತೆ ಭೈರವಿ ಬ್ರಾಹ್ಮಣಿಯೊಬ್ಬಳು ದಕ್ಷಿಣೇಶ್ವರಕ್ಕೆ ಬಂದಳು. ಶ್ರೀರಾಮಕೃಷ್ಣರ ನಡವಳಿಕೆಗಳನ್ನು ಕಂಡು, 'ಇದು ಹುಚ್ಚಲ್ಲ. ಅವತಾರಪುರುಷನ ಲಕ್ಷಣ' ಎಂದು ಪಂಡಿತರ ಸಭೆಯಲ್ಲಿ ಆಕೆ ಶಾಸ್ತ್ರಾಧಾರ ಸಹಿತವಾಗಿ ಘೋಷಿಸಿದಳು. ಅನಂತರ ಪರೀಕ್ಷಿಸಲೋ ಅಥವಾ ಸಂಶಯ ಪರಿಹಾರಕ್ಕಾಗಿಯೋ ಪಂಡಿತರು, ವಿದ್ವಾಂಸರು, ಯುವಕರು, ಹಾಗೂ ಸಮಾಜದ ಎಲ್ಲ ವರ್ಗದ ಜನರೂ ದಕ್ಷಿಣೇಶ್ವರದ ಯೋಗೀಂದ್ರನ ಬಳಿಗೆ ಬಂದರು. ತಕ್ಕ ಸಮಾಧಾನವನ್ನೂ ಪಡೆದರು. ಸನಾತನ ಧರ್ಮದ ಮೇಲೆ

ಮುಸುಕಿದ್ದ ಧೂಳನ್ನು ಝಾಡಿಸಿ, ನಿಜವಾದ ಧರ್ಮವೇನೆಂಬು ದನ್ನು ಅರಿತರು. 'ಧರ್ಮ'ದ ಅರ್ಥ ಸಂಕುಚಿತವಾಗಿ, ಮತ, ಜಾತಿ, ಪಂಗಡಗಳಲ್ಲಿ ಹಂಚಿಹೋಗಿತ್ತು. ಧರ್ಮದ ಹೆಸರಿನಲ್ಲಿ ಸಂಘರ್ಷ ನಡೆದು ಜನಜೀವನ ಅಸ್ತವ್ಯಸ್ತವಾಗಿತ್ತು. ಸಾಮಾನ್ಯ ಜನರ ಬದುಕು ಕ್ರಿಮಿಕೀಟಗಳಿಗಿಂತ ಕಡಿಮೆಯಾಗಿತ್ತು. ಅಧರ್ಮ ಖಂಡನೆಗೆ, ಧರ್ಮಸಂಸ್ಥಾಪನೆಗೆ ಅವತಾರಪುರುಷ ರಾದ ಶ್ರೀರಾಮಕೃಷ್ಣರು ತಾವು ಸಾಧಿಸಿ ಸಾಕ್ಷಾತ್ಕರಿಸಿಕೊಂಡಿದ್ದ, ಎರಡು ದಿವ್ಯ ಅಸ್ತ್ರಗಳನ್ನು ಪ್ರಯೋಗಿಸಿದರು. 'ದೇವನೊಬ್ಬ ನಾಮ ಹಲವು'; 'ಜೀವಸೇವೆಯೇ ಈಶಸೇವೆ' — ಇವು ಆಗಿನ ಸಾಮಾಜಿಕ ವ್ಯವಸ್ಥೆಯನ್ನು ಸರಿಪಡಿಸುವ ದಿವ್ಯಮಂತ್ರಗಳಾ ದವು. ಶ್ರೀರಾಮಕೃಷ್ಣರು 'ಸರ್ವಧರ್ಮ ಸಮನ್ವಯಾಚಾರ್ಯ' ರೆನಿಸಿ, ಸಮಾಜಕಲ್ಯಾಣಕ್ಕೆ ನೆರವಾದರು; ಧರ್ಮೋದ್ಧಾರಕ ರೆನಿಸಿದರು.

ಯಾವುದೇ ವಿಶೇಷ ಆಡಂಬರಗಳಿಲ್ಲ, ವಿಶೇಷ ವೇದಿಕೆ ಇಲ್ಲ. ದಕ್ಷಿಣೇಶ್ವರ ಗುಡಿಯಲ್ಲಿಯೇ ವೇದ ವೇದಾಂತಗಳ ಸಾರ ವನ್ನು ಶ್ರೀಸಾಮಾನ್ಯನಿಗೇಕೆ, ಪಾಮರನಿಗೂ ಮನ ಮುಟ್ಟುವಂತೆ ತಿಳಿಸಿದರು. ಅಲ್ಲಿಗೆ ಬಂದವನು ಮಹಾಮೇಧಾವಿ, ಆಂಗ್ಲಭಾಷಾ ಪರಿಣತನಾಗಿದ್ದ, ಬ್ರಹ್ಮಸಮಾಜದ ಸದಸ್ಯನಾಗಿದ್ದ. 'ದೇವರಿದ್ದಾ ನೆಯೆ?' ಎಂಬ ಸಂದೇಹದೊಂದಿಗೆ ಬಂದ ನರೇಂದ್ರ ! ಶ್ರೀರಾಮ ಕೃಷ್ಣರ ನಡೆ-ನುಡಿಗಳಿಂದ ಆಕರ್ಷಿತನಾದ. 'ಜೀವ-ಶಿವ'ರ ಅಭೇದವನ್ನರಿತ. 'ಜೀವ ಸೇವೆ-ಶಿವಸೇವೆ' ಎಂಬ ಗುರುವಾಕ್ಯಕ್ಕೆ ಮಾರುಹೋದ. ಗುರುವಿನ ಆಣತಿಯಂತೆ ಸಂಘ ಸ್ಥಾಪಿಸಿ, ಇಡೀ ವಿಶ್ವಕ್ಕೇ ಗುರುವಿನ ಸಂದೇಶವನ್ನು ಸಾರಿ, ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರಿ, ಅವರನ್ನು 'ಅವತಾರ ವರಿಷ್ಠ' ಎಂದು ಸ್ತುತಿಸಿದ.


ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರುವ, ಶ್ರೀರಾಮಕೃಷ್ಣರ ಬಳಿಗೆ ಬಂದ ಮಾಸ್ಟರ್ ಮಹೇಂದ್ರನಾಥ ಗುಪ್ತರ ದಿನಚರಿಯ ಬರವಣಿಗೆ ಮಹತ್ತಾದದ್ದು. ಸುಮಾರು ಐದು ವರ್ಷಗಳ ಕಾಲ ಪ್ರತ್ಯಕ್ಷವಾಗಿ ತಾನು ಕಂಡು ಅನುಭವಿಸಿ ದುದನ್ನು, ದಿನಾಂಕಗಳೊಡನೆ ಬರೆದಿಟ್ಟು ಜಗತ್ತಿನ ಕಲ್ಯಾಣಕ್ಕೆ ನೆರವಾಗಿದ್ದಾರೆ. ಬಂಗಾಳಿ ಭಾಷೆಯಲ್ಲಿದ್ದುದನ್ನು ಕನ್ನಡ ಭಾಷೆಗೆ ಅನುವಾದಗೊಂಡು, 'ವಚನವೇದ' ಎಂಬ ಸಾರ್ಥಕ ನಾಮ ದೊಂದಿಗೆ ಈ ದಿವ್ಯಗ್ರಂಥವು ಶ್ರೀರಾಮಕೃಷ್ಣರ ಅವತಾರ ವಿಶೇ ಷತೆಯನ್ನು ಸಾರಿ ಮೆರೆಯುತ್ತಿದೆ, ಧರ್ಮರಕ್ಷಣೆ ಮಾಡುತ್ತಿದೆ ಎನ್ನಬಹುದು. ರಾಷ್ಟ್ರಕವಿ ಕುವೆಂಪು ಅವರು 'ವಚನವೇದ' ವನ್ನು 'ಕರತಲ ದೇಗುಲ'ವೆಂದಿದ್ದಾರೆ. ಈ ದೇಗುಲದೊಳಗೆ ಹೊಕ್ಕಾಗ ಶ್ರೀರಾಮ ಕೃಷ್ಣರ ನುಡಿಗಳು ಮನುಷ್ಯನ ಸಾರ್ಥಕ ಬದುಕಿಗೆ ಮಾರ್ಗ ದರ್ಶನ ಮಾಡುವುದರಲ್ಲಿ ಸಂಶಯವಿಲ್ಲ.

ಇಂದು ನಮಗೆ ಶ್ರೀರಾಮಕೃಷ್ಣರ ಎರಡು ಭಾವಚಿತ್ರಗಳು ಲಭ್ಯವಿವೆ. ಒಂದು ಧ್ಯಾನಸ್ಥಿತ ಮೂರ್ತಿ! ಪ್ರತಿಯೊಬ್ಬರಿಗೂ ಆತ್ಮೋದ್ಧಾರಕ್ಕೆ ಜಪ-ತಪ ಸಾಧನೆಗಳು ಆವಶ್ಯಕವೆನ್ನುವುದನ್ನು ಸೂಚಿಸುವಂತಿದೆ ಈ ಚಿತ್ರ. ಇದು ಆರಾಧನಾಮೂರ್ತಿ! ಇನ್ನೊಂದು ಸಮಾಧಿಯಲ್ಲಿ ನಿಂತಿರುವುದು. ಹಸನ್ಮುಖ, ಅರ್ಧ ನಿಮೀಲಿತ ನೇತ್ರ, ಶುಭ್ರವಸ್ತ್ರಧಾರಿ, ಬಲಗೈ ಮೇಲೆತ್ತಿದ್ದಾರೆ. ಎಡಗೈ ಸೊಂಟದ ಬಳಿ ಅಗಲಿಸಿದಂತಿದೆ. ಉಟ್ಟಿರುವ ಧೋತ್ರ ವನ್ನು ಮೇಲೆತ್ತಿ, ಸೊಂಟಕ್ಕೆ ಪಟ್ಟಿಕಟ್ಟುವಂತೆ ಕಟ್ಟಿದ್ದಾರೆ. ''ಜೀವ ಸೇವೆಗೆ ಸೊಂಟಕಟ್ಟಿ ಏಳಿ!'' ಎನ್ನುತ್ತಿದ್ದಾರೆನೋ ಎಂಬಂತಿದೆ. ತಳಮಟ್ಟದಿಂದ ಹಂತ ಹಂತವಾಗಿ ಸಾರ್ಥಕ ಬದುಕನ್ನೇ ನಡೆಸಿ ದೇವತ್ವದ ಕಡೆಗೆ ಸಾಗಿರಿ ಎಂಬ ಸಂದೇಶ ನೀಡುವಂತಿರುವ ಅವರ ಬಲಕೈ ಮೇಲೆತ್ತಿದೆ. ಶ್ರೀರಾಮಕೃಷ್ಣ ಮಹಾಸಂಘದ ಧ್ಯೇಯ ವಾಕ್ಯಗಳಾದ 'ಆತ್ಮನೋ ಮೋಕ್ಷಾರ್ಥಂ! ಜಗದ್ಧಿತಾಯ ಚ' ಇದಕ್ಕೆ ಸಂಬಂಧಪಟ್ಟಂತಿವೆ ಈ ಎರಡೂ ಚಿತ್ರಗಳು.

ಸ್ವಾಮಿ ವಿವೇಕಾನಂದರ ಸ್ತುತಿಯಲ್ಲಿನ 'ಅವತಾರ ವರಿಷ್ಠ' ಎಂಬುದಕ್ಕೆ ಸ್ವಾಮೀಜಿಯವರಿಗೇ, ಶ್ರೀರಾಮಕೃಷ್ಣರು ತಾವು ಅವ ತಾರ ಪುರುಷರೆಂಬುದನ್ನು ಪ್ರತ್ಯಕ್ಷವಾಗಿ ತಿಳಿಸಿದ ಘಟನೆ ವಿಶೇಷ ವಾದದ್ದು. ಶ್ರೀರಾಮಕೃಷ್ಣರ ಮಹಾಸಮಾಧಿಗೆ ಒಂದೆರಡು ದಿನ ಮುಂಚೆ ನರೇಂದ್ರನಾಥ, ಯಾರನ್ನು ತನ್ನ ಗುರುವೆಂದು ಸ್ವೀಕರಿ ಸಿದ್ದನೋ, ಅವರ ಬಗ್ಗೆ ಮನದಲ್ಲಿ ಒಂದು ಸಂದೇಹ ಮೂಡಿತು. 'ಇಂತಹ ದಾರುಣ ಸ್ಥಿತಿಯಲ್ಲಿಯೂ ತಮ್ಮನ್ನು ಅವತಾರ ಪುರುಷ ರೆಂದು ಇವರು ಸಾರಬಲ್ಲರೆ?' ಎಂದು. ಮಾತನಾಡದ ಸ್ಥಿತಿ ಯಲ್ಲಿದ್ದ ಶ್ರೀರಾಮಕೃಷ್ಣರು ಬಹಳ ಕಷ್ಟದಿಂದ ಹೇಳುತ್ತಾರೆ: 'ಹಿಂದೆ ಯಾರು ರಾಮನಾಗಿದ್ದನೋ, ಕೃಷ್ಣನಾಗಿದ್ದನೋ ಅವನೇ ಈಗ ರಾಮಕೃಷ್ಣನಾಗಿದ್ದಾನೆ' ಎಂದು. ತನ್ನ ಸಂದೇಹಕ್ಕೆ ನಾಚಿಕೆ ಪಟ್ಟುಕೊಂಡು, ಶ್ರೀರಾಮಕೃಷ್ಣರ ಅವತಾರಕಾರ್ಯವನ್ನು ಮನಸ್ಸಿ ನಲ್ಲಿಯೇ ಚಿಂತಿಸತೊಡಗಿದನು. ಅವರ ಸಂದೇಶವನ್ನು ಜಗತ್ತಿಗೇ ಸಾರಿ, ಅವರ ವರಿಷ್ಠತೆಯನ್ನು ಎತ್ತಿಹಿಡಿದು, ಸ್ತುತಿಸಿದನು.

ಶ್ರೀರಾಮಕೃಷ್ಣರು 'ಸರ್ವಧರ್ಮಸಮನ್ವಯ' ಹಾಗೂ 'ಜೀವ ಸೇವೆ-ಶಿವಸೇವೆ'ಯ ಬೀಜವನ್ನು ತಮ್ಮ ಅವತಾರದಲ್ಲಿ ಬಿತ್ತಿದರು. ಶ್ರೀರಾಮಕೃಷ್ಣರ ಸಹಧರ್ಮಿಣಿಯಾಗಿ, ಅವರ ಅವ ತಾರ ಕಾರ್ಯಕ್ಕೆ ಬೆಂಬಲಿಸಿ, ಜಗನ್ಮಾತೆಯೆನಿಸಿ, ಕರ್ಮಯೋಗಿನಿ ಯಾಗಿ, ಶ್ರೀರಾಮಕೃಷ್ಣ ಮಹಾಸಂಘದ ಮೂಲಕ ವಿಶ್ವಕ್ಕೆ, ಸಂಘದ ವೃಕ್ಷಕ್ಕೆ ನೀರೆರೆದು ಪೋಷಿಸಿದರು ಶ್ರೀಮಾತೆ ಶಾರದಾ ದೇವಿ. ಸ್ವಾಮಿ ವಿವೇಕಾನಂದರು ಜಗತ್ತಿನೆಲ್ಲೆಡೆ ತಮ್ಮ ಗುರುವಿನ ಸಂದೇಶವನ್ನು ಸಾರಿ, ಅವರ ದಿವ್ಯಮಂತ್ರಗಳಾದ 'ದೇವನೊಬ್ಬ ನಾಮ ಹಲವು', 'ಜೀವಸೇವೆ-ಶಿವಸೇವೆ'ಯ ಮೂಲಕ ಅವ ತಾರ ವೈಶಿಷ್ಟ್ಯತೆಯನ್ನು ಹರಡಿದ್ದಾರೆ. ಇಂದು ವಿಶ್ವದಾದ್ಯಂತ ವಿಶಾಲವಾಗಿ ಹರಡಿರುವ ಸಂಘ, ತಮ್ಮ ಕಾರ್ಯಗಳ ಮೂಲಕ ಶ್ರೀರಾಮಕೃಷ್ಣರ ಅವತಾರ ವಿಶೇಷತೆಯನ್ನು ಸಾರಿ ಸೇವೆ ಸಲ್ಲಿಸು ತ್ತಿದೆ. ಕಾಲಕ್ಕೆ ತಕ್ಕಂತೆ ಧರ್ಮೋದ್ಧಾರಕ್ಕಾಗಿ ಅವತಾರ ವೈಶಿಷ್ಟ್ಯತೆ!

'ಅವತಾರ ವರಿಷ್ಠಾಯ ರಾಮಕೃಷ್ಣಾಯ ತೇ ನಮಃ'



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೩

ಸ್ವಾಮೀಜಿಯವರ ಜೀವನ ಚರಿತ್ರೆಯ ಮೂರನೇ ಸಂಪುಟವು ಕೊಲ್ಕತ್ತೆಯಲ್ಲಿ ಮುದ್ರಣವಾಗತೊಡಗಿತು. ಅಂಚೆಯಲ್ಲಿ ವಿರಜಾನಂದರಿಗೆ ಅದರ ಕರಡಚ್ಚು ಬರುತ್ತಿತ್ತು. ಸೀತಾರಾಮನ್‌ನ ಸಹಾಯದಿಂದ ಅದನ್ನು ಬೇಗ ತಿದ್ದಿ ಹಿಂತಿರುಗಿ ಕಳುಹಿಸುತ್ತಿದ್ದರು. ಮೂರನೇ ಸಂಪುಟದ ಪಾಂಡುಲಿಪಿಯನ್ನು ಸ್ವಾಮಿ ಶಾರದಾನಂದರು ಮತ್ತು ಸ್ವಾಮಿ ಶುದ್ಧಾನಂದರು ಆಮೂಲಾಗ್ರವಾಗಿ ಪರಿಶೀಲಿಸಿ ಸಂತೋಷಪಟ್ಟಿದ್ದರು. ಸ್ವಾಮಿ ಶುದ್ಧಾನಂದರು ಇದರ ಬಗ್ಗೆ ಕೆಲವು ಅಮೂಲ್ಯ ಸಲಹೆಗಳನ್ನಿತ್ತು ಕಾಳೀಕೃಷ್ಣರಿಗೆ ಹೀಗೆ ಪತ್ರ ಬರೆದಿದ್ದರು:

''ನಿನ್ನಂತೆ ನಿರಂತರ ಶ್ರಮವಹಿಸಿ ಇಷ್ಟು ಬೃಹದಾಕಾರದ ಜೀವನ ಚರಿತ್ರೆಯನ್ನು ಪ್ರಕಾಶಿಸಬಲ್ಲ ಮತ್ತೊಬ್ಬರನ್ನು ನಾ ಕಾಣೆ.'' ತಮ್ಮ ಗುರುಭಾಯಿಗಳಿಂದ ಈ ರೀತಿಯ ಪ್ರಶಂಸಾ ಪತ್ರ ಬರಲು, ವಿರಜಾನಂದರು ತುಂಬ ಉತ್ಸಾಹಿತರಾದರು.

ವಿರಜಾನಂದರ ಜೀವನವು ಬಿಡಾರದಲ್ಲೇ ಮುಂದುವರಿಯುತ್ತಿತ್ತು. ಫೆಬ್ರವರಿ ೨೧ರಂದು ಶ್ರೀರಾಮಕೃಷ್ಣರ ಜಯಂತಿಯೂ ಬಂದಿತು. ಬಿಡಾರದಲ್ಲೇ ಜಯಂತಿಯನ್ನು ಆಚರಿಸಲಾಯಿತು. ಅಂದು ಎಲ್ಲ ಕೆಲಸಗಾರರಿಗೂ ಭೂರಿಭೋಜನ ಮಾಡಿಸಿ, ವಿರಜಾನಂದರು ನರನಾರಾಯಣರ ಸೇವೆಯನ್ನು ಪೂರೈಸಿದರು. ಆಶ್ರಮ ಕಟ್ಟಡದ ಪ್ರವೇಶ ದ್ವಾರದಲ್ಲಿ ಸ್ವಾಮೀಜಿಯವರಿಂದ ಪರಿಕಲ್ಪಿತವಾದ ಸಂಘದ ಚಿಹ್ನೆಯನ್ನು ಕೆತ್ತಿಸಬೇಕೆಂಬುದು ವಿರಜಾನಂದರ ಇಚ್ಛೆ. ಆದರೆ ಕೆತ್ತಲು ಶಿಲ್ಪಿಗಳೆಲ್ಲಿಂದ ಸಿಗುವರು? ಆದ್ದರಿಂದ ವಿರಜಾನಂದರೇ ಕಲ್ಲಿನ ಮೇಲೆ ಚಿಹ್ನೆಯನ್ನು ಬರೆದರು. ಮೇಸ್ತ್ರಿಗಳು ಅದನ್ನು ಕೆತ್ತಿಕೊಟ್ಟರು. ಆ ಕಲ್ಲನ್ನು ಬಾಗಿಲಿನ ಮೇಲ್ಗೋಡೆಯಲ್ಲಿ ಹುದುಗಿಸಲಾಯಿತು.[೧]

ಇಷ್ಟರಲ್ಲಿ ವಿರಜಾನಂದರಿಗೊಂದು ದಾರುಣ ಸುದ್ದಿ ಬಂತು, 'ಸ್ಯಾನ್‌ಫ್ರಾನ್ಸಿಸ್ಕೋದಲ್ಲಿದ್ದ ಸ್ವಾಮಿ ತ್ರಿಗುಣಾತೀತಾನಂದರು ಒಬ್ಬ ತಲೆಗೆಟ್ಟ ಯುವಕ ಸಿಡಿಸಿದ ಬಾಂಬಿನಿಂದಾಗಿ ಆಸ್ಪತ್ರೆಯಲ್ಲಿ ೧೫ ದಿನಗಳಿದ್ದು ನಂತರ ೧೦ನೇ ಜನವರಿ (೧೯೧೫) ಸ್ವಾಮಿ ವಿವೇಕಾನಂದರ ಜಯಂತಿಯಂದು ತಮ್ಮ ದೇಹತ್ಯಾಗ ಮಾಡಿದ್ದಾರೆ' ಎಂದು. ಬಾಂಬನ್ನು ಸಿಡಿಸಿದ ವ್ಯಕ್ತಿಯೂ ಸಹ ಸ್ಥಳದಲ್ಲೇ ಮೃತಪಟ್ಟಿದ್ದ. ಅಕಳಂಕ ಚರಿತ್ರರಾದ ಸ್ವಾಮಿ ತ್ರಿಗುಣಾತೀತರು ಮಹಾ ಕರ್ಮಯೋಗಿಗಳು! ಸ್ವಾಮೀಜಿಯವರ ಆದೇಶದ ಮೇರೆಗೆ ೧೮೯೯ರ ಜನವರಿ ತಿಂಗಳಿಂದ ಬಂಗಾಳಿ ಭಾಷೆಯಲ್ಲಿ 'ಉದ್ಬೋಧನ' ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು.[೨] ನಾಲ್ಕು ವರ್ಷಗಳು ಈ ಕೆಲಸವನ್ನು ಬಹು ದಕ್ಷತೆಯಿಂದ ಮಾಡಿದ್ದರು. ಮಠದ ಆದೇಶದ ಮೇರೆಗೆ ಇವರು ೧೯೦೩ರ ಜನವರಿಯಲ್ಲಿ ಪ್ರಚಾರ ಕಾರ್ಯಕ್ಕಾಗಿ ಅಮೇರಿಕೆಗೆ ಹೋದರು. ಅಲ್ಲಿ ೧೨ ವರ್ಷಗಳ ಕಾಲ ಅವಿಶ್ರಾಂತವಾಗಿ ದುಡಿದರು. ಸ್ವದೇಶಕ್ಕೆ ಒಮ್ಮೆಯೂ ಬರಲಾಗಲಿಲ್ಲ. ಇವರ ದಣಿವರಿಯದ ಪರಿಶ್ರಮದ ಫಲವಾಗಿ ಸ್ಯಾನ್‌ಫ್ರಾನ್ಸಿಸ್ಕೋದ ವೇದಾಂತ ಕೇಂದ್ರವು ಸುಭದ್ರ ಬುನಾದಿಯನ್ನು ಪಡೆಯಿತು, ಹಾಗೂ ಇವರಿಂದಲೇ ಅಲ್ಲಿ 'ಹಿಂದೂ ಟೆಂಪಲ್' ಎಂಬ ಮಂದಿರವು ನಿರ್ಮಿಸಲ್ಪಟ್ಟಿತು.

೧೯೦೬ರಲ್ಲಿ ಕಾಳೀಕೃಷ್ಣರು ಅಮೇರಿಕೆಗೆ ಹೋಗುವುದಿತ್ತು. ಆದರೆ ಹಲವಾರು ಕಾರಣಗಳಿಂದ ಅದು ಕೈಗೂಡಿರಲಿಲ್ಲ. ಕಾಳೀಕೃಷ್ಣರ ಬದಲಿಗೆ ಸುಶೀಲ್ (ಸ್ವಾಮಿ ಪ್ರಕಾಶಾನಂದರು) ಹೋದರು ಹಾಗೂ ಅಲ್ಲಿ ತ್ರಿಗುಣಾತೀತರೊಂದಿಗಿದ್ದರು. ಅಲ್ಲಿಂದ ಸುಶೀಲರು ಬರೆದ ಪತ್ರಗಳಿಂದ ಸ್ವಾಮಿ ತ್ರಿಗುಣಾತೀತರ ಧರ್ಮಪ್ರಚಾರ ಮತ್ತು ಕೆಲಸಕಾರ್ಯಗಳ ಬಗ್ಗೆ ಅಲ್ಪಸ್ವಲ್ಪ ತಿಳಿದುಬರುತ್ತಿತ್ತು. ತ್ರಿಗುಣಾತೀತರು 'ಹಿಂದೂ ಮಂದಿರ'ದ ಗ್ರಂಥಾಲಯದ ನೆಲದಲ್ಲಿ ಎಂಥ ಚಳಿಯಲ್ಲೂ ಸಹ ಕೇವಲ ಒಂದು ಕಂಬಳಿ ಹಾಸಿ ಮಲಗುತ್ತಿದ್ದರು. ಶ್ರೀರಾಮಕೃಷ್ಣರೇ ಕೇಳುತ್ತಿದ್ದಾರೆ ಎಂಬ ಭಾವನೆಯನ್ನಿಟ್ಟುಕೊಂಡು ಪ್ರವಚನಗಳನ್ನು ಕೊಡುತ್ತಿದ್ದರು. ಆದ್ದರಿಂದ ಬಹು ಎಚ್ಚರಿಕೆಯಿಂದ ಮಾತನಾಡುತ್ತಿದ್ದರು. ಯಾವುದಾದರೂ ವಿಚಾರದಲ್ಲಿ ತೀರ್ಮಾನಕ್ಕೆ ಬರಬೇಕಾದಾಗ ರಾಮಕೃಷ್ಣರ ಧ್ಯಾನ ಮಾಡುತ್ತಿದ್ದರು. ಧ್ಯಾನದ ನಂತರ ಯಾವ ವಿಚಾರ ಮನಸ್ಸಿನಲ್ಲಿ ಉದಯವಾಗುತ್ತಿತ್ತೋ ಅದು ಶ್ರೀರಾಮಕೃಷ್ಣರಿಂದ ಅನುಮೋದಿತವೆಂದೇ ಸ್ವೀಕರಿಸುತ್ತಿದ್ದರು. ಮಂದಿರದ ಎದುರು ಒಂದು 'ಎವರ್-ಗ್ರೀನ್-ಕ್ರೀಪರ್'ರನ್ನು (ಸದಾ ಹಚ್ಚ ಹಸಿರಿನ ಲತೆ) ಬೆಳೆಸಿದ್ದರು. 'ಕಠೋರ ಸಾಧನೆಯ ನಡುವೆ ಸ್ವಲ್ಪ ಹಸಿರು ಛಾಯೆ

೧ ೧೯೪೫ರಲ್ಲಿ ಶ್ಯಾಮಲಾತಾಲ್‌ನ ಆಶ್ರಮದ ಮುಖ್ಯ ಕಟ್ಟಡದ ದುರಸ್ತಿ ಹಾಗೂ ಬದಲಾವಣೆಗಳನ್ನು ಮಾಡುವಾಗ ಮೇಲೆ ಹೇಳಿದ, ಲಾಂಛನವಿದ್ದ ಕಲ್ಲನ್ನು ಮೊದಲನೇ ಅಂತಸ್ತಿನ ಗೋಡೆಯ ಮಧ್ಯದಲ್ಲಿ ಇರಿಸಲಾಯಿತು.

೨ ಒಂಬತ್ತು ವರ್ಷಗಳ ಕಾಲ 'ಉದ್ಬೋಧನ' ಪತ್ರಿಕೆಯು ಪಾಕ್ಷಿಕವಾಗಿ (೧೫ ದಿನಗಳಿಗೆ ಒಮ್ಮೆ) ಪ್ರಕಟವಾಗುತ್ತಿತ್ತು . ಅನಂತರ ಅದು ಮಾಸಪತ್ರಿಕೆಯಾಯಿತು.

ಇರುವುದು ಒಳ್ಳೆಯದು' ಎನ್ನುತ್ತಿದ್ದರು. ಒಮ್ಮೆ ತಾನು ವಿವಾಹವಾಗುವುದಾಗಿ ಸುದ್ದಿ ಹಬ್ಬಿಸಿದರು. ಕುತೂಹಲದಿಂದ ಅನೇಕರು ಬಂದು ನೆರೆದರು. ತ್ರಿಗುಣಾತೀತರು ಶ್ರೀರಾಮಕೃಷ್ಣರ ಪಟಕ್ಕೆ ಮಾಲೆ ಹಾಕಿ ತಮ್ಮ ವಿವಾಹವನ್ನು ಮುಗಿಸಿಕೊಂಡರು!

ತ್ರಿಗುಣಾತೀತರು ವೀರಯೋಧನೊಬ್ಬ ರಣರಂಗದಲ್ಲಿ ಮೃತ್ಯುವನ್ನು ವರಿಸುವಂತಹ ಮಹಾನ್ ಆದರ್ಶವನ್ನು ತೋರಿ ಹೋದರು. ಅವರ ಮೃತ್ಯುವಿನಿಂದಾಗಿ ರಾಮಕೃಷ್ಣ ಒಕ್ಕೂಟದಲ್ಲಿ ಭರಿಸಲಾಗದ ಶೂನ್ಯತೆಯುಂಟಾಯಿತು. ಅದೆಂತಹ ಉದಾರ ಹೃದಯದ ಅಮಾಯಕ ಸ್ವಭಾವ ಅವರದು! ಅವರಿಂದ ಪಡೆದ ಪ್ರೀತಿ-ವಾತ್ಸಲ್ಯಗಳು ವಿರಜಾನಂದರ ಸ್ಮೃತಿಪಟಲದಲ್ಲಿ ತೇಲಿ ಬಂದವು. ವರಾಹನಗರ, ಆಲಂಬಜಾರಿನಲ್ಲಿ ಮಠವಿದ್ದಾಗಿನ ನೆನಪುಗಳು:

''ಒಮ್ಮೆ ಶ್ರೀಮಾತೆಯವರನ್ನು ಬಿಟ್ಟು ಬರಲು ಶಾರದಾ ಮಹಾರಾಜರೊಂದಿಗೆ (ಸ್ವಾಮಿ ತ್ರಿಗುಣಾತೀತಾನಂದರು) ಜಯರಾಂಬಾಟಿಗೆ ಹೋಗಿದ್ದೆ. ಆ ಬಾರಿ ಶ್ರೀಮಾತೆಯವರ ಜೊತೆಗೆ ಸ್ತ್ರೀ ಭಕ್ತರಾರೂ ಇರಲಿಲ್ಲ. ವರ್ಧಮಾನದಿಂದ ನಾನು, ಶಾರದಾ ಮಹಾರಾಜರು ಎತ್ತಿನ ಗಾಡಿಯಲ್ಲೂ, ಮಾತೆಯವರು ಪಲ್ಲಕ್ಕಿಯಲ್ಲೂ ಪ್ರಯಾಣಿಸಿದ್ದೆವು. ಆದರೆ ನಮ್ಮ ಎತ್ತಿನ ಗಾಡಿಯು ತಲುಪುವುದು ತಡವಾಗಿ, ಶ್ರೀಮಾತೆಯವರು ತಲುಪುವ ಮುನ್ನ ನಾವೆಲ್ಲಿ ಛತ್ರಕ್ಕೆ ತಲುಪಲಾಗುವುದಿಲ್ಲವೋ ಎಂಬ ಆತಂಕದಿಂದ ಗಾಡಿಯಿಂದಿಳಿದು ಸ್ವಲ್ಪ ದೂರ ನಡೆದು, ಸ್ವಲ್ಪ ದೂರ ಓಡಿ ಅವರಿಗಿಂತ ಮೊದಲೇ ತಲುಪಲು ಪ್ರಯತ್ನಿಸುತ್ತಿದ್ದೆವು. ಇಲ್ಲವೇ ದಾಪುಗಾಲು ಹಾಕುತ್ತ ಪಲ್ಲಕ್ಕಿಯೊಡನೆಯೇ ನಡೆಯುತ್ತಿದ್ದೆವು. ಶ್ರೀಮಾತೆಯವರು ಎಷ್ಟು ಬೇಡವೆಂದರೂ ಕೇಳುತ್ತಿರಲಿಲ್ಲ; ನಮಗೇನೂ ಕಷ್ಟವಾಗುತ್ತಿಲ್ಲ ಎಂದು ಹೇಳುತ್ತಿದ್ದೆವು. ಛತ್ರವನ್ನು ತಲುಪಿದ ಕೂಡಲೇ ನಾವು ಮೊದಲು ಅವರ ಹಾಸಿಗೆಯನ್ನು ಪಲ್ಲಕ್ಕಿಯಿಂದ ತಂದು ಕೊಠಡಿಯಲ್ಲಿ ಹಾಸುತ್ತಿದ್ದೆವು. ಅವರು ಕೈ-ಕಾಲು ತೊಳೆದು ರಾಮಕೃಷ್ಣರ ಪಟ ಮತ್ತು ಪೂಜಾಸಾಮಗ್ರಿಗಳನ್ನು ಹೊರತೆಗೆದು ಒಂದು ಕಡೆ ಸ್ಥಾಪಿಸುತ್ತಿದ್ದರು. ಸ್ವಲ್ಪ ಹೊತ್ತು ವಿಶ್ರಮಿಸಿ, ಸ್ನಾನ ಮಾಡಿ ಪೂಜೆಗೆ ಕುಳಿತುಕೊಳ್ಳುತ್ತಿದ್ದರು. ಅಷ್ಟರಲ್ಲಿ ಶಾರದಾ ಮಹಾರಾಜರು ಅಕ್ಕಿ-ಬೇಳೆ ಮುಂತಾದವುಗಳನ್ನು ಸಂಗ್ರಹಿಸಿ ನೈವೇದ್ಯಕ್ಕಾಗಿ ಅಡಿಗೆಯನ್ನು ಮಡಕೆಯಲ್ಲಿ ಸಿದ್ಧಪಡಿಸುತ್ತಿದ್ದರು. ನಾನವರಿಗೆ ಎಲ್ಲವನ್ನೂ ಹೊಂದಿಸಿ ಕೊಡುತ್ತಿದ್ದೆ. ಶ್ರೀಮಾತೆಯವರ ಪೂಜೆಯಾಗುತ್ತಿದ್ದಂತೆ, ಶಾರದಾ ಮಹಾರಾಜರು ನೈವೇದ್ಯವನ್ನು ತಟ್ಟೆಯಲ್ಲಿ ಜೋಡಿಸಿಟ್ಟು ಕೊಡುತ್ತಿದ್ದರು, ನಾನು ಅದನ್ನು ತೆಗೆದುಕೊಂಡು ಹೋಗಿ ದೇವರ ಮುಂದಿಡುತ್ತಿದ್ದೆ. ಆದರೆ ನಾನೊಬ್ಬ ಕಾಯಸ್ಥ ಹಾಗೂ ಇನ್ನೂ ಬ್ರಹ್ಮಚಾರಿ (ಆಗಿನ್ನೂ ಬ್ರಹ್ಮಚರ್ಯ ದೀಕ್ಷೆಯ ಅನುಷ್ಠಾನ ಪ್ರಚಲಿತವಿರಲಿಲ್ಲ). ಹೇಗೆ ತಾನೇ ಶ್ರೀರಾಮಕೃಷ್ಣರ ನೈವೇದ್ಯದ ಅನ್ನವನ್ನು ಮುಟ್ಟಲಿ? ಎಂದು ಮೊದಲು ಹಿಂಜರಿದೆ. ಶಾರದಾ ಮಹಾರಾಜರದೂ ಕಾಯಸ್ಥ ಶರೀರವೇ ಆದರೂ ಅವರೊಬ್ಬ ಸಂನ್ಯಾಸಿಗಳು ಹಾಗೂ ಶ್ರೀರಾಮಕೃಷ್ಣರ ಜೊತೆಗಿದ್ದವರು. ಶ್ರೀಮಾತೆಯವರನ್ನು ಕೇಳಲಾಗಿ ಅವರು, ''ತೆಗೆದುಕೊಂಡು ಬಾ, ಅದರಿಂದ ದೋಷವೇನೂ ಇಲ್ಲ'' ಎಂದರು. ನಾನು ಅವರ ಅಭಯವಾಣಿಯಿಂದ ಸಮಾಧಾನಗೊಂಡೆ. ಆ ಬಾರಿ ಶ್ರೀಮಾತೆಯವರೊಂದಿಗೆ ಬೇರಾರೂ ಇಲ್ಲದ್ದರಿಂದ ಅವರ ನಿಕಟ ಸಂಪರ್ಕವನ್ನು ಹೊಂದುವ ಮತ್ತು ಅವರ ಸೇವೆಯನ್ನು ಮಾಡುವ ಸೌಭಾಗ್ಯ ನನ್ನದಾಗಿತ್ತು. ಇದರಿಂದ ಬಹಳ ಆನಂದಪಟ್ಟೆ. ಅವರ ದಿಂಬಿನ ಚೀಲವೊಂದು ಕೊಳೆಯಾಗಿ ಹರಿದುಹೋದದ್ದರಿಂದ ಶ್ರೀಮಾತೆಯವರು ಅದನ್ನು ಎಸೆದು ಬೇರೊಂದನ್ನು ಹಾಕಲು ಹೇಳಿದರು. ಆದರೆ ಶ್ರೀಮಾತೆಯವರು ಉಪಯೋಗಿಸಿದ್ದರೆಂದು ಅದನ್ನು ಎಸೆಯದೆ ಭದ್ರವಾಗಿ ಎತ್ತಿಟ್ಟುಕೊಂಡೆ. ಜಯರಾಂಬಾಟಿಯಲ್ಲಿದ್ದಾಗ ಶಾರದಾ ಮಹಾರಾಜರು ಮತ್ತು ನಾನು ಬಹು ದೂರದೂರಕ್ಕೆ ಹೋಗಿ ಶ್ರೀಮಾತೆಯವರ ಪೂಜೆಗೆ ಬೇಕಾದ ಹೂಗಳನ್ನು ಸಂಗ್ರಹಿಸಿ ತರುತ್ತಿದ್ದೆವು. ಅಲ್ಲಿ ಪೂಜೆಯ ಹೂವಿನ ಅಭಾವವನ್ನು ಕಂಡು ಶಾರದಾ ಮಹಾರಾಜರು ವಿವಿಧ ಜಾತಿಯ ಹೂವಿನ ಗಿಡಗಳನ್ನು ನೆಟ್ಟಿದ್ದರು. ಇದರಿಂದಾಗಿ ಮುಂದೆ ಪೂಜೆಗೆ ಹೂವು ಸಿಗುವಂತಾಯಿತು. ಆದರೆ ಅನಂತರದಲ್ಲಿ ಅವುಗಳನ್ನು ಸರಿಯಾಗಿ ನೋಡಿಕೊಳ್ಳುವವರಿಲ್ಲದೆ ಒಣಗಿ ಹೋದವು.''

* * *

೧೯೧೪ನೇ ವರ್ಷದ ನವೆಂಬರ್ ೧೧ರಂದು ಶ್ಯಾಮಲಾತಾಲ್ ಆಶ್ರಮದ ಕಟ್ಟಡ ನಿರ್ಮಾಣಕಾರ್ಯ ಪ್ರಾರಂಭವಾಗಿತ್ತು. ೧೯೧೫ರ ಮೇ ೨೧ರ ಶುಭದಿನದಂದು ಅದರ ಗೃಹಪ್ರವೇಶವಿತ್ತು. ಆರು ತಿಂಗಳು ಡೇರೆಯಲ್ಲಿ ಒಂದೇ ಸಮನೆ ಕೂಲಿ ಮೇಸ್ತ್ರಿಗಳೊಂದಿಗೆ ಕಠಿಣ ದುಡಿತ, ತನ್ನ ಜಪ-ಧ್ಯಾನ, ಕೆಲಸಗಾರರ ಲೆಕ್ಕ-ಪತ್ರ ಇಡುವುದು ಹಾಗೂ ಇವುಗಳೊಂದಿಗೆ ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಬರೆಯುವ ಕೆಲಸ — ನಿಜಕ್ಕೂ ವಿರಜಾನಂದರ ಮೇಲೆ ಬಿರುಗಾಳಿಯೇ ಬೀಸಿ ಹೋಗಿತ್ತು.

ಗೃಹಪ್ರವೇಶದ ದಿನ ಬೆಳಗ್ಗೆಯೇ ಮದರ್ ಸೇವಿಯರ್ ಮಾಯಾವತಿಯಿಂದ ಬಂದಿದ್ದರು. ಹೊಸ ಕಟ್ಟಡದ ಕೆಳ ಅಂತಸ್ತಿನಲ್ಲಿ ರಾತ್ರಿ ೧೧ರಿಂದ ೧೨ರವರೆಗೆ ಹೋಮ ನಡೆಯಿತು. ಸೀತಾರಾಮನ್ ಪೂಜಾರಿ ಹಾಗೂ ವಿರಜಾನಂದರೇ ತಂತ್ರಧಾರಕರು. ವಿಧಿವತ್ತಾಗಿ ಉದ್ಘಾಟನೆಯು ಮುಗಿದ ಮೇಲೆ ಆಶ್ರಮಕ್ಕೆ '**ವಿವೇಕಾನಂದ ಆಶ್ರಮ**' ಎಂದು ಮದರ್ ಸೇವಿಯರ್ ನಾಮಕರಣ ಮಾಡಿದರು. ರಾತ್ರಿ ೧ ಗಂಟೆಗೆ ಎಲ್ಲರೂ ಪ್ರಸಾದ ಸ್ವೀಕರಿಸಿ, ಆಶ್ರಮದ ಕೋಣೆಗಳಲ್ಲಿ ಮಲಗಲು ಹೋದರು.

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ಆಶ್ರಮದ ಉದ್ಘಾಟನೆಯ ವಿಷಯವನ್ನು ತಿಳಿದು, ತಮ್ಮ ಶುಭಹಾರೈಕೆಗಳನ್ನು ತಿಳಿಸುತ್ತ ಹೀಗೆಂದು ಪತ್ರ ಬರೆದಿದ್ದರು:

ಭದ್ರಕ್

೯.೬.೧೯೧೫

‘‘..... ಹೊಸ ಆಶ್ರಮದ ಉದ್ಘಾಟನೆಯಾಗಿದೆ. ಹಾಗೂ ಅದಕ್ಕೆ ನಮ್ಮ ಸ್ವಾಮೀಜಿಯವರ ಹೆಸರನ್ನಿಡಲಾಗಿದೆ ಎಂದು ತಿಳಿದು ತುಂಬ ಸಂತೋಷವಾಯಿತು. ಮದರ್ ಸೇವಿಯರ್ ಅದರ ಪರಿಸರವನ್ನು ಮೆಚ್ಚಿದ್ದಾರೆಂದು ಕೇಳಿ ಇನ್ನೂ ಹೆಚ್ಚಿನ ಸಂತೋಷವಾಯಿತು. ಈ ಆಶ್ರಮದ ಆದರ್ಶದ ಸಾಫಲ್ಯಕ್ಕೆ ನನ್ನ ಪೂರ್ಣ ಬೆಂಬಲ ಹಾಗೂ ಶುಭಾಕಾಂಕ್ಷೆಗಳಿವೆ ಎಂಬುದನ್ನು ತಿಳಿ. ಆಶ್ರಮವನ್ನೊಮ್ಮೆ ನೋಡಬೇಕೆಂಬ ಇಚ್ಛೆ ಇದೆ. ಸ್ಟೇಷನ್ನಿನಿಂದ ೩೦ ಮೈಲಿಯೊಳಗೆ ಇದೆಯಾದ್ದರಿಂದ ಹೋಗಿ ಬರಲು ತೊಂದರೆಯೇನೂ ಆಗದು ಎಂದೆನಿಸುತ್ತದೆ....’’

ಸ್ವಾಮಿ ಬ್ರಹ್ಮಾನಂದ

ಪೂಜ್ಯ ಸ್ವಾಮಿ ತುರೀಯಾನಂದರು ಆಶ್ರಮ ನಿರ್ಮಾಣದ ಸಮಯದಲ್ಲೇ ಅವರ ಆಶೀರ್ವಾದಗಳನ್ನು ತಿಳಿಸಿ ಪತ್ರವನ್ನು ಬರೆದಿದ್ದರು (ಹೃಷೀಕೇಶ ೨೧.೧.೧೯೧೪):

‘‘ಇಷ್ಟು ವರ್ಷ ಕಠಿಣವಾದ ಕೆಲಸಗಳಲ್ಲಿ ನಿರತವಾಗಿದ್ದು ಈಗ ಅವುಗಳಿಂದ ನಿವೃತ್ತನಾಗಿ ವಿಶ್ರಾಂತಿಯಲ್ಲಿರುವೆ ಎಂದು ಕೇಳಿ ತುಂಬ ಸಂತೋಷವಾಯಿತು. ಈ ಹಿಂದೆಯೂ ನೀನು ಅನೇಕ ಬಾರಿ ಆಧ್ಯಾತ್ಮಿಕ ಅನುಭವಗಳನ್ನು ಪಡೆಯಲೆಂದು ಸಾಧನೆಯಲ್ಲಿ ತೊಡಗಿದ್ದೆ. ಆದರೆ ಒಂದಲ್ಲ ಒಂದು ಕಾರಣದಿಂದ ವಿಘ್ನಗಳುಂಟಾಗಿದ್ದವು. ಹೋಗಲಿ, ಈ ಬಾರಿ ನೀನು ಮತ್ತೆ ಆ ಉದ್ದೇಶಕ್ಕಾಗಿ ನಿನ್ನನ್ನು ನೀನು ತೊಡಗಿಸಿಕೊಳ್ಳಲು ಕಾತರನಾಗಿರುವೆ ಎಂಬುದನ್ನು ಕೇಳಿ ಸಮಾಧಾನಗೊಂಡೆ. ಈ ಬಾರಿ ಅನುಕೂಲಕರ ಸಂದರ್ಭಗಳು ಒದಗಿ ಬಂದಿವೆ ಎಂಬುದನ್ನು ಮನಗಂಡೆ. ಏಕೆಂದರೆ ಅನುಕೂಲಕರ ಸ್ಥಳ ಮತ್ತು ನಿನ್ನ ಸಂಕಲ್ಪ ಸಿದ್ಧಿಗಾಗಿ ತಾಯಿ ಹೃದಯದ ಮಿಸೆಸ್ ಸೇವಿಯರ್‌ನ ಮಮತೆ ಹಾಗೂ ನೆರವೂ ಸಿಕ್ಕಿದೆ. ಮದರ್ ಒಂದು ವರ್ಷದ ನಂತರ ಇಂಗ್ಲೆಂಡ್‌ಗೆ ಹೋಗುವವರಿದ್ದಾರೆಂಬ ಸುದ್ದಿ ಕೇಳಿ ಮನಸ್ಸಿಗೆ ಕ್ಲೇಶವಾಯಿತು. ನಾವು ಅವರ ಯೋಗ್ಯ ಸಂತಾನವಲ್ಲದಿದ್ದರೂ ಸಹ ಮೊದಲಿನಂತೆ ನಮ್ಮೊಂದಿಗಿರಲು ಅವರು ಹಿಂತಿರುಗಿ ಬರುವರೆಂದೇ ಎಣಿಸುವೆ. ಅವರಿಗೆ ನನ್ನ ಸಾದರ ಗೌರವ ಹಾಗೂ ಅಭಿನಂದನೆಗಳನ್ನು ತಿಳಿಸು. ಸದ್ಯದಲ್ಲೇ ಪ್ರಾರಂಭವಾಗುವ ನಿನ್ನ ಆಶ್ರಮದಲ್ಲಿ ಕೆಲವು ದಿನಗಳ ಕಾಲ ತಂಗುವಂತೆ ನನ್ನನ್ನು ಆಮಂತ್ರಿಸಿರುವುದು ಸಂತೋಷದ ವಿಷಯ. ಜಗದಂಬೆಯು ನಿನ್ನ ಮಹದುದ್ದೇಶವನ್ನು ಸಫಲಗೊಳಿಸಲಿ....

ತುರೀಯಾನಂದ

ಹೊಸ ಆಶ್ರಮದಲ್ಲಿ ಆನಂದದಿಂದ ದಿನಗಳು ಕಳೆಯತೊಡಗಿದವು. ಮದರ್ ಸೇವಿಯರ್ ಅಲ್ಲಿಯೇ ಇದ್ದಾರೆ. ಕೆಲ ತಿಂಗಳುಗಳ ನಂತರ ಇಂಗ್ಲೆಂಡಿಗೆ ಹೋಗಲಿದ್ದಾರೆ. ಕಾನೂನು ರೀತ್ಯಾ ಈಗಲೂ ಸಹ ವಿರಜಾನಂದರೇ ಮಾಯಾವತಿಯ ಮುದ್ರಣಾಲಯದ ವ್ಯವಸ್ಥಾಪಕರು. ವಿರಜಾನಂದರು ಈಗ ಬೇಲೂರು ಮಠಕ್ಕೆ ಪತ್ರ ಬರೆದು, ಮಾಯಾವತಿಯ ಈಗಿನ ಅಧ್ಯಕ್ಷರಾಗಿರುವ ಪ್ರಜ್ಞಾನಂದರನ್ನು ಅದ್ವೈತ ಆಶ್ರಮದ ಟ್ರಸ್ಟಿಯನ್ನಾಗಿ ಮಾಡಿ, ಅವರನ್ನೇ ಮುದ್ರಣಾಲಯದ ವ್ಯವಸ್ಥಾಪಕರನ್ನಾಗಿ ನೇಮಿಸಬೇಕೆಂದು ಸ್ವಾಮಿ ಬ್ರಹ್ಮಾನಂದರನ್ನು ವಿನಂತಿಸಿಕೊಂಡರು. ಅದಕ್ಕವರು ಒಪ್ಪಿ ತಕ್ಷಣವೇ ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಮಾಡಿದರು. ಹೀಗೆ ವಿರಜಾನಂದರು ಮುದ್ರಣಾಲಯದ ಜವಾಬ್ದಾರಿಯಿಂದ ಮುಕ್ತರಾದರು.

ಸ್ವಾಮೀಜಿಯವರ ಜೀವನಚರಿತ್ರೆಯ ಮೂರನೇ ಖಂಡವು ಮುದ್ರಿತವಾಗಿತ್ತು. ಈಗ ನಾಲ್ಕನೆಯದನ್ನು ವಿರಜಾನಂದರು ಪ್ರಾರಂಭಿಸಿದರು. ಇಷ್ಟರಲ್ಲಿ ಅಲ್ಮೋರದಿಂದ ಫ್ರ್ಯಾಂಕ್ ಅಲೆಕ್ಸಾಂಡರ್‌ನ ಪತ್ರವೊಂದು ಬಂದಿತು. ಅದರಲ್ಲಿ ಅವರು ಮಾಯಾವತಿಯಲ್ಲಿ ತಾವಿದ್ದಾಗ ನಡೆದ ಅಹಿತಕರ ವೈಮನಸ್ಯಕ್ಕಾಗಿ ಅಂತರ್ಯದಲ್ಲೇ ಕ್ಷಮೆ ಯಾಚಿಸಿದ್ದರು. ವಿರಜಾನಂದರು ಅವರಿಗೆ ತಮ್ಮ ಪ್ರೀತಿ ಹಾಗೂ ಶುಭಹಾರೈಕೆಗಳು ಯಾವಾಗಲೂ ಇವೆ ಎಂದು ತಿಳಿಸಿ ಹಿಂದಿರುಗಿ ಪತ್ರ ಬರೆದರು. ಇದಾದ ಕೆಲವು ತಿಂಗಳಲ್ಲಿ ಅಲೆಕ್ಸಾಂಡರ್ ೨೬ನೇ ಸೆಪ್ಟೆಂಬರ್ ೧೯೧೫ರಲ್ಲಿ ಮಾಯಾವತಿಗೆ ಹೋಗುವ ಮೊದಲು ಶ್ಯಾಮಲಾತಾಲ್‌ಗೆ ಬಂದಿಳಿದರು! ಶೀಘ್ರವೇ ಅವರು ಅಮೇರಿಕೆಗೆ ಹೋಗುವವರಿದ್ದರು. ಆದ್ದರಿಂದ ಮಾಯಾವತಿಗೆ ಕೊನೆಯದಾಗಿ ಭೇಟಿ ಇತ್ತರು. ಫ್ರ್ಯಾಂಕ್ ಶ್ಯಾಮಲಾತಾಲ್‌ನಲ್ಲಿ ಇದ್ದಷ್ಟು ದಿನ ಮದರ್ ಸೇವಿಯರ್ ಹಾಗೂ ವಿರಜಾನಂದರು ಅವರನ್ನು ಆದರದಿಂದ ನೋಡಿಕೊಂಡರು. ಮಾಯಾವತಿಗೆ ಹೋಗಿ, ಅಲ್ಲಿ ಕೆಲವು ವಾರಗಳಿದ್ದು ಹಿಂತಿರುಗುವಾಗಲೂ ಸಹ ಫ್ರ್ಯಾಂಕ್ ಶ್ಯಾಮಲಾತಾಲ್‌ಗೆ ಭೇಟಿ ಇತ್ತು, ಕೆಲವು ದಿನ ತಂಗಿದ್ದರು.[೩]

ವಿರಜಾನಂದರು ಕೆಲವೊಮ್ಮೆ ಮದರ್ ಅವರನ್ನು ಬೆಟ್ಟದ ತಪ್ಪಲಲ್ಲಿದ್ದ ಗ್ರಾಮಗಳಿಗೆ ಕರೆದೊಯ್ಯುತ್ತಿದ್ದರು. ಅಲ್ಲಿಯ ಬಡ ಪಹಾಡಿಗಳ ಸರಳತೆಯನ್ನು ಕಂಡು ಮದರ್ ಹಿಗ್ಗುತ್ತಿದ್ದರು. ಅವರ ಮಕ್ಕಳಿಗೆ ಕಾಸನ್ನು ಹಂಚುತ್ತಿದ್ದರು. ಶ್ಯಾಮಲಾತಾಲ್ ಆಶ್ರಮದ ಪರ್ವತದ ಶಿಖರವು ಆಶ್ರಮದಿಂದ ೫೦೦ ಅಡಿಗಳಷ್ಟು ಎತ್ತರದಲ್ಲಿತ್ತು. ಇದಲ್ಲದೆ, ಹತ್ತಿರದಲ್ಲೇ ಹಲವಾರು ಪರ್ವತ ಶಿಖರಗಳಿದ್ದವು. ಕೆಲವೊಮ್ಮೆ ಈ ಶಿಖರಗಳಿಗೆ ಹತ್ತಿ ಬಹುದೂರಕ್ಕೂ ಹರಡಿದ್ದ ಪರ್ವತಮಾಲೆಯನ್ನು ಮೂಕವಿಸ್ಮಿತರಾಗಿ ನೋಡುತ್ತಿದ್ದರು. ನಿರ್ಜನವಾದ ಬಹುಯೋಜನ ವಿಸ್ತೃತ-ನಿಬಿಡ ಅರಣ್ಯದ ಗಾಂಭೀರ್ಯವನ್ನು ಅವರು ಸವಿಯುತ್ತಿದ್ದರು.

---

೩ ಇದಾದ ಸುಮಾರು ಒಂದು ವರ್ಷ ಎಂಟು ತಿಂಗಳ ನಂತರ, ೧೯೧೭ರ ಜುಲೈ ೧೧ರಂದು ಅಮೆರಿಕದ ಡೆಟ್ರಾಯಿಟ್ ನಗರದಲ್ಲಿ ಫ್ರ್ಯಾಂಕ್‌ನ ದೇಹತ್ಯಾಗವಾಯಿತು. ಆತನ ಅಂತಿಮ ಕಾಲದಲ್ಲಿ ಸಿಸ್ಟರ್ ಕ್ರಿಸ್ಟೀನ್ ಅವರ ಬಳಿ ಇದ್ದರು. ‘‘ಸ್ವಾಮೀಜಿ ನನ್ನನ್ನು ಕರೆಯುತ್ತಿದ್ದಾರೆ. ನಾನೂ ಕೂಡ ಅವರ ಬಳಿಗೆ ಹೋಗಲು ಕಾತರನಾಗಿರುವೆ’ ಎಂದು ಫ್ರ್ಯಾಂಕ್ ಕ್ರಿಸ್ಟೀನ್‌ಗೆ ಹೇಳಿದ್ದ.

ವಿರಜಾನಂದರೊಂದಿಗಿದ್ದ ಬ್ರಹ್ಮಚಾರಿ ಸೀತಾರಾಮನ್ ಒಂದು ದಿನ ಇದ್ದಕ್ಕಿದ್ದಂತೆ ಅವರಿಗೆ ಹೀಗೆಂದು ತಿಳಿಸಿದರು: ''ಮಾಯಾವತಿ ಹಾಗೂ ಶ್ಯಾಮಲಾತಾಲ್‌ನಲ್ಲಿ ವಿರಜಾನಂದರೊಂದಿಗೆ ತಾವು ಯಾವುದೇ ಘರ್ಷಣೆಯಿಲ್ಲದೆ ಶಾಂತಿಯಿಂದಿದ್ದರೂ, ವಿರಜಾನಂದರನ್ನು ಕಂಡರೆ ತಮಗೆ ಭಕ್ತಿ-ಶ್ರದ್ಧೆಗಳಿದ್ದರೂ ಕೂಡ ತನ್ನ ಸ್ವಭಾವವು ವಿರಜಾನಂದರ ಸ್ವಭಾವಕ್ಕಿಂತ ಎಷ್ಟು ಬೇರೆಯೆಂದರೆ, ಸದಾಕಾಲ ಅವರೊಂದಿಗಿರಲು ಮನಸ್ಸೊಪ್ಪುತ್ತಿಲ್ಲ'' ಎಂದು. ಎಷ್ಟು ವಿಚಿತ್ರ ಮಾನವನ ಮನಸ್ಸು! ಕಾಳೀಕೃಷ್ಣ ಮಹಾರಾಜರು ಸೀತಾರಾಮನ್ ಹೇಳಿದ್ದನ್ನು ಕೇಳಿ ಸ್ವಲ್ಪ ಚಕಿತರಾದರು. ಆದರೆ ಯಾರನ್ನೂ ಬಲವಂತವಾಗಿ ಇರಿಸಿಕೊಳ್ಳುವ ಸ್ವಭಾವ ಅವರದ್ದಲ್ಲವಾದ್ದರಿಂದ ಪ್ರಸನ್ನಚಿತ್ತರಾಗಿಯೇ ಅವರನ್ನು ಕಳುಹಿಸಿಕೊಟ್ಟರು.[೪]

ಆಶ್ರಮವು ಸ್ಥಾಪಿತವಾದ ಕೆಲವು ದಿನಗಳಲ್ಲೇ ಅಲ್ಲಿಯ ಗುಡ್ಡಗಾಡಿನ ಜನರು ಅನಾರೋಗ್ಯದಿಂದ ಪೀಡಿತರಾದಾಗ ಔಷಧಿಗಾಗಿ ವಿರಜಾನಂದರಲ್ಲಿಗೆ ಓಡಿಬರುತ್ತಿದ್ದರು. ಔಷಧಿಗಳ ಬಗ್ಗೆ ತನಗೇನೂ ತಿಳಿದಿಲ್ಲವೆಂದರೂ ಕೇಳುತ್ತಿರಲಿಲ್ಲ , ಪೀಡಿಸುತ್ತಿದ್ದರು. ಬೇರೆ ದಾರಿಗಾಣದೆ ವಿರಜಾನಂದರು ತಮ್ಮ ಬಳಿ ಕೆಲವು ನಾಟಿ ಔಷಧಗಳನ್ನು ಇಟ್ಟುಕೊಳ್ಳುತ್ತಿದ್ದರು. 'ಕಂಬ್ಳಿ ನಹಿ ಛೋಡ್ತಿ!' ಈ ಕೆಲಸವೇ ಬೆಳೆದು ಔಷಧಾಲಯ ಹಾಗೂ ಆಸ್ಪತ್ರೆಗಳಾಗಿ ರೂಪುಗೊಂಡವು.

ಇಷ್ಟರಲ್ಲಿ ೧೪ ವರ್ಷಗಳ ನಂತರ ಮತ್ತೆ ಮಿಸ್ ಮ್ಯಾಕ್ಲಿಯಾಡ್ ಭಾರತಕ್ಕೆ ಬಂದರು.[೫] ಮದರ್ ಪತ್ರದಿಂದ ಶ್ಯಾಮಲಾತಾಲಿನ ಹೊಸ ಆಶ್ರಮದ ಬಗ್ಗೆ ತಿಳಿದು ೮-೧೦ ದಿನಗಳ ಮಟ್ಟಿಗೆ ಬಂದು ಇಳಿದುಕೊಂಡಿದ್ದರು. ಆಶ್ರಮವನ್ನು ಬಹುವಾಗಿ ಪ್ರಶಂಸಿಸಿದರು. ಮದರ್ ಸೇವಿಯರ್ ತಮ್ಮ ಕೊಠಡಿಯನ್ನೇ ಮ್ಯಾಕ್ಲಿಯಾಡ್‌ಗೆ ಬಿಟ್ಟುಕೊಟ್ಟಿದ್ದರು. ಇದನ್ನು ಮುಂದೊಮ್ಮೆ ನೆನಪಿಸಿಕೊಳ್ಳುತ್ತ ವಿರಜಾನಂದರು, ''ವಿದೇಶಿಯರದು ಅದೆಂತಹ ಸೌಜನ್ಯ! ಮಿಸ್ ಮ್ಯಾಕ್ಲಿಯಾಡ್ ಅತಿಥಿಯೆಂದು ಹೇಳಿ, ಮದರ್ ತಮಗೆ ಎಷ್ಟೇ ಅನಾನುಕೂಲವಾದರೂ ಕೂಡ ತಮ್ಮ ಕೋಣೆಯನ್ನು ಅವರಿಗೆ maximum comfort ನೀಡಲು ಬಿಟ್ಟುಕೊಟ್ಟಿದ್ದರು'' ಎಂದಿದ್ದರು. ಮಿಸ್ ಮ್ಯಾಕ್‌ಲಾಡ್ ಅಲ್ಲಿರುವಷ್ಟು ದಿನವೂ ಸ್ವಾಮೀಜಿಯವರ ಬಗ್ಗೆ ಮಾತುಕತೆಗಳನ್ನಾಡುತ್ತ ಬಹಳ ಆನಂದದಿಂದ ದಿನಗಳನ್ನು ಕಳೆದರು.

ಶ್ಯಾಮಲಾತಾಲ್‌ನಿಂದ ೧೨ ಮೈಲಿ ದೂರದಲ್ಲಿ ಶಾರದಾ (ಕಾಳೀ) ನದಿಯ ತೀರದಲ್ಲಿ 'ಪುಣ್ಯಗಿರಿ' ಎಂಬ ಪರ್ವತವಿದೆ. ಇದು ಪ್ರಸಿದ್ಧವಾದ ದೇವೀತೀರ್ಥ. ಮಿಸೆಸ್ ಸೇವಿಯರ್ ಅಲ್ಲಿಗೆ ಹೋಗಲು ಬಹಳ ಇಚ್ಛೆಪಟ್ಟಿದ್ದರಿಂದ ವಿರಜಾನಂದರು ಅವರನ್ನು ಕರೆದುಕೊಂಡು ಆ ತೀರ್ಥದರ್ಶನಕ್ಕೆ ಹೊರಟರು. ಅಲ್ಲಿಗೆ ದಟ್ಟವಾದ ಕಾಡಿನ ಮೂಲಕ ಪಯಣಿಸಬೇಕು. ಪರ್ವತದ ಶಿಖರವು ಕಡಿದಾಗಿದ್ದು ನದಿಯ ತೀರದಿಂದ ೪೦೦೦ ಅಡಿಯಷ್ಟು ಎತ್ತರದಲ್ಲಿದೆ. ಮಾರ್ಗವು ಬಹು ದುರ್ಗಮ. ಮದರ್ ಸೇವಿಯರ್ ದಂಡಿಯಲ್ಲಿ ಪ್ರಯಾಣ ಮಾಡಿದರು. ಪರ್ವತದಲ್ಲಿ ಯಾವುದೇ ಮಂದಿರವಾಗಲಿ, ಪ್ರತಿಮೆಯಾಗಲಿ ಇಲ್ಲ. ಪರ್ವತ ಶೃಂಗವೇ ದೇವೀಸ್ಥಾನವೆಂದು ಪೂಜಿಸಲ್ಪಡುತ್ತದೆ. ಶಿಖರದಿಂದ ಒಂದು ಮೈಲಿ ಕೆಳಗೆ ಪಂಡಾಗಳ ವಾಸಗೃಹ. ಇಲ್ಲಿಂದ ಶೃಂಗಕ್ಕೆ ಹೋಗುವ ಮಾರ್ಗವು ಅತ್ಯಂತ ಅಪಾಯಕಾರಿಯಾದದ್ದು. ಅದರ ಅರ್ಧ ಭಾಗವನ್ನು ಕಲ್ಲನ್ನು ಗಟ್ಟಿಯಾಗಿ ಹಿಡಿದು ಹೇಗೋ ಹತ್ತಬೇಕಿತ್ತು. ಮದರ್ ಸೇವಿಯರನ್ನು ಆ ರೀತಿಯಾಗಿ ಪರ್ವತಶೃಂಗದವರೆಗೂ ಕರೆದೊಯ್ಯುವ ಧೈರ್ಯ ವಿರಜಾನಂದರಿಗೆ ಬರಲಿಲ್ಲ. ತಿಳಿಸಿ ಹೇಳಿ, ಅವರನ್ನು ಅಲ್ಲಿಯೇ ಇರಿಸಿ, ತಾವೊಬ್ಬರೇ ಶೃಂಗಕ್ಕೆ ಹೋಗಿ ದರ್ಶನ ಮಾಡಿ, ಇಳಿದು ಬಂದು, ದುರ್ಗಾಸಪ್ತಶತಿಯನ್ನು ಪಠಿಸಿದರು; ವಿಶೇಷ ಪೂಜೆಯ ವ್ಯವಸ್ಥೆಯನ್ನು ಮಾಡಿದರು.

(ಮುಂದುವರಿಯುವುದು)

---

೪ ಬ್ರ. ಸೀತಾರಾಮನ್ ಏಳು ತಿಂಗಳ ನಂತರ ಇದ್ದಕ್ಕಿದ್ದಂತೆ ಒಂದು ದಿನ ಶ್ಯಾಮಲಾತಾಲ್‌ಗೆ ಹಾಜರ್! ತಮ್ಮ ಹಿಂದಿನ ವರ್ತನೆಗಾಗಿ ಬಹಳಷ್ಟು ಪರಿತಪಿಸಿ, ವಿರಜಾನಂದರಲ್ಲಿ ಕ್ಷಮೆ ಯಾಚಿಸಿದರು. ವಿರಜಾನಂದರೂ ಸಹ ಅವರನ್ನು ಆದರದಿಂದ ಮತ್ತೆ ತಮ್ಮ ಬಳಿ ಇರಿಸಿಕೊಂಡರು.

೫ ಮಿಸ್ ಜೋಸೆಫಿನ್ ಮ್ಯಾಕ್ಲಿಯಾಡ್ ಅವರು ತಮ್ಮ 'ವಿವೇಕಾನಂದ ಸ್ಮೃತಿ'ಯಲ್ಲಿ ಹೀಗೆ ಬರೆದಿದ್ದಾರೆ: ''ಜುಲೈ ೪ ರಂದು (೧೯೦೨) ಬೇಲೂರು ಮಠದಿಂದ 'ಕೇಬಲ್' ಮೂಲಕ ನನಗೊಂದು ವಾರ್ತೆ ಬಂತು, 'ಸ್ವಾಮೀಜಿಯವರು ನಿರ್ವಾಣವನ್ನು ಹೊಂದಿದರು' ಎಂದು. ಕೆಲವು ದಿನ ಗರಬಡಿದವಳಂತೆ ಸ್ತಬ್ಧಳಾಗಿಬಿಟ್ಟೆ. ಆ ಕೇಬಲ್‌ಗೆ ಯಾವ ಉತ್ತರವನ್ನೂ ನೀಡಲಿಲ್ಲ. ನನ್ನ ಮನಸ್ಸು ವಿಷಣ್ಣತೆಯ ಗಾಢಾಂಧಕಾರದಲ್ಲಿ ಮುಳುಗಿಹೋಯಿತು; ಹಲವು ವರ್ಷಗಳನ್ನು ಅಳುತ್ತಲೇ ಕಳೆದೆ. 'ನೀನು ಯಾರಿಂದಲಾದರೂ ನಿಜವಾಗಿಯೂ ಪ್ರಭಾವಿತನೇ ಆಗಿದ್ದರೆ, ಅದನ್ನು ನಿನ್ನ ಜೀವನದಿಂದ ಪ್ರಮಾಣೀಕರಿಸು, ಕಣ್ಣೀರಿನಿಂದಲ್ಲ' ಎಂಬ ಮೆಟರ್ ಲಿಂಕ್‌ನ ಹೇಳಿಕೆಯನ್ನು ಮುಂದೊಂದು ದಿನ ಓದಿದ ಮೇಲೆ ನಾನು ಮತ್ತೆ ಕಣ್ಣೀರು ಸುರಿಸಲಿಲ್ಲ. ನಾನು ಅಮೇರಿಕೆಗೆ ಹಿಂತಿರುಗಿ, ಸ್ವಾಮೀಜಿಯವರು ಯಾವ ಯಾವ ಸ್ಥಳಗಳಿಗೆ ಹೋಗಿದ್ದರೋ ಆ ಸ್ಥಳಗಳನ್ನೆಲ್ಲ ಪತ್ತೆಹಚ್ಚಿ ಸಂದರ್ಶಿಸಲಾರಂಭಿಸಿದೆ... ೧೪ ವರ್ಷಗಳನಂತರ ನಾನು ಭಾರತಕ್ಕೆ ಮರಳಿದೆ. ಭಾರತವು ನಿರಾನಂದ-ನೈರಾಶ್ಯದ ದೇಶವಲ್ಲ , ಇಡೀ ಭರತಖಂಡವೇ ಸ್ವಾಮೀಜಿಯವರ ಚಿಂತನೆಗಳಿಂದ ಉದ್ದೀಪಿತ. ಒಮ್ಮೆ ಅವರನ್ನು, 'ಸ್ವಾಮೀಜಿ ನಾನು ನಿಮಗೆ ಹೇಗೆ ಹೆಚ್ಚಿನ ಸಹಾಯ ಒದಗಿಸಬಲ್ಲೆ?' ಎಂದು ಕೇಳಿದ್ದು ನೆನಪಿದೆ. ಅದಕ್ಕುತ್ತರವಾಗಿ ಅವರು, 'ಭಾರತವನ್ನು ಪ್ರೀತಿಸು' ಎಂದಿದ್ದರು. ಆದ್ದರಿಂದ ನಾನು ಭರತಖಂಡದಲ್ಲೇ ನೆಲೆಸಲಿಚ್ಛಿಸುವೆ.'' (*Reminiscences of Swami Vivekananda*, Prabuddha Bharata, December 1949)

''ಯಾವುದು ಚಿತ್ತ ಮತ್ತು ಹೃದಯವನ್ನು ಶುದ್ಧಿ ಮಾಡುವುದೋ ಅದೇ ನಿಜವಾದ ಜ್ಞಾನ. ಉಳಿದುದೆಲ್ಲ ಅಜ್ಞಾನ.''

''ಭಕ್ತ ತನ್ನ ಇಷ್ಟದೇವತೆಯನ್ನು ತಾಯಿಯೆಂದು ಕರೆಯುವುದರಿಂದ ಏತಕ್ಕೆ ಅಷ್ಟೊಂದು ಭಾವೋನ್ಮಾದವನ್ನು ಪಡೆಯುವನು? ಏಕೆಂದರೆ, ಮಗುವಿಗೆ ಎಲ್ಲರಿಗಿಂತ ಹೆಚ್ಚಾಗಿ ತಾಯಿಯಲ್ಲಿ ಸಲಿಗೆ. ಆದ ಕಾರಣವೇ ಅವಳು ಎಲ್ಲರಿಗಿಂತಲೂ ಸಮೀಪದವಳು.''

— ಶ್ರೀರಾಮಕೃಷ್ಣರು

ಶ್ರೀಮಾತೆಯವರ ಪತ್ರಗಳು – ೧೪

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**



ಪತ್ರ – ೭೬

೨೯.೫.೧೯೧೨

೧೬ನೇ ಜ್ಯೇಷ್ಠ , ಉದ್ಬೋಧನ ಆಫೀಸ್

ಶುಭವಾಗಲಿ.

ತಾಯಿ, ನಿನ್ನ ಪತ್ರ ಸಿಕ್ಕಿ ಸಮಾಧಾನವಾಯಿತು. ಸದ್ಯ ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ರಾಧು ಈಗ ಚೆನ್ನಾಗಿದ್ದಾಳೆ. ಗೌರಿ ದಾಸಿಯ ಬಳಿಗೆ ಹೋಗಲು ನಿನಗೆ ಇಚ್ಛೆ ಇದ್ದರೆ ನೀನು ಹೋಗು.. ಈ ವಿಷಯದಲ್ಲಿ ನಾನೇನು ಹೇಳಲಿ ? ಅದು ನಿನ್ನ ಇಚ್ಛೆ. ನೀವೆ ಲ್ಲರೂ ನನ್ನ ಆಶೀರ್ವಾದ ಸ್ವೀಕರಿಸಿ. ಸುಮತಿ ಅಲ್ಲಿ ಇದ್ದರೆ ಅವಳಿಗೆ ನನ್ನ ಆಶೀರ್ವಾದ ತಿಳಿಸು. ಮಧ್ಯೆ ಮಧ್ಯೆ ನಿಮ್ಮೆಲ್ಲರ ಯೋಗಕ್ಷೇಮ ವನ್ನು ತಿಳಿಸಿ ಸಮಾಧಾನ ಕೊಡಬೇಕು.

ಇತಿ ಆಶೀರ್ವಾದ ನೀಡುವ,

ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

ಶ್ರೀಮತಿ ಸರಯೂಬಾಲಾ ಸೇನಗುಪ್ತ

C/O Sj.Girish Ch. Sen

Meherpur (Nadia)

ಪತ್ರ – ೭೭

೨೯.೮.೧೯೧೨

೧೩ನೇ ಭಾದ್ರಪದ , ಕೊಲ್ಕತ್ತಾ

ಶುಭವಾಗಲಿ.

ಮಗೂ, ನಿನ್ನ ಪತ್ರ ಸಿಕ್ಕಿ ಸಮಾಧಾನವಾಯಿತು. ಸ್ವಾಮೀಜಿಯ ಜೀವನ ಚರಿತ್ರೆ ಪ್ರಕಟವಾಗುತ್ತಿದೆ ಎಂದು ಕೇಳಿ ಸಂತೋಷ ವಾಯಿತು. ಅದು ಸುಪ್ರಸಿದ್ಧವಾಗಲಿ ಎಂದು ಆಶೀರ್ವಾದ ಮಾಡುತ್ತಿದ್ದೇನೆ. ಇಲ್ಲಿ ಎಲ್ಲರೂ ಕ್ಷೇಮ. ನಾನು ಚೆನ್ನಾಗಿದ್ದೇನೆ. ಶರತ್ ಮೊದಲಾದವರು ಚೆನ್ನಾಗಿದ್ದಾರೆ. ಮಿಸೆಸ್ ಸೇವಿಯರ್ ಹಾಗೂ ಉಳಿದ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು. ಮತ್ತು ನಿನಗೂ ನನ್ನ ಆಶೀರ್ವಾದ. ಶ್ರೀ ಶ್ರೀ ಠಾಕೂರರು ಇದ್ದಾರೆ, ಅವರೇ ನಿನಗೆ ಮಂಗಳವನ್ನುಂಟುಮಾಡುವರು. ನೀನು ಕಳುಹಿ ಸಿರುವ 'ಆಪ್‌ಲ್ ಮೊರಬ್ಬಾ' ಸಿಕ್ಕಿದೆ.

ಇತಿ ಆಶೀರ್ವಾದ ನೀಡುತ್ತಿರುವ,

ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ

Swami Virajananda

Prabudha Bharat Office

Mayavati, Lohaghat (Almora)

ಪತ್ರ – ೭೮

ಜೈ ಮಾ

೮.೧೦.೧೯೧೩

ಜಯರಾಂಬಾಟಿ, ೨೩ ಆಶ್ವಯುಜ

ಪರಮ ಶುಭಾಶಯಗಳು.

ಮಗೂ, ನಿನ್ನ ಕಾಯಿಲೆಯ ಬಗ್ಗೆ ಕೇಳಿ ಎಲ್ಲಿಲ್ಲದ ದುಃಖ ವುಂಟಾಯಿತು. ನಾನು ಆಶೀರ್ವಾದ ಮಾಡುತ್ತಿದ್ದೇನೆ. ನೀನು ಖಂಡಿತವಾಗಿ ಆರೋಗ್ಯವನ್ನು ಹೊಂದುವೆ. ನಿನಗೆ ಯಾವ ಭಯವೂ ಇಲ್ಲ. ನಿನ್ನ ಇಷ್ಟದೇವತೆ ನಿನ್ನನ್ನು ರಕ್ಷಿಸುವನು. ನಾನು ಬಹುಮಟ್ಟಿಗೆ ಚೆನ್ನಾಗಿರುವೆನು. ನೀನು ನನ್ನ ಸ್ನೇಹ ಆಶೀರ್ವಾದ ಗಳನ್ನು ಸ್ವೀಕರಿಸು. ಇತಿ,

ಆಶೀರ್ವಾದ ನೀಡುತ್ತಿರುವ

ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಸುರೇಂದ್ರ ನಾಥ ಗುಪ್ತ
ಪೋಸ್ಟ್ ಆಫೀಸ್: ಶ್ರೀಹಟ್ಟ, ಮಿರಾಬಜಾರ್; ಜಿಲ್ಲೆ: ಶ್ರೀಹಟ್ಟ

ಜೈ ಮಾ
ಜಯರಾಂಬಾಟಿ, ೨೩ ಆಶ್ವಯುಜ

ಪ್ರಿಯ ಸುರೇಂದ್ರ ಅಣ್ಣ,

ನಿನ್ನ ಕಾಯಿಲೆಯ ಬಗ್ಗೆ ಕೇಳಿ ಎಲ್ಲಿಲ್ಲದ ದುಃಖವಾಯಿತು. ಆದರೆ ಶ್ರೀಮಾತೆಯವರು ಯಾವ ರೀತಿಯಲ್ಲಿ ಆಶೀರ್ವಾದ ಮಾಡಿದ್ದಾರೆಂದರೆ, ಅದರಿಂದ ನೀನು ಶೀಘ್ರವಾಗಿ ಆರೋಗ್ಯ ವನ್ನು ಹೊಂದುವೆ. ಇದರಲ್ಲಿ ಸಂದೇಹವಿಲ್ಲ. ಮಧ್ಯೆ ಮಧ್ಯೆ ನಿನ್ನ ಪತ್ರ ಸಿಗುವುದೆಂದು ಬಯಸುತ್ತಿದ್ದೇನೆ. ತರಕಾರಿ, ಸೊಪ್ಪು ಬೆಳೆ ಸಲು ಪ್ರಯತ್ನಿಸುತ್ತಿದ್ದೇನೆ. ನಾನು ಅದೇ ರೀತಿ ಇದ್ದೇನೆ. ನಿನಗೆ ನನ್ನ ಸ್ನೇಹಪೂರ್ವಕ ವಂದನೆಗಳು

ಇತಿ,
ನಿನ್ನ ಜ್ಞಾನಾನಂದ

Note – ಶ್ರೀಮಾತೆಯವರ ಪತ್ರದೊಂದಿಗೆ ಇದ್ದ ಈ ಪತ್ರ ವನ್ನು ಅದೇ ರೀತಿ ಇಲ್ಲಿ ಕೊಡಲಾಗಿದೆ.

ಪತ್ರ – ೭೯

೨೧.೧೧. ೧೯೧೨
Nov. ೨೧
ರಾಮಕೃಷ್ಣ ಅದ್ವೈತ ಆಶ್ರಮ, ಕಾಶಿಧಾಮ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ತುಂಬಾ ಸಮಾಧಾನವಾಯಿತು. ಇಂದಿಗೆ ೧೬, ೧೭ ದಿನಗಳಿಂದ ನಾವು ಈ ವಿಳಾಸದ ಸ್ಥಳದಲ್ಲಿ ದ್ದೇವೆ. ಸದ್ಯ ಇಲ್ಲಿ ಕ್ಷೇಮ. ನಾನು ಚೆನ್ನಾಗಿದ್ದೇನೆ. ನಿನಗೆ ನನ್ನ ಆಶೀರ್ವಾದ. ಅದೇ ರೀತಿ ಸೊಸೆಗೂ ಮತ್ತು ಮಕ್ಕಳಿಗೂ ತಿಳಿಸು. ಶ್ರೀ ಶ್ರೀ ಠಾಕೂರರು ನಿಮ್ಮನ್ನೆಲ್ಲಾ ಚೆನ್ನಾಗಿಟ್ಟಿರಲಿ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Shriman Tarak Nath Roy Chowdhury
ಪೋಸ್ಟ್: ಕಠಿಯಾದಿ
ಸಬ್ ರಿಜಿಸ್ಟರ್ ಆಫೀಸ್
ಜಿಲ್ಲೆ: ಮೈಮನ್‌ಸಿಂಹ

ಪತ್ರ – ೮೦

೨೫.೧೧.೧೯೧೨
ಶ್ರೀ ರಾಮಕೃಷ್ಣ ಅದ್ವೈತ ಆಶ್ರಮ
ಲಾಕ್ಸಾ, ಕಾಶೀಧಾಮ
೨೯, ಕಾರ್ತಿಕ

ಶುಭವಾಗಲಿ.

ಇಂದಿಗೆ ೧೦ ದಿನಗಳಿಂದ ಇಲ್ಲಿಗೆ ಬಂದಿದ್ದೇನೆ. ಹಾಗೆಯೇ ಸ್ವಲ್ಪ ದಿನ ಇಲ್ಲಿರುತ್ತೇನೆ. ಇಲ್ಲಿ ಕ್ಷೇಮ. ನೀನೂ ಕ್ಷೇಮವಾಗಿರುವೆ ಎಂದು ಆಶಿಸುತ್ತೇನೆ. ನಿನಗೆ ನನ್ನ ಆಶೀರ್ವಾದ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಯುತ ಸುರೇಂದ್ರ ನಾಥ ಗುಪ್ತ
ಪೋಸ್ಟ್ ಆಫೀಸ್: ಶ್ರೀಹಟ್ಟ Sylhet
ಮಿರಾ ಬಜಾರ್ , ಸೂರ್ಯ ಬಾಬುರ್ ಬಾಸಾ
Sylhet in Assam (Dt. Sylhet) ಜಿ: ಶ್ರೀಹಟ್ಟ

ಪತ್ರ – ೮೧

೧೯.೧೨.೧೯೧೨
೩ನೇ ಪೌಷ, ಲಾಕ್ಸಾ, ಕಾಶೀಧಾಮ

ಶುಭವಾಗಲಿ,

ಮಗೂ, ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ಸದ್ಯ ನಾವೆಲ್ಲಾ ಇಲ್ಲಿ ಚೆನ್ನಾಗಿದ್ದೇವೆ. ಮಠದಲ್ಲಿ ಎಲ್ಲವೂ ಕ್ಷೇಮ. ನೀವೆ ಲ್ಲರೂ ಚೆನ್ನಾಗಿದ್ದೀರಿ ಎಂದು ಆಶಿಸುತ್ತೇನೆ. ನಿನಗೆ ನನ್ನ ಆಶೀ ರ್ವಾದ. ಸೊಸೆಗೂ ಮತ್ತು ಮಕ್ಕಳಿಗೂ ಆಶೀರ್ವಾದ ತಿಳಿಸು. ಈ ತಿಂಗಳ ಕೊನೆಯಲ್ಲಿ ಕೊಲ್ಕತ್ತಕ್ಕೆ ಹೋಗುವ ಇಚ್ಛೆ ಇದೆ.

ಇತಿ ಆಶೀರ್ವಾದ ನೀಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Taraknath Roy Chowdhury
Sub Registrar
Kathiadi (Mymensingh)

ಪತ್ರ – ೮೨

Luxa, ಕಾಶಿಧಾಮ
೨೭.೧೨.೧೯೧೨

ಶುಭವಾಗಲಿ,

ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನೀನು ನನ್ನ ಆಶೀ ರ್ವಾದವನ್ನು ಸ್ವೀಕರಿಸು. ಇಲ್ಲಿ ಕ್ಷೇಮ. ಶ್ರೀ ಠಾಕೂರರ ಧ್ಯಾನ, ಚಿಂತನೆ ಮಾಡುತ್ತಿರು. ಹಾಗೂ ಅವರನ್ನು ಪ್ರಾರ್ಥಿಸುತ್ತಿರು.

ಇತಿ ಆಶೀರ್ವಾದ ಮಾಡುತ್ತಿರುವ,
ನಿನ್ನ ಮಾತೆ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಯುತ ಸುರೇಂದ್ರ ನಾಥ ಗುಪ್ತ
ಆಶೀರ್ವಾದ ಸ್ವೀಕರಿಸುವ
C/O ಶ್ರೀಯುತ ವರದಾ ಮೋಹನ ದಾಸ ಬಿ.ಎಲ್
ಗಿರ್ಜಾರ್ ಪಶ್ಚಿಮ — ಶ್ರೀಹಟ್ಟ, Sylhet P. O.(Dt. Sylhet)

ದಕ್ಷಿಣೇಶ್ವರದ ದಯಾಸಿಂಧು
ಶ್ರೀರಾಮಕೃಷ್ಣ ಪರಮಹಂಸರ ಜೀವನಗಾಥೆ


ಶ್ರೀರಾಮಕೃಷ್ಣರ ಹಲವು ಜೀವನ ಚರಿತ್ರೆಗಳು ಈಗಾಗಲೇ ಹೊರ ಬಂದಿವೆ. ಅವುಗಳಲ್ಲಿ ವಿಸ್ತಾರವಾದ, ಸಂಕ್ಷಿಪ್ತವಾದ, ವಿಶ್ಲೇಷಣಾತ್ಮಕವಾದ ಹಲವು ಬಗೆಯ ಗ್ರಂಥಗಳು ಪ್ರಕಟವಾಗಿದ್ದರೂ, ಒಬ್ಬೊಬ್ಬ ಲೇಖಕನೂ ಆ ಮಹಾಚೇತನದ ಒಂದೊಂದು ಮುಖವನ್ನು ತನ್ನದೇ ಆದ ರೀತಿಯಲ್ಲಿ ಗ್ರಹಿಸುತ್ತಾನೆ; ಅದನ್ನೇ ತನ್ನ ಗ್ರಂಥದಲ್ಲಿ ತನಗೆ ವಿಶಿಷ್ಟವಾದ ರೀತಿಯಲ್ಲಿ ಪ್ರಸ್ತುತಪಡಿಸುತ್ತಾನೆ. ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ ಅವರು ಇತ್ತೀಚೆಗೆ ಪ್ರಕಟಿಸಿದ ಗ್ರಂಥ '**ದಕ್ಷಿಣೇಶ್ವರದ ದಯಾಸಿಂಧು**' ಕೆಲವೊಂದು ರೀತಿಯಲ್ಲಿ ನೂತನವಾಗಿದೆ.

ಈ ಗ್ರಂಥದಲ್ಲಿ ಶ್ರೀರಾಮಕೃಷ್ಣರ ಜೀವನದ ಘಟನೆಗಳ ಸುಲಲಿತವಾದ ಚಿತ್ರಣವಿದೆ. ಅಚ್ಚುಕಟ್ಟಾದ ಮಾತಿನ ಶೈಲಿ, ನಾಟಕೀಯವಾದ ನಿರೂಪಣೆ ಹಾಗೂ ಸುಲಭಗ್ರಾಹ್ಯವಾದ ಕಥನಕ್ರಮ ಇಲ್ಲಿನದು. ಕಥೆ ಮುಂದಕ್ಕೆ ಸಾಗುತ್ತಿದ್ದಂತೆ ನಡುನಡುವೆ ಸಂದರ್ಭೋಚಿತವಾದ ಚಿತ್ರಗಳು, ಅವುಗಳನ್ನು ವಿವರಿಸುವ ಶೀರ್ಷಿಕೆಗಳು ಮನಸೆಳೆಯುತ್ತವೆ. ಶ್ರೀರಾಮಕೃಷ್ಣರ ಜೀವನ ಲೀಲೆ, ಅವರೊಂದಿಗೆ ಒಡನಾಡಿದ ವ್ಯಕ್ತಿಗಳ, ಅವರು ಓಡಾಡಿದ ಸ್ಥಳಗಳ ಹಾಗೂ ಪ್ರಮುಖ ಘಟನೆಗಳ ಚಿತ್ರಗಳು ಓದುಗನಿಗೆ ಆಯಾ ಸಂದರ್ಭದ ಚಿತ್ರಣವನ್ನು ಕಟ್ಟಿಕೊಡುತ್ತವೆ. ಈ ಮೂಲಕ ಓದಿನ ಅನುಭವ ಇನ್ನಷ್ಟು ದಟ್ಟವಾಗುತ್ತದೆ. ವಿನೂತನ ಶೈಲಿಯ ಈ ಜೀವನಚರಿತ್ರೆ ಆಕರ್ಷಕವಾಗಿಯೂ, ಹೃದಯಂಗಮವೂ ಆಗಿ ಮೂಡಿಬಂದಿದೆ.

ಇನ್ನೊಂದು ಪ್ರಧಾನ ಸಂಗತಿಯೆಂದರೆ, ಶ್ರೀರಾಮಕೃಷ್ಣರ ಜೀವನ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದ ವಿವರಗಳು ಬಂದಾಗಲೆಲ್ಲ ಅಲ್ಲಲ್ಲಿ 'ಸಾದೃಶ್ಯ' ಎಂಬ ಹೆಸರಿನ ಭಾಗಗಳನ್ನು ಸೇರಿಸಿರುವುದು. ಮುನ್ನುಡಿಯಲ್ಲಿ ಈ ಕುರಿತ ವಿವರ ಹೀಗಿದೆ: ''ಈ ಪುಸ್ತಕವು ಶ್ರೀರಾಮಕೃಷ್ಣರ ಜೀವನ ಗಂಗಾ ಪ್ರವಾಹದ ಒಂದು ಕಿರುನೋಟ. ಅವರ ಸಾಧನೆ, ಉಪದೇಶಗಳನ್ನು ಕುರಿತ ಒಂದು ಪುಟ್ಟ ಚಿತ್ರಣ. ಇದರ ವಿಶೇಷವೆಂದರೆ, ಶ್ರೀರಾಮಕೃಷ್ಣರಂತೆಯೇ ಮಹಾ ಸಾಧಕರೂ, ಬೋಧಕರೂ, ಅನುಭಾವಿಗಳೂ ಆದ ಹಲವು ಮಹಾತ್ಮರ ಜೀವನದ ಕೆಲವು ಸಮಾನ ಘಟನೆಗಳನ್ನು ನೀಡಿರುವುದು.''

ಹೆಚ್ಚಾಗಿ ಶೃಂಗೇರಿ ಪೀಠದ ಜಗದ್ಗುರುಗಳಾಗಿದ್ದ ಶ್ರೀಚಂದ್ರಶೇಖರ ಭಾರತೀ ಸ್ವಾಮಿಗಳ, ಶ್ರೀರಮಣ ಮಹರ್ಷಿಗಳ ಹಾಗೂ ಬ್ರಹ್ಮಚೈತನ್ಯ ಗೋಂದಾವಲಿಯವರ ಜೀವನ, ವ್ಯಕ್ತಿತ್ವದೊಂದಿಗೆ ಈ ಸಾದೃಶ್ಯಗಳನ್ನು ಮಾಡಲಾಗಿದೆ. ಅವತಾರ ಪುರುಷನೊಬ್ಬನ ಜೀವನಕ್ಕೂ ಇತರ ಸಂತರ ಜೀವನಗಳಿಗೂ ಈ ಬಗೆಯ ಹೋಲಿಕೆ, ವಿಶ್ಲೇಷಣೆ ಎಷ್ಟು ಸಮಂಜಸ ಎಂಬ ಪ್ರಶ್ನೆ ಉಳಿದುಕೊಳ್ಳುವುದಾದರೂ ಆಧ್ಯಾತ್ಮಿಕ ಜಗತ್ತಿನ ಹತ್ತು ಹಲವು ಘಟನೆಗಳಲ್ಲಿ ಕಂಡುಬರುವ ಸಮಾನತೆಯನ್ನು ಒಂದೆಡೆ ಇಟ್ಟು ನೋಡುವುದು ಕುತೂಹಲಕರವಾದ ಸಂಗತಿಯಾಗಿದೆ. ಮಹಾನ್ ಸಾಧಕರ ಆಧ್ಯಾತ್ಮಿಕ ಔನ್ನತ್ಯವನ್ನು ಸಾಮಾನ್ಯರು ಅಳೆಯಲಾಗದು ನಿಜ; ಆದರೆ ಅವುಗಳ ವಿಶಿಷ್ಟತೆಯನ್ನು ಅರಿಯಲು ತುಲನಾತ್ಮಕ ವಿಶ್ಲೇಷಣೆ ಮಾಡುವುದು ಒಂದು ಬಗೆಯಲ್ಲಿ ಪ್ರಯೋಜನಕಾರಿ. ಓದುಗನ ಅಭಿರುಚಿ, ಬುದ್ಧಿಶಕ್ತಿ, ವಿವೇಕ ಇವುಗಳಿಗೆ ತಕ್ಕಂತೆ ಈ ಆಧ್ಯಾತ್ಮಿಕ ಅನುಭವಗಳ ಆಳ-ಅಗಲಗಳನ್ನು ಕಂಡುಕೊಳ್ಳುವುದು ಹೆಚ್ಚು ಸಮರ್ಪಕವಾದೀತು.

ಉತ್ತಮ ಮುದ್ರಣ, ಆಕರ್ಷಕ ರಕ್ಷಾಪುಟ, ಓದಿಸಿಕೊಂಡು ಹೋಗುವ ಶುದ್ಧ ಶೈಲಿ - ಈ ಎಲ್ಲ ಕಾರಣಗಳಿಂದ 'ದಕ್ಷಿಣೇಶ್ವರದ ದಯಾಸಿಂಧು' ಒಂದು ಉತ್ತಮ ಜೀವನಚರಿತ್ರೆಯ ಗ್ರಂಥವಾಗಿದೆ. ಕಥೆಯು ಹೇಗೆ ಹೃದಯಂಗಮವೋ, ಅಷ್ಟೇ ಬೌದ್ಧಿಕವಾಗಿ ಕೂಡ ಓದುಗನನ್ನು ಉನ್ನತಿಗೇರಿಸಬಲ್ಲುದು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ❁



ಕೃತಿ : **ದಕ್ಷಿಣೇಶ್ವರದ ದಯಾಸಿಂಧು**
ಲೇಖಕರು : **ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರೀ**
ಪ್ರಕಾಶಕರು : **ಮಹಿಮಾ ಪ್ರಕಾಶನ, ನಂ. 1393/2, ಸಿ.ಎಚ್-31, 6ನೇ ಕ್ರಾಸ್, ಕೃಷ್ಣಮೂರ್ತಿಪುರಂ, ಮೈಸೂರು - 570 004**
ಪುಟಗಳು: **208** *ಬೆಲೆ* : **160/**

ನಿಜವಾದ ಸಾಧು

ಒಂದು ಊರಿನ ಕೆರೆಯ ತೀರದಲ್ಲಿ ಒಬ್ಬ ಸಾಧು ವಾಸಿಸುತ್ತಿದ್ದ. ಅವನು ಆ ಕೆರೆಯ ನೀರಿನಲ್ಲಿ ತನ್ನ ಆಹ್ನಿಕಗಳನ್ನೆಲ್ಲಾ ಮುಗಿಸಿ, ಅದೇ ಕೆರೆಯ ಯಾವುದಾದರೂ ಒಂದು ಕಲ್ಲಿನ ಮೇಲೆ ಕುಳಿತು ಧ್ಯಾನ ಮಾಡುತ್ತಿದ್ದ. ಅದೇ ಕೆರೆಗೆ ಆ ಊರಿನ ಅಗಸ ಬಟ್ಟೆಯ ಹೊರೆ ಹೊತ್ತುಕೊಂಡು ಬರುತ್ತಿದ್ದ. ಅವನು ಬಟ್ಟೆ ಒಗೆಯಲು ಒಂದು ನಿಗದಿಯಾದ ಕಲ್ಲನ್ನು ಇಟುಕೊಂಡಿದ್ದ. ಆ ಕಲ್ಲಿನ ಬಳಿ ಹೊರೆ ಇಳಿಸಿ, ತಾನು ತಂದಿದ್ದ ಎಲ್ಲಾ ಬಟ್ಟೆಗಳನ್ನೂ ಒಗೆದು ತೆಗೆದುಕೊಂಡು ಹೋಗುತ್ತಿದ್ದ. ಒಂದು ದಿನ ಸಾಧು ಕೆರೆಗೆ ಬಂದವನು ತನ್ನ ಆಹ್ನಿಕಗಳನ್ನು ಮುಗಿಸಿ, ಅಗಸ ಪ್ರತಿದಿನ ಬಟ್ಟೆ ಒಗೆಯುತ್ತಿದ್ದ ಕಲ್ಲಿನ ಮೇಲೆ ಧ್ಯಾನಕ್ಕೆ ಕುಳಿತ. ಅಲ್ಲಿ ಪ್ರತಿದಿನ ಅಗಸ ಬಟ್ಟೆ ಒಗೆಯುವನು ಎಂದು ಅವನಿಗೆ ಚೆನ್ನಾಗಿ ಗೊತ್ತಿತ್ತು.



ಯಾವುದೆಂದರೆ ಆ ಕಲ್ಲಿನ ಮೇಲೆ ಬಟ್ಟೆ ಒಗೆಯಲಾಗುವುದಿಲ್ಲ, ಕುಳಿತುಕೊಳ್ಳುವುದಾದರೆ ಕುಳಿತುಕೊಳ್ಳುವಷ್ಟು ಅನುಕೂಲವಾಗಿದ್ದರೆ ಸಾಕು. 'ನಾನು ಮಾಡುವುದು ಮಹೋನ್ನತವಾದ ಕೆಲಸ, ಅವನಾದರೆ! ಏನು ಮಹಾ! ಬಟ್ಟೆ ಶುದ್ಧ ಮಾಡುವ ಕೆಲಸ. ನಾನು ಯೋಗಿ, ಅವನು ನನ್ನನ್ನು ಗೌರವಿಸಬೇಕು.' ಇದೇ ಮೊದಲಾದ ಧೋರಣೆಯೂ ಆ ಸಾಧುವಿನಲ್ಲಿ ಮನೆ ಮಾಡಿತ್ತು. ಅಗಸ ಬಂದ, ಸಾಧು ಆ ಕಲ್ಲಿನ ಮೇಲೆ ಧ್ಯಾನಕ್ಕೆ ಕುಳಿತಿದ್ದುದನ್ನು ನೋಡಿದ. ಅವನು ಕಾದ, ಬಹಳ ಹೊತ್ತು ಕಾದ. ಸೂರ್ಯ ಮೇಲೇರುತ್ತಿದ್ದಾನೆ, ಬಿಸಿಲು ತುಂಬಾ ಆಗಿಹೋದರೆ ಬಟ್ಟೆ ಒಗೆಯುವುದು ಕಷ್ಟವಾಗುತ್ತದೆ. ಸಾಧು ಜಾಗ ತೆರವು ಮಾಡುವ ಸೂಚನೆಯೇ ಕಾಣಲಿಲ್ಲ. ಆಗ ಆತ ಸಾಧುವನ್ನು ಪ್ರಾರ್ಥಿಸಿಕೊಂಡ: ''ಸ್ವಾಮಿ! ತಾವು ಬೇರೊಂದು ಕಲ್ಲಿನ ಮೇಲೆ ಕುಳಿತು ಧ್ಯಾನ ಮಾಡಿ, ಬಟ್ಟೆ ಯಾವುದೆಂದರೆ ಆ ಕಲ್ಲಿನ ಮೇಲೆ ಒಗೆಯಲಾಗುವುದಿಲ್ಲ. ಸೂರ್ಯ ಮೇಲೇರಿದರೆ ಬಟ್ಟೆ ಒಗೆಯಲೂ ಆಗುವುದಿಲ್ಲ'' — ಹೀಗೆ ಬೇರೆ ಬೇರೆ ರೀತಿಯಲ್ಲಿ ಮತ್ತೆ ಮತ್ತೆ ಪ್ರಾರ್ಥನೆ ಮಾಡಿಕೊಂಡ. ಆದರೆ ಸಾಧು ತಾನು ಆಳವಾದ ಧ್ಯಾನದಲ್ಲಿ ಮುಳುಗಿ ಸಮಾಧಿಸ್ಥಿತಿಯಲ್ಲಿರುವನೇನೋ ಎಂಬಂತೆ ಅಗಸನ ಯಾವ ಪ್ರಾರ್ಥನೆಗೂ ಪ್ರತಿಕ್ರಿಯಿಸದೆ ಶಿಲೆಯಂತೆಯೇ ಇದ್ದುಬಿಟ್ಟ. ಸಮಯ ಮೀರುತ್ತಿರುವುದನ್ನು ಗಮನಿಸಿ ಅಗಸನ ಸಹನೆ ಮೀರಿತು. ಅಗಸ ಸಾಧುವನ್ನು ಕೆಳಗಿಳಿಸಲು ಪ್ರಯತ್ನಿಸಿದ. ಸಾಧುವಿಗೆ ಇದು ಅವಮಾನವಾದಂತೆ ಅನ್ನಿಸಿತು. ಆದುದರಿಂದ ಸಾಧು ಅಗಸನನ್ನು ಪಕ್ಕಕ್ಕೆ ತಳ್ಳಿದ. ಎಷ್ಟೊಂದು ಪ್ರಾರ್ಥಿಸಿದರೂ ಪ್ರಾರ್ಥನೆ ಕೇಳದ್ದರಿಂದಲೇ ಸಾಧುವಿನ ಮೇಲೆ ಅಗಸನಿಗೆ ಬೇಸರವಾಗಿತ್ತು. ಈಗ ಸಾಧು ಸಿಟ್ಟಿಗೆ ಒಳಗಾಗಿರುವುದನ್ನು ನೋಡಿ ಅಗಸನಿಗೆ ಸಾಧುವಿನ ಮೇಲಿದ್ದ ಗೌರವ ಪೂರ್ಣವಾಗಿ ದೂರವಾಯಿತು. ಆ ತಾನು ಸಾಧುವನ್ನು ಬಲಾತ್ಕಾರದಿಂದ ಕಲ್ಲಿನಿಂದ ಕೆಳಕ್ಕೆ ಎಳೆದು ಬಿಟ್ಟನು. ಇದರಿಂದ ಸಾಧುವಿನ ಕೋಪ ಮತ್ತೂ ಹೆಚ್ಚಾಯಿತು. ಸಾಧು ಅಗಸನೊಡನೆ ಹೋರಾಟಕ್ಕಿಳಿದನು. ಆದರೆ ಅಗಸ ಹೆಚ್ಚು ಬಲಿಷ್ಠನಾದ ಕಾರಣ ಅಗಸ ಸಾಧುವನ್ನು ಕೆಳಗೆ ಬೀಳಿಸಿ, ಆತನ ಮೇಲೆ ಕುಳಿತ. ನೋವನ್ನು ಸಹಿಸಲಾರದ ಸಾಧು , ''ಓ ದೇವರೇ, ನನ್ನ ಮೇಲೆ ಆಗುತ್ತಿರುವ ಈ ದೌರ್ಜನ್ಯ ನಿನಗೆ ಕಾಣುತ್ತಿಲ್ಲವೆ? ನಾನು ನಿನ್ನನ್ನು ಪೂಜಿಸುವೆ, ಜಪ ಮಾಡುವೆ; ನಿನ್ನಲ್ಲಿ ಅತ್ಯಂತ ಭಕ್ತಿ ವಿಶ್ವಾಸ ಇಟ್ಟಿರುವೆ, ಆದರೂ ನೀನು ನನ್ನ ಸಹಾಯಕ್ಕೆ ಏಕೆ ಬರುತ್ತಿಲ್ಲ? ಅಗಸನ ಹಿಡಿತದಿಂದ ನನ್ನನ್ನು ಬಿಡಿಸಬಾರದೆ?'' ಎಂದು ಮೊರೆಯಿಟ್ಟ.

ಆ ಘಳಿಗೆಯಲ್ಲಿ ಸಾಧುವಿಗೆ ಒಂದು ಅಶರೀರವಾಣಿ ಕೇಳಿಸಿತು: ''ಯಾರು ಸಾಧು, ಯಾರು ಅಗಸ ಎಂಬ ನಿರ್ಣಯ ಮಾಡಲೇ ಆಗುತ್ತಿಲ್ಲ , ಆದ ಕಾರಣ ಸಹಾಯ ಮಾಡಲು ತಿಳಿಯುತ್ತಿಲ್ಲ'' — ಎಂದು. ಈ ಮಾತು ಕೇಳುತ್ತಿದ್ದಂತೆ ಸಾಧುವಿನಲ್ಲಿ ಜ್ಞಾನೋದಯವಾಯಿತು. 'ಸಾಧುವಿನಲ್ಲಿ ಇರಬೇಕಾದ ಯಾವ ನಡೆ ನನ್ನಲ್ಲಿ ಇದೆ? ಗರ್ವ, ಅಹಂಕಾರ, ಇತರರು ತನಗಿಂತ ಅತ್ಯಂತ ಕೀಳು ಎಂಬ ಧೋರಣೆ – ಇದೇ ಮೊದಲಾದ ಸಣ್ಣತನ ನನ್ನಲ್ಲಿ ಮನೆ ಮಾಡಿದೆ. ನಾನು ಮಹಾ ಸಂನ್ಯಾಸಿ ಎಂದು ಬೀಗುತ್ತಿದ್ದೆ' ಎಂದು ತನ್ನಲ್ಲೇ ಪರಾಮರ್ಶಿಸಿಕೊಂಡ ಆ ಸಾಧು. ಅವನ ಗರ್ವವೆಲ್ಲಾ ಅಡಗಿಹೋಯಿತು. ಅವನು ಅಗಸನಲ್ಲಿ ಕ್ಷಮೆ ಯಾಚಿಸಿದ. ತನ್ನದೇ ತಪ್ಪಾಯಿತು, ಇನ್ನೆಂದೂ ಹೀಗೆ ಮಾಡುವುದಿಲ್ಲ ನನ್ನನ್ನು ಬಿಟ್ಟು ಬಿಡು — ಎಂದು ಪ್ರಾರ್ಥಿಸಿದ. ಅಗಸ ಸಾಧುವನ್ನು ಬಿಟ್ಟು ತನ್ನ ಕೆಲಸದ ಕಡೆಗೆ ನಡೆದ.

ಅಂದಿನಿಂದ ಸಾಧು ಸತ್ಯ, ಕ್ಷಮೆ, ಸಹನೆ ಮೊದಲಾದ ಅನೇಕ ಗುಣಗಳನ್ನು ರೂಢಿಸಿಕೊಳ್ಳುತ್ತಾ ನಿಜವಾದ ಸಾಧುವಾದ, ಊರಿನವರೆಲ್ಲರ ಮನ್ನಣೆಗೆ ಪಾತ್ರನಾದ.

(ಸಂಗ್ರಹ: ಡಾ. ಕೆ.ಎಲ್.ಪ್ರಸನ್ನಾಕ್ಷೀ)

ಮಯಿನಾಬಾಯಿ ಮತ್ತು ಮಹಾರಾಣಿ ಚಿಮನಾಬಾಯಿ

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

ಮಯಿನಾಬಾಯಿ

ಹೊಸ ತಿರುವು

ಮಯಿನಾ ಬಾಯಿ ರಾಜನ ಆಸ್ಥಾನದ ನರ್ತಕಿಯಾಗಿದ್ದಳು. ಸ್ವಾಮಿ ವಿವೇಕಾನಂದರು ಖೇತ್ರಿಗೆ ಭೇಟಿಯಿತ್ತಾಗ, ಆ ಚಿಕ್ಕ ರಾಜ್ಯವು ಸ್ವಾಮೀಜಿಯವರನ್ನು ಪರಮಾದರಗಳಿಂದ ಸ್ವಾಗತಿಸಿತು. ಒಂದು ದಿನ ಆಸ್ಥಾನದಲ್ಲಿ ನರ್ತನ, ಗಾಯನಗಳನ್ನು ಏರ್ಪಡಿಸಿದ ಖೇತ್ರಿ ಮಹಾರಾಜ ಸ್ವಾಮೀಜಿಯವರನ್ನೂ ಆಹ್ವಾನಿಸಿದರು. ಸ್ತ್ರೀಯರ ಗಾಯನ, ನರ್ತನವನ್ನು ಸಂನ್ಯಾಸಿ ವೀಕ್ಷಿಸುವುದಾಗಲಿ, ಕೇಳುವುದಾಗಲಿ ಶಾಸ್ತ್ರ ನಿಷೇಧವೆಂದು ಈ ಆಹ್ವಾನವನ್ನು ಮನ್ನಿಸಲಿಲ್ಲ ಸ್ವಾಮೀಜಿ.

ಸ್ವಾಮೀಜಿಯ ಧೋರಣೆಯಿಂದ ನೊಂದ ಮಯಿನಾಬಾಯಿ ವಿನೀತಳಾಗಿ ಸೂರದಾಸರ ಭಜನೆಯೊಂದನ್ನು ಹಾಡಿದಳು: **'ಪ್ರಭು ಮೇರೆ ಅವಗುಣ ಚಿತ ನ ಧರೋ'** ('ಹೇ ಪ್ರಭು! ನನ್ನ ದುರ್ಗುಣಗಳನ್ನು ನೋಡಬೇಡ. ನಿನ್ನನ್ನು ಜನರು ಸಮದರ್ಶಿ ಎಂದು ಕರೆಯುವರು') ಈ ಹಾಡು, ನರ್ತಕಿಯ ನಿಷ್ಕಾಪಟ್ಯ ಸ್ವಾಮೀಜಿಯವರು ಅಂತರಂಗವನ್ನು ತಟ್ಟಿತು. ಕೂಡಲೇ ತಮ್ಮ ನಿರ್ಧಾರವನ್ನು ಬದಲಿಸಿ ಆಸ್ಥಾನಕ್ಕೆ ಆಗಮಿಸಿದ ಸ್ವಾಮೀಜಿ ಮಯಿನಾಬಾಯಿಗೆ ನಮಸ್ಕರಿಸಿದರು. ತಮ್ಮ ಕಣ್ಣು ತೆರೆಸಿದ್ದಕ್ಕಾಗಿ ಅವಳಿಗೆ ಕೃತಜ್ಞತೆಗಳನ್ನು ಅರ್ಪಿಸಿದರು. ನೈಜ ಸಂನ್ಯಾಸಿ ಎಲ್ಲಾ ಭೇದಗಳನ್ನು ಮೀರಿರುತ್ತಾನೆ. ಏಕೆಂದರೆ ವೇದಾಂತದ ಪ್ರಕಾರ ಆತ್ಯಂತಿಕ ಸತ್ಯವಾದ ಬ್ರಹ್ಮವೇ ಪ್ರಪಂಚದಲ್ಲೆಲ್ಲಾ ಓತಪ್ರೋತವಾಗಿರುವುದು. ಅನಂತರ ಸ್ವಾಮೀಜಿ, "ಆ ಘಟನೆಯು ನನ್ನ ಅಜ್ಞಾನದ ಪೊರೆಯನ್ನು ಕಳಚಿತು. ಎಲ್ಲರೂ ಆ ಒಂದೇ ಸತ್ಯದ ಆವಿರ್ಭಾವವಾಗಿರುವುದನ್ನು ನೋಡುತ್ತಿರುವೆ. ಯಾರನ್ನೂ ದೂಷಿಸಲಾರದ ಸ್ಥಿತಿಯಲ್ಲಿರುವೆ" ಎನ್ನುತ್ತಿದ್ದರು.

ಈ ಘಟನೆಯ ನಂತರ ಮಯಿನಾಬಾಯಿಯ ಜೀವನ ಹೊಸ ತಿರುವನ್ನು ಪಡೆಯಿತು. ಆಕೆ ನರ್ತಕಿಯ ಕಸುಬನ್ನು ತೊರೆದು ಭಗವತ್ ಸಾಕ್ಷಾತ್ಕಾರಕ್ಕಾಗಿ ತಪಸ್ಸಿಗೆ ಹೊರಟುಹೋದಳು.

"ನಮಗೆ ಶಕ್ತಿ ಬೇಕು; ಸ್ವಾತಂತ್ರ್ಯ ಪ್ರೇಮ ಬೇಕು... ಈಗ ಇರುವ ಸ್ಥಿತಿಗಿಂತ ಉತ್ತಮರಾಗಬೇಕೆಂಬ ತೀವ್ರ ದಾಹ ನಮ್ಮಲ್ಲಿರಬೇಕು." (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೫, ಪು.೪೩೧)

ಮಹಾರಾಣಿ ಚಿಮನಾಬಾಯಿ

ಸ್ತ್ರೀ ಶಿಕ್ಷಣದ ಪ್ರವರ್ತಕರು

ಮಹಾರಾಜ ಸಯ್ಯಾಜಿ ರಾವ್ ಗಾಯಕ್‌ವಾಡ್‌ರ ದ್ವಿತೀಯ ಪತ್ನಿ ರಾಣಿ ಚಿಮನಾಬಾಯಿ. ಆಕೆಗೆ ಬಾಲ್ಯದಿಂದಲೂ ವಿದ್ಯಾಭ್ಯಾಸದಲ್ಲಿ ಅದೆಷ್ಟು ಆಸಕ್ತಿ ಎಂದರೆ ಶಾಲೆಗೆ ಹೋಗಿ ಕಲಿಯಲಾಗದಿದ್ದರೂ ವಿವಾಹದ ನಂತರ ಅರಮನೆಗೆ ಶಿಕ್ಷಕರನ್ನು ಕರೆಸಿ ಓದುಬರಹ ಕಲಿತಳು. ಸಾಮಾಜಿಕ ಕೆಡಕುಗಳನ್ನು ತೀವ್ರವಾಗಿ ಪ್ರತಿಭಟಿಸಿ, ಸ್ತ್ರೀಯರ ಶಿಕ್ಷಣಕ್ಕಾಗಿ ಪತಿಯನ್ನು ಉತ್ತೇಜಿಸಿದಳು. ಸಿಂಹಿಣಿಯಂತೆ ಧೈರ್ಯವನ್ನು ಹೊಂದಿದ್ದ ಆಕೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮ್ಯಾಡಂ ಕಾಮಾರಿಗೆ ಆರ್ಥಿಕ ಸಹಾಯ ನೀಡಿದಳು. ಒಮ್ಮೆ ಮಹಾಬಲೇಶ್ವರದಲ್ಲೋ ಅಥವಾ ಪುಣೆಯಲ್ಲೋ ಸ್ವಾಮಿ ವಿವೇಕಾನಂದರನ್ನು ಸಂದರ್ಶಿಸಿದ್ದಳು. ನಂತರ ಕಾಶ್ಮೀರದಲ್ಲಿ ಸ್ವಾಮಿ ಅಭೇದಾನಂದರನ್ನು ಪ್ರಥಮ ಬಾರಿ ಭೇಟಿಯಾದಾಗ ಮಹಾರಾಣಿಯು ಹೆಣ್ಣು ಮಕ್ಕಳಿಗೆ ಶಾಲೆ ತೆರೆದರೆ ತಾನು ಎಲ್ಲಾ ರೀತಿಯಲ್ಲೂ ಸಹಾಯ ಮಾಡುವುದಾಗಿ ವಚನವಿತ್ತಳು. ಸ್ವಾಮಿ ವಿವೇಕಾನಂದರ ಸಂದರ್ಶನ ವ್ಯಕ್ತಿತ್ವ ರಾಣಿಯ ಮೇಲೆ ಎಂತಹ ಗಾಢವಾದ ಪ್ರಭಾವ ಬೀರಿತೆಂದರೆ, ವೃದ್ಧಾಪ್ಯದಲ್ಲೂ ಸಹ ರಾಣಿಯು ಪ್ರತಿನಿತ್ಯ ಸ್ವಾಮೀಜಿಯವರ ಕೃತಿಶ್ರೇಣಿಯನ್ನು ಓದುತ್ತಿದ್ದಳು. ಒಮ್ಮೆ ಬ್ರಿಟಿಷ್ ಅಧಿಕಾರಿಗಳ ಮನೋರಂಜನೆಗೆಂದು ರಾಜವಂಶದವರು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆದರೆ ಆ ಐರೋಪ್ಯ ಮಹಿಳೆಯರು ಕಾರ್ಯಕ್ರಮ ಪ್ರಾರಂಭವಾಗುವ ಮುನ್ನವೇ ಇದ್ದಕ್ಕಿದ್ದಂತೆ ಸಭೆಯಿಂದ ಹೊರನಡೆದರು. ಕೆಲವು ಕಾಲದ ನಂತರ ಐರೋಪ್ಯರ ಸಮಾರಂಭಕ್ಕೆ ರಾಣಿ ಚಿಮನಾಬಾಯಿಯನ್ನು ಆಮಂತ್ರಿಸಿದರು. ಸ್ವಾಭಿಮಾನಿಯೂ, ಚುರುಕು ಬುದ್ಧಿಯವಳೂ ಆದ ರಾಣಿಯು ಬದಲಿಗೆ ಬದಲು ಎಂಬಂತೆ ತಾನೂ ಸಭಾಮಧ್ಯೆ ಎದ್ದು ಹೊರಟುಹೋದಳು!



"ಭಾರತದ ಮಹಿಳೆಯರಿಗಾಗಿ ಕೆಲಸ ಮಾಡುವುದಕ್ಕೆ ಬೇಕಾಗಿರುವುದು ಪುರುಷನಲ್ಲ ಸ್ತ್ರೀ, ನಿಜವಾದ ಸ್ತ್ರೀ, ನಿಜವಾದ ಸಿಂಹಿಣಿ..." (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂ. ೫, ಪು.೫೯)

ಯಕ್ಷನು ಯಾರು?

(ಕೇನೋಪನಿಷತ್ತಿನ ಕಥೆ-೨)

ಸ್ವಾಮಿ ವೀರೇಶಾನಂದ

(ಕೇನೋಪನಿಷತ್ತಿನಲ್ಲಿ ಬರುವ ಇನ್ನೊಂದು ಕಥೆ ಇದು. ದೇವತೆಗಳು ಮತ್ತು ಅಸುರರ ಮಧ್ಯೆ ಯುದ್ಧವಾಯಿತು. ಅಸುರರನ್ನು ಸೋಲಿಸಿದ ದೇವತೆಗಳು ಜಯದ ಹಮ್ಮಿನಿಂದ ಬೀಗುತ್ತಿದ್ದರು. ತಮಗಿಂತ ಹೆಚ್ಚಿನವರು ಯಾರೂ ಇಲ್ಲ ಎಂಬ ದುರಭಿಮಾನ ಅವರಿಗೆ. ಆಗ ಬ್ರಹ್ಮತತ್ತ್ವವೇ ಯಕ್ಷನ ರೂಪದಲ್ಲಿ ಕಾಣಿಸಿಕೊಂಡಿತು. ದೇವತೆಗಳ ಅಹಂಕಾರವನ್ನು ಹೋಗಲಾಡಿಸಿತು. ಈ ವೃತ್ತಾಂತವು ಅತ್ಯಂತ ನಾಟಕೀಯವಾಗಿದೆ. ಹೀಗಾಗಿ ಅದನ್ನು ನಾಟಕರೂಪದಲ್ಲಿಯೇ ಪ್ರಸ್ತುತಪಡಿಸುವ ಪ್ರಯತ್ನ ಮಾಡಲಾಗಿದೆ. ನಾಟಕವು ಸೃಜನಾತ್ಮಕತೆಯಿಂದ ಮೂಡಿಬರುವ ಸಲುವಾಗಿ, ಮೂಲ ಉಪನಿಷತ್ತಿನ ರೂಪದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲಾಗಿದೆ. ಮೂಲ ಉಪನಿಷತ್ತನ್ನು ಅಧ್ಯಯನ ಮಾಡುವ ಆಸಕ್ತಿಯನ್ನು ಕೆರಳಿಸುವುದೇ ಈ ಬರಹದ ಉದ್ದೇಶ.)

*(ರಂಗದ ಮೇಲೆ ತಿಳಿಬೆಳಕು ಹರಡಿದೆ. **'ಆಪ್ಯಾಯಂತು ಮಮಾಂಗಾನಿ'** ಎನ್ನುವ ವೈದಿಕ ಪ್ರಾರ್ಥನಾ ಮಂತ್ರವು ದೂರದಿಂದ ಕೇಳಿಬರುತ್ತಿದೆ. ಇದರ ಹಿನ್ನೆಲೆಯಲ್ಲಿಯೇ ಧ್ವನಿಯೊಂದು ಕೇಳಿಸುತ್ತಲಿದೆ.)*

ಹಿನ್ನೆಲೆಯ ಧ್ವನಿ : ಕಿವಿಗಳಿಗೆ ಕಿವಿಯಾಗಿ, ಕಣ್ಣಿಗೆ ಕಣ್ಣಾಗಿ ಮಾತಿಗೆ ಮಾತಾಗಿ ಇರುವುದೇನು?

ಮನಸ್ಸಿಗೆ ಮನಸ್ಸಾಗಿ, ಬುದ್ಧಿಗೆ ಬುದ್ಧಿಯಾಗಿ, ತಿಳಿವಿಗೆ ತಿಳಿವಾಗಿ ಕಂಗೊಳಿಪುದೇನು?

ಆತ್ಮತತ್ತ್ವವೇ ಅದು, ತಿಳಿಯುವುದು, ತಿಳಿಯದುದು – ಎರಡನ್ನೂ ಮೀರಿಹುದು; ತಿಳಿಯದವನಿಗೆ ತಿಳಿದಿಹುದು, ತಿಳಿದವನು ಅರಿತಿಲ್ಲ — ಈ ಎಲ್ಲ ಭಾವನೆಗಳನ್ನು ದಾಟಿ ಹೋಗಿಹುದು. ಈ ಆತ್ಮವೇ ಬ್ರಹ್ಮವು, ಸಕಲ ಚರಾಚರದ ಮೂಲ ಸ್ರೋತವು, ಎಲ್ಲದರ ಗುಟ್ಟು , ಎಲ್ಲ ಕಡೆ, ಎಲ್ಲವೂ ಆಗಿರುವ ಅದನ್ನರಿತವನಿಗೇ ಇದು ಗೊತ್ತು. ನಾನೆಂಬುದೂ ಅದುವೇ, ನೀನೆಂಬುದೂ ಅದುವೇ, ಇರುವುದು ಒಂದೇ, ಇಲ್ಲ ಇಲ್ಲ ಎರಡೆಂದೇ.

(ದೇವತೆಗಳು ಮತ್ತು ರಾಕ್ಷಸರ ಯುದ್ಧದ ದೃಶ್ಯ. ಹೊಡಿ, ಬಡಿ, ಕೊಲ್ಲು ಎನ್ನುವ ಅಟ್ಟಹಾಸದ ಕೂಗುಗಳು, ಅಯ್ಯೋ, ಅಮ್ಮಾ ಎನ್ನುವ ಆರ್ತನಾದದ ಧ್ವನಿಗಳು ಅದರೊಂದಿಗೆ ಮಿಶ್ರಿತವಾಗಿವೆ.. ಧ್ವನಿ, ಬೆಳಕು ಮತ್ತು ನೆರಳುಗಳ ಪ್ರದರ್ಶನದಿಂದ ಯುದ್ಧದ ದೃಶ್ಯವನ್ನು ತೋರಿಸಬಹುದು. ಹಿನ್ನಲೆಯಲ್ಲಿ ಶಬ್ದ: 'ನಮಗೇ ಜಯವಾಯಿತು, ನಮಗೇ ಜಯವಾಯಿತು ಹಾ! ಹಾ!' ಎನ್ನುವ ಅಟ್ಟಹಾಸ. ಗೆದ್ದ ದೇವತೆಗಳು ಒಬ್ಬೊಬ್ಬರಾಗಿ ಬೀಗುತ್ತ, ನಗುತ್ತ, ಆನಂದದಿಂದ ಬರುತ್ತಿದ್ದಾರೆ. ರಂಗದ ಎಡಭಾಗದಲ್ಲಿ ಕುಳಿತು ಮಾತನಾಡಿಕೊಳ್ಳುತ್ತಿದ್ದಾರೆ.)

ಅಗ್ನಿ: ಹುಟ್ಟಡಗಿಸಿಬಿಟ್ಟೆವು ಆ ದಾನವರ ಆಟಾಟೋಪವನ್ನು. ಹುಲಿಗಳಂತೆ ಎಗರಿ ಬಂದವರು ಕುರಿಗಳಂತೆ ಹೆದರಿ ಓಡಿದರು.

ವಾಯು: ನಿಜ, ನಿಜ. ಘೋರರೂಪಿಗಳು ಅವರು, ಅಬ್ಬರಿಸಿ ಬಂದರು. ಬೊಬ್ಬೆ ಹೊಡೆಯುತ್ತ ಕಾದಿದರು. ಸದ್ದೇ ಇಲ್ಲದೆ ಅಡಗಿ ಹೋದರು.

ಇಂದ್ರ : ಯಾರದಿದು ಈ ವಿಜಯ, ಯಾರದಿದು ಈ ಮಹಿಮೆ, ಯಾರದಿದು ಈ ಗರಿಮೆ? ನಮ್ಮದೇ ನಮ್ಮದೇ, ಏಳು ಮೇಲಿನ ಲೋಕ, ಏಳು ಕೆಳಗಿನ ಲೋಕ, ಭೂಲೋಕ; ದಶದಿಕ್ಕು — ಈ ಎಲ್ಲವೂ ಈಗ ನಮ್ಮದೇ. ನಮ್ಮ ಸಮರಾರಿಹರು? ನಮ್ಮ ಎದುರಿಗೆ ಬಂದು ನಿಲ್ಲುವವರು ಯಾರು? ಇಡೀ ಸೃಷ್ಟಿಯೇ ಇಹುದು ನಮ್ಮ ಪದತಲದಲ್ಲಿ. ದೇವತೆಗಳೇ ಒಡೆಯರು, ದೇವತೆಗಳೇ ಎಲ್ಲದರ ಅಧಿಪತಿಗಳು. ಆ ದೇವತೆಗಳ ನಾಯಕನು, ಸರ್ವಲೋಕ ವಂದಿತನು ಯಾರು ಯಾರು? ನಾನೇ ನಾನೇ.

ಇತರ ದೇವತೆಗಳು: ಹೌದು ಜೀಯಾ, ಹೌದು ಒಡೆಯಾ, ಹೌದು ನೃಪನೇ, ನೀನೇ ನಮ್ಮ ಜಯದ ಕಾರಣನು, ದೇವತೆಗಳಾದ ನಮ್ಮ ಮಹಿಮೆಯನ್ನು ಮೀರುವವರು ಯಾರಾದರೂ ಇದ್ದಾರೇನು?

ಅಗ್ನಿ: ನಮ್ಮ ಶಕ್ತಿಯೇನು? ನಮ್ಮ ಸಾಮರ್ಥ್ಯವೇನು? ಓಜಸ್ಸೇನು, ತೇಜಸ್ಸೇನು? ಇವೆಲ್ಲದಕ್ಕೂ ಮಿತಿಯುಂಟೇ, ಎಲ್ಲೆಯುಂಟೆ?

ವಾಯು: ಪಾತಾಳವಾಸಿಗಳು, ಭೂಮಂಡಲದ ಮಾನುಷರು, ಗಂಧರ್ವ, ಕಿನ್ನರ, ಸಿದ್ಧ, ಪಿತೃಗಳೆಲ್ಲರೂ ನಮ್ಮ ದಾಸರು. ನಾವು ನಡೆಸಿದ ಹಾಗೆ ಈ ಸೃಷ್ಟಿ, ನಾವು ಆದೇಶವಿತ್ತ ಹಾಗೆ ಚಂದ್ರ, ಸೂರ್ಯ, ನಕ್ಷತ್ರಗಳ ಬೆಳಕು. ಎಲ್ಲದರ ಮೇಲೂ ನಮ್ಮದೇ

ಪ್ರಭುತ್ವ. ವಿಶ್ವದೆಲ್ಲ ಆಗುಹೋಗುಗಳಿಗೂ ನಾವೇ ಶಕ್ತಿದಾತರು, ಆಕಾಶದಂತೆ ನಮ್ಮ ಮಹಿಮೆ, ಸಾಗರದ ಆಳದಂತೆ ನಮ್ಮ ಗರಿಮೆ, ಅಪಾರ ವಿಸ್ತಾರ. ಅಳೆಯಲಾಗದ ಆಳ.

(ದೇವತೆಗಳೆಲ್ಲರೂ ಗಹಗಹಿಸಿ ನಗುತ್ತ ಮಾತನಾಡಿಕೊಳ್ಳುತ್ತಿರುವ ಧ್ವನಿ ಸಣ್ಣದಾಗಿ ಕಡಮೆಯಾಗುವುದು, ರಂಗದ ಬೆಳಕು ಬಲಭಾಗಕ್ಕೆ ಬೀಳುವುದು. ದೇವತೆಗಳ ಮಾತುಕತೆ ಸಣ್ಣದಾಗಿ ಮುಂದುವರೆಯುತ್ತಲೇ ಇರುವುದು. ನಿಧಾನವಾಗಿ ಧೂಮದ ಪ್ರವಾಹದ ಮಧ್ಯೆ, ಬೆಳಕಿನ ಗೊಂಚಲೊಂದು ಕಾಣಿಸಿಕೊಳ್ಳುವುದು. ಆ ಬೆಳಕಿನ ಪುಂಜವು ವ್ಯಕ್ತಿಯ ಆಕೃತಿಯನ್ನು ಪಡೆಯುವುದು. ದಿವ್ಯವೇಷಭೂಷಿತನಾದ, ಗಂಭೀರ ಯಕ್ಷಮೂರ್ತಿಯು ನಿಧಾನವಾಗಿ ಕಾಣಿಸಿಕೊಳ್ಳುವುದು. ಹಿನ್ನೆಲೆಯಲ್ಲಿ ಓಂಕಾರ, ವೇದ ಮಂತ್ರಗಳು, 'ತತ್ ತ್ವಮ್ ಅಸಿ', 'ಅಹಂ ಬ್ರಹ್ಮಾಸ್ಮಿ' ಮಹಾವಾಕ್ಯಗಳ ಗಂಭೀರ ಉಚ್ಚಾರಣೆ – ಇವೆಲ್ಲವೂ ವಾದ್ಯ ಸಂಗೀತದ ಹಿನ್ನೆಲೆಯಲ್ಲಿ ಕೇಳಿಬರುತ್ತಿರುವುದು. ದೇವತೆಗಳು ಅಚ್ಚರಿಯಿಂದ ಈ ದಿವ್ಯರೂಪವನ್ನೇ ನೋಡುತ್ತಿದ್ದಾರೆ.)

ಅಗ್ನಿ: ಎಂಥ ಉಜ್ವಲ ಮೂರ್ತಿ! ಎಂಥ ದಿವ್ಯ ಸನ್ನಿಧಾನ! ಇದಾರು ಈ ಮಹಾಪುರುಷ?!

ವಾಯು: ಹೌದಲ್ಲವೆ? ಇಂಥ ತೇಜಸ್ಸನ್ನು, ಗಾಂಭೀರ್ಯವನ್ನು ನಾನು ಎಲ್ಲಿಯೂ ಯಾರಲ್ಲೂ ನೋಡಿಲ್ಲ. ನಮ್ಮ ಕಡೆಯೇ ದಿಟ್ಟಿಸಿನೋಡುತ್ತಿರುವ ಈ ಭವ್ಯ ಮೂರ್ತಿ ಅದಾವುದು?

ಇಂದ್ರ: ಆಹಾ! ನಾನು ದೇವೇಂದ್ರ. ನನಗೆ ಗೊತ್ತಿಲ್ಲದ್ದು ಏನೂ ಇಲ್ಲ! ಆದರೆ, ಇಂಥ ಭವ್ಯ ದಿವ್ಯ ರೂಪವನ್ನು ಮೊದಲ ಬಾರಿಗೆ ನಾನು ನೋಡುತ್ತಿದ್ದೇನೆ. ನನ್ನ ಕೈಗಳು ತಾವಾಗಿಯೇ ಈ ಜ್ಯೋತಿರೂಪಕ್ಕೆ ನಮಿಸುತ್ತಿವೆ. ನನ್ನ ಶಿರಸ್ಸು ತಾನಾಗಿಯೇ ಬಾಗುತ್ತಿದೆ. ಮನಸ್ಸು ವಿಸ್ಮಯ, ಅಚ್ಚರಿ, ಗೌರವ, ವಿನೀತ ಭಾವಗಳಿಂದ ತುಂಬಿಹೋಗಿದೆ. ಯಾರಿವನು? ಯಾರಿವನು?

(ಸ್ವಲ್ಪ ಹೊತ್ತು ಯೋಚಿಸಿದ ನಂತರ) ಅಗ್ನಿದೇವಾ!

ಅಗ್ನಿ : ಪ್ರಭೂ!

ಇಂದ್ರ: ನೀನು ಬಹಳ ಬುದ್ಧಿವಂತ, ಪರಾಕ್ರಮಶಾಲಿ. ನಡೆದುದೆಲ್ಲವನ್ನೂ ತಿಳಿಯುವ ಜಾತವೇದನು ನೀನು. ಎಂದಿಗೂ ನಮ್ಮೆಲ್ಲರ ಮುಂದೆ ಸಾಗುವ ಅಗ್ನಿಯು ನೀನು. ವೇದಗಳಲ್ಲಿ ಮೊದಲ ದೇವತೆಯೆಂದು ನಿನ್ನನ್ನೇ ಸ್ತುತಿಸಿದ್ದಾರೆ. ಈ ಯಕ್ಷನಂತೆ ಕಾಣುವ ರೂಪವು ಯಾವುದೆಂದು ಕಂಡುಹಿಡಿಯಲು ನೀನೇ ಸಮರ್ಥ. ಹೋಗಿ ಬಾ, ಅಗ್ನಿ, ತಿಳಿದು ಬಾ, ಈ ರೂಪ ಯಾವುದೆಂದು.

ಉಳಿದ ದೇವತೆಗಳು : ಹೌದು, ಹೌದು, ಅಗ್ನಿಯೇ, ನೀನೇ ಸಮರ್ಥನು, ನೀನೇ ಸಮರ್ಥನು. ಹೋಗಿ ಬಾ, ಹೋಗಿ ಬಾ. ಆ ಯಕ್ಷನು ಅದಾರೆಂದು ತಿಳಿದುಬಾ.

(ಅಗ್ನಿಯು ನಿಧಾನವಾಗಿ ಗರ್ವದಿಂದ ಯಕ್ಷನ ಹತ್ತಿರ ಬರುತ್ತಾನೆ. ಯಕ್ಷನು ಅವನ ಕಡೆ ನೋಡುವುದೂ ಇಲ್ಲ, ಮಾತನಾಡುವುದೂ ಇಲ್ಲ. ಅಗ್ನಿಯು ದರ್ಪದಿಂದ ಯಕ್ಷನ ಮುಂದೆ ನಿಂದಿರುತ್ತಾನೆ. ಬಹಳ ಕಾಲ ಕಳೆಯುತ್ತದೆ. ಅಗ್ನಿಯು ಯಕ್ಷನ ಎದುರಿಗೆ ಮೌನಿಯಾಗಿ ನಿಂತಿರುತ್ತಾನೆ. ಅವನ ಬಾಯಿಯಿಂದ ಮಾತು ಹೊರಡುತ್ತಿಲ್ಲ. ಕಡೆಗೆ ಯಕ್ಷನೇ ಅಗ್ನಿಯನ್ನು ಮಾತ ನಾಡಿಸುತ್ತಾನೆ.)

ಯಕ್ಷ : (ಒಂದು ರೀತಿಯ ಅಸಹನೆಯ ಭಾವನೆಯಿಂದ) ಯಾರು ನೀನು?

ಅಗ್ನಿ: (ಆಶ್ಚರ್ಯ ಮತ್ತು ಕೋಪಗಳಿಂದ) ನಾನಾರೆಂದು ಗೊತ್ತಿಲ್ಲವೇ, ಇದೇನಿದು?! ನಿಜವಾಗಲೂ ನಾನು ಯಾರೆಂದು ನಿನಗೆ ಗೊತ್ತೇ ಇಲ್ಲವೆ? ಅಗ್ನಿ ನಾನು. ಅಗ್ನಿ. ನನ್ನನ್ನು ಜಾತವೇದವೆಂದೂ ಕರೆಯುತ್ತಾರೆ. ಎಲ್ಲ ಲೋಕಗಳಲ್ಲಿ ಸುಪೂಜ್ಯನು ನಾನು, ಪ್ರಸಿದ್ಧನು ನಾನು, ಶಕ್ತಿವಂತನು ನಾನು.

ಯಕ್ಷ : ಓಹೋ, ಇರಲಿ, ಇರಲಿ. ಏತಕ್ಕೆ ನೀನು ಪ್ರಸಿದ್ಧನು? ಅಂಥಹುದು ಏನುಂಟು ನಿನ್ನಲ್ಲಿ ಸಾಮರ್ಥ್ಯ, ಪರಾಕ್ರಮ?

ಅಗ್ನಿ: ಸರ್ವಲೋಕಗಳಲ್ಲಿಯೂ ಪ್ರಸಿದ್ಧನಾದ ನನ್ನ ಪರಾಕ್ರಮವೇನೆಂದು ಕೇಳುವೆಯಲ್ಲ! ಇದು ಆಶ್ಚರ್ಯವೇ ಸರಿ. ಎತ್ತೆತ್ತ, ಏನು ಏನು ಇದೆಯೋ, ಅದೆಲ್ಲವನ್ನೂ ಸುಟ್ಟೇನು. ಸುಟ್ಟು ನಿಶ್ಶೇಷವನ್ನಾಗಿ ಮಾಡಿಬಿಟ್ಟೇನು. ಬೂದಿಯನ್ನಾಗಿಸಿಬಿಟ್ಟೇನು. ಇದು ನನ್ನ ಶಕ್ತಿ. ಈ ಸೃಷ್ಟಿಯಲ್ಲಿಯೇ ಯಾರಿಗೂ ಇಲ್ಲದ ಅಗಣಿತ ಸಾಮರ್ಥ್ಯ ನನ್ನದು.

ಯಕ್ಷ : ಹೌದೇನು, ಬಹಳ ಒಳ್ಳೆಯದು, ಬಹಳ ಒಳ್ಳೆಯದು, (ಅಲ್ಲಿಯೇ ಪಕ್ಕದಲ್ಲಿ ಬಿದ್ದಿದ್ದ ಒಂದು ಹುಲ್ಲುಕಡ್ಡಿಯನ್ನು ಅಗ್ನಿಯ ಮುಂದಿಟ್ಟು) ಇಡೀ ಸೃಷ್ಟಿಯನ್ನೇ ಸುಟ್ಟು ಬೂದಿ ಮಾಡಿಬಿಡುವೆ ನೆಂಬ ಸೊಕ್ಕಿನ ಮಾತನಾಡುವೆಯಲ್ಲ! ಇದೋ, ಈ ಅತಿ ಸಣ್ಣ ಹುಲ್ಲಿನ ಕಡ್ಡಿ, ಬಹಳ ಕ್ಷುದ್ರವಾದುದು – ಇದನ್ನು ಸುಡುವೆಯೇನು?

ಅಗ್ನಿ: (ಅಟ್ಟಹಾಸದಿಂದ) ಈ ಹುಲ್ಲುಕಡ್ಡಿಯನ್ನು ಸುಡಬೇಕೇ. ಇದೋ, ಇದೋ, (ಮುನ್ನುಗ್ಗುವನು) (ಮನಸ್ಸಿನಲ್ಲಿಯೇ) ಇದೇನಿದು, ಆಶ್ಚರ್ಯವಾಗುತ್ತಲಿದೆ. ಇಡೀ ಮೂರು ಲೋಕಗಳನ್ನು ದಹಿಸುವ ಸಾಮರ್ಥ್ಯವುಳ್ಳ ನನಗೆ ಈ ಕ್ಷುದ್ರವಾದ ಹುಲ್ಲುಕಡ್ಡಿಯನ್ನು ಸುಡಲು ಸಾಧ್ಯವಾಗುತ್ತಿಲ್ಲವಲ್ಲ! ನನ್ನ ಶಕ್ತಿಯೆಲ್ಲವೂ ಅಡಗಿಹೋದಂತೆ ಕಾಣುವುದಲ್ಲ! ಇದೇನಾಗಿಬಿಟ್ಟಿತು! ಏನಾಗುತ್ತಲಿದೆ ಎನಗೆ! ಈ ಯಕ್ಷನ ಎದುರಿಗೆ ನನ್ನೆಲ್ಲ ಶಕ್ತಿಯನ್ನು ಪ್ರಯೋಗಿಸಿದರೂ, ಎಲ್ಲವೂ ನಿಷ್ಪ್ರಯೋಜನವಾದಂತೆ ಕಂಡುಬರುತ್ತಿದೆಯಲ್ಲ! ಇನ್ನು ಇವನ ಹತ್ತಿರ ನಿಂತಿರುವುದು ಅವಮಾನ, ಅವಮಾನ! (ಹಿಂತಿರುಗಿ ಓಡುವನು)

ಯಕ್ಷ: ಓ ಅಗ್ನಿ, ಓ ಅಗ್ನಿ! ಎಲ್ಲಿಗೆ ಓಡುವೆ?

(ಅಷ್ಟರಲ್ಲಿ ಅಗ್ನಿಯು ದೇವತೆಗಳನ್ನು ಸೇರಿಕೊಂಡನು. ದೇವತೆಗಳೆಲ್ಲ ಅವನನ್ನು ಸುತ್ತುವರಿದರು)

ದೇವತೆಗಳು: ಏನಾಯಿತು? ಏಕಿಷ್ಟು ಗಾಬರಿ, ಅಗ್ನಿ? ಯಾರು ಈ ಯಕ್ಷ ಎಂದು ತಿಳಿದು ಬಂದೆಯೇನು?

ಅಗ್ನಿ: (ಹತಾಶೆಯ ಧ್ವನಿಯಲ್ಲಿ) ತಿಳಿಯಲಾರೆನು, ಆ ಯಕ್ಷ ಯಾರೆಂದು ಅರಿಯಲಾರೆನು. ದಯವಿಟ್ಟು ಬಿಟ್ಟುಬಿಡಿ ನನ್ನನು!

ಇಂದ್ರ: ಸರಿ, ಸರಿ, ಆ ಯಕ್ಷನ ಪ್ರಭಾವದ ಎದುರು ಸೋತು ಸುಣ್ಣವಾಗಿ ಓಡಿ ಬಂದಿರುವೆ ನೀನು. ಓ ವಾಯು, ನೀನಾದರೂ ವಿಚಾರಿಸಬಾರದೆ? ಆ ಯಕ್ಷ ಯಾರೆಂದು ತಿಳಿದುಬರಬಾರದೆ?

ದೇವತೆಗಳು: ಹೌದು, ಹೌದು, ಓ ವಾಯು, ಓ ವಾಯು. ಹೌದು, ಹೌದು. ನೀನೇ ಸಮರ್ಥನು, ನೀನೇ ಸಮರ್ಥನು. ಹೋಗಿ ಬಾ, ಹೋಗಿ ಬಾ. ಆ ಯಕ್ಷನು ಅದಾರೆಂದು ತಿಳಿದುಬಾ.

(ವಾಯುವು ವೇಗದಿಂದ ಹೋಗಲು ಪ್ರಯತ್ನಿಸುವನು. ಅದಾವುದೋ ಶಕ್ತಿ ಅವನನ್ನು ತಡೆದಂತೆ ಆಗಿ, ಹಿಮ್ಮೆಟ್ಟುವನು. ಕಷ್ಟಪಟ್ಟು ಹೆಜ್ಜೆ ಹಾಕುತ್ತ ಹೋಗುವನು. ಯಕ್ಷನ ಎದುರು ನಿಲ್ಲುವನು. ಬಹಳ ಹೊತ್ತು ಮಾತನಾಡಲಾರದೆ ಹಾಗೆಯೇ ಇರುವನು. ಕಡೆಗೆ ಯಕ್ಷನೇ ಮಾತನಾಡಿಸುವನು)

ಯಕ್ಷ: ಯಾರು ನೀನು? ಆ ಅಗ್ನಿಯೆಂಬುವನು ಓಡಿಯೇ ಹೋದ. ನೀನಾರು ಈಗ ಬಂದಿರುವೆ? ನಿನ್ನ ಸಾಮರ್ಥ್ಯವೇನು? ನಿನ್ನ ಪರಾಕ್ರಮವೇನು?

ವಾಯು: (ಗರ್ವದಿಂದ) ಮೂರು ಲೋಕಗಳನ್ನೂ ಹಾರಿಸಿ ಒಯ್ಯುವ ವಾಯುವೇ ನಾನು. ಎಲ್ಲವನ್ನೂ ಎತ್ತಿಹಾಕಿಬಿಡುವೆ. ಎಲ್ಲವನ್ನೂ ಒಯ್ದುಬಿಡುವೆ. ತಡೆಯಲಾರರು ಯಾರೂ ಎನ್ನನು. ಅಂತರಿಕ್ಷದಲ್ಲಿ ಸರ್ವಾಂತರ್ಯಾಮಿಯಾಗಿ ಸಂಚರಿಸುವ ಮಾತರಿಶ್ವನು ನಾನು. ಎಲ್ಲ ಕಡೆ ವಾಸನೆಯನ್ನು ಬೀರುವ ವಾಯುವೇ ನಾನು.

ಯಕ್ಷ: ಹಾಗೋ, ಒಳ್ಳೆಯದು, ಒಳ್ಳೆಯದು. ಹೇ ವಾಯು ದೇವನೇ, ನಿನ್ನ ಪರಾಕ್ರಮವನ್ನು ತೋರು. ಹೆಚ್ಚಿನದೇನನ್ನೂ ಕೇಳುತ್ತಿಲ್ಲ ನಾನು. ಇದೋ, ಈ ಹುಲ್ಲುಕಡ್ಡಿಯನ್ನು ಎತ್ತಿಕೋ ಸಾಕು. ಅಷ್ಟು ಸಾಕು.

ವಾಯು: (ಅಗಾಧ ವೇಗದಲ್ಲಿ ಮುನ್ನುಗ್ಗಲು ಪ್ರಯತ್ನಿಸುವನು) ಇದೇನಿದು? ಎಲ್ಲವನ್ನೂ ಕ್ಷಣಮಾತ್ರದಲ್ಲಿ ಒಯ್ಯಬಲ್ಲ ನನ್ನ ಶಕ್ತಿಯೇ ಉಡುಗುತ್ತಿಹುದಲ್ಲ! ಕ್ಷುದ್ರವಾದ ಹುಲ್ಲುಕಡ್ಡಿಯನ್ನೂ ಎತ್ತಲಾರದ ನಿಶ್ಶಕ್ತಿಯು ಕಾಡುತಿಹುದಲ್ಲ! ಏನಿದು, ಏನಾಗುತ್ತಿದೆ ನನಗೆ!? ಭಯವು ಆವರಿಸುತ್ತಿದೆ. ಇರಲಾರೆನು, ಇಲ್ಲಿ ಇನ್ನೊಂದು ಕ್ಷಣವೂ ಇರಲಾರೆ ನಾನು. (ಹಿಂದಿರುಗಿ ಓಡಿ ಬರುವನು)

(ಭಯದಿಂದ ನಡುಗುತ್ತಿರುವ ವಾಯುವಿನ ಸುತ್ತಲೂ ದೇವತೆಗಳು ಮುತ್ತುವರು.)

ದೇವತೆಗಳು: ಏನಾಯಿತು? ಏಕಿಷ್ಟು ಗಾಬರಿ, ವಾಯು? ಯಾರು ಈ ಯಕ್ಷ ಎಂದು ತಿಳಿದು ಬಂದೆಯೇನು?

ವಾಯು: (ಹತಾಶೆಯ ಧ್ವನಿಯಲ್ಲಿ) ತಿಳಿಯಲಾರೆನು, ಆ ಯಕ್ಷ ಯಾರೆಂದು ಅರಿಯಲಾರೆನು. ದಯವಿಟ್ಟು ಬಿಟ್ಟುಬಿಡಿ ನನ್ನನು!

ಇಂದ್ರ: ವಾಯುವೂ ನಿರ್ವೀರ್ಯನಾಗಿ ಹಿಂತಿರುಗಿ ಬಂದುಬಿಟ್ಟನು. ಇನ್ನು ನಾನೇ ಉಳಿದವನು. ನಾನೇ ಹೋಗುವೆನು. ಈ ಯಕ್ಷ ಯಾರೆಂದು ತಿಳಿದುಬರುವೆನು. ಅಗ್ನಿವಾಯುಗಳ ಶಕ್ತಿಯನ್ನೇ ಅಡಗಿಸಿದ ಆ ಯಕ್ಷನು ನಿಜವಾಗಿಯೂ ಯಕ್ಷನಲ್ಲ. ಇದರಲ್ಲಿ ಯಾವುದೋ ರಹಸ್ಯ ಅಡಗಿಹುದು. ಪರಮಪುರುಷನು ಇವನು; ದಿವ್ಯಜ್ಯೋತಿಯು ಇವನು. ಅಗ್ನಿವಾಯುಗಳು ಅಹಂಮದದಿಂದ ಹೋಗಿ, ಗರ್ವಭಂಗಗೊಂಡು ಹಿಂದಕ್ಕೆ ಬಂದರು. ನಾನು ಆ ರೀತಿ ಹೋಗುವುದು ಉಚಿತವಲ್ಲ. ವಿನಯದಿಂದ ಹೋಗುವೆನು, ನವಿರಾಗಿ ಕೇಳುವೆನು, ಆ ಅಪಾರ ಮಹಿಮನಲ್ಲಿ ಶರಣಾಗುವೆನು.

(ಇಂದ್ರನು ವಿನಯದಿಂದ ಯಕ್ಷನ ಬಳಿಸಾರುವನು. ನಮಸ್ಕರಿಸುತ್ತಲೇ ಹತ್ತಿರ ಬರುವನು. ಹತ್ತಿರ ಬಂದ ಒಡನೆಯೇ, ಆ ಅದ್ಭುತ ರೂಪವು ಕಣ್ಮರೆಯಾಗುವುದು.)

ಇಂದ್ರ: ಅಯ್ಯೋ, ಅಗ್ನಿವಾಯುಗಳ ಹತ್ತಿರ ಮಾತುಕತೆಯನ್ನಾದರೂ ಈ ಮಹಾಪುರುಷನು ಆಡಿದನು. ಆದರೆ ನನಗೆ ದರ್ಶನಭಾಗ್ಯವನ್ನೂ ಕರುಣಿಸಲಿಲ್ಲವಲ್ಲ! ಗೊತ್ತಾಯಿತು, ತಿಳಿಯಿತು. ನನ್ನ ಒಡೆತನವು ಎಲ್ಲೆಲ್ಲಿಯೂ ಇರುವುದೆಂಬ ಅಹಂಕಾರವು ನನ್ನಲ್ಲಿ ಇನ್ನೂ ಇದೆ. ಅದು ನಿರ್ನಾಮವಾಗದ ಹೊರತು, ನನಗೆ ಅವನ ದರ್ಶನವಿಲ್ಲ. ಯಕ್ಷನು ಯಾರು ಎಂದು ಹುಲು ದೇವತೆಯಾದ ನಾನು ವಿಚಾರಿಸಲು ಯತ್ನಿಸಿದೆ. ಎಂಥ ಅಲ್ಪ ಬುದ್ಧಿ ನನ್ನದು! ಎಂಥ ಕೀಳು ಅಹಂಕಾರ ನನ್ನದು. ಯಕ್ಷನ ರೂಪದಲ್ಲಿ ಕಾಣಿಸಿಕೊಂಡ, ಆ ಪರಮಪುರುಷನು ಯಾರು? ಆ ಪರಂಜ್ಯೋತಿ ಅದಾವುದು? ಹೇ ದೇವಾಧಿದೇವ, ಕೃಪೆ ಮಾಡು, ನಿನ್ನ ಅರಿವನ್ನು ಅಲ್ಪರಾದ ನಮಗೆ ತೋರಿಸು. ನಿನ್ನ ನಿಜ ರಹಸ್ಯವನ್ನು ಅನಾವರಣ ಮಾಡು. (ಕೈಯೆತ್ತಿ ಆಕಾಶದತ್ತ ಮುಖ ಮಾಡಿ, ನಮಸ್ಕರಿಸುತ್ತ ಪ್ರಾರ್ಥಿಸುವನು)

(ಆ ಯಕ್ಷನು ಯಾವ ಕಡೆ ನಿಂತಿದ್ದನೋ, ಅದೇ ಸ್ಥಳದಲ್ಲಿ, ಶೋಭಾಯಮಾನವಾದ ಸ್ತ್ರೀ ಆಕೃತಿ ಕಾಣಿಸಿಕೊಂಡಿತು. ಬಂಗಾರದಂತೆ ಬೆಳಗುತ್ತಿದ್ದ ಆ ದೇವಿಯನ್ನು ಕಂಡು ಭಕ್ತಿಯಿಂದ ಇಂದ್ರನು ನಮಸ್ಕರಿಸಿದನು)

ಇಂದ್ರ: ಅಮ್ಮಾ, ನೀನು ನಿಂತಿದ್ದ ಈ ಸ್ಥಳದಲ್ಲಿಯೇ ಉಜ್ವಲ ಯಕ್ಷರೂಪಿಯು ಇದ್ದಿತು. ಅದು ಮರೆಯಾಗಿ ನೀನಿಲ್ಲಿ ನಿಂತಿದ್ದೀಯೆ. ತಾಯೆ, ನೀನಾರು? ನಮ್ಮನ್ನು ಅನುಗ್ರಹಿಸಲೆಂದೇ ಬಂದಿರುವ ನಿನ್ನ ಮಹಿಮೆಯೇನು? ಆ ಯಕ್ಷನು ಯಾರು? ಅವನ ಮಹಿಮೆಯೇನು? ದಯವಿಟ್ಟು ತಿಳಿಸು, ಅಮ್ಮಾ.

ಉಮೆ: ಮಗೂ, ನಾನು ಉಮೆ. ಹಿಮವಂತನ ಮಗಳು, ನಾನೇ ವಿದ್ಯೆ, ನಾನೇ ಶಕ್ತಿಸ್ವರೂಪಿಣಿ, ಮಗೂ, ನಾನೇ ನಿನಗೆ


ಪರಬ್ರಹ್ಮದ ಜ್ಞಾನವನ್ನು ದಯಪಾಲಿಸುವವಳು. ಶ್ರದ್ಧಾಳುಗಳ ಅಜ್ಞಾನವನ್ನು ಕಳೆದು ಸುಜ್ಞಾನವನ್ನು ಮೂಡಿಸುವ ವಿದ್ಯಾರೂಪಿಣಿಯೇ ನಾನು. ನಾನು ಮಾತ್ರವೇ ಆ ಯಕ್ಷನ ನಿಜವಾದ ರೂಪವನ್ನು ನಿನಗೆ ತಿಳಿಸಬಲ್ಲೆನು. ಏಕೆಂದರೆ, ಆ ಪರತತ್ತ್ವದ, ಪರಬ್ರಹ್ಮದ ಜೊತೆಯಲ್ಲಿ ಸದಾ ಇರುವ ಶಕ್ತಿಸ್ವರೂಪಿಣಿ ಶಿವೆಯೇ ನಾನು. ಮಗು, ನೀನು ಕಂಡ ಆ ಯಕ್ಷನು ನಿಜವಾಗಿಯೂ ಬ್ರಹ್ಮಸ್ವರೂಪನು. ಸಕಲ ಚರಾಚರಗಳಲ್ಲಿಯೂ ನೆಲೆಸಿರುವ ಚೈತನ್ಯರೂಪನೇ ಅವನು. ಅವನೇ ಎಲ್ಲದಕ್ಕೂ ಆಧಾರನು; ಎಲ್ಲದರ ಆಶ್ರಯನು. ಎಲ್ಲ ಜೀವಿಗಳಲ್ಲಿ ಓತಪ್ರೋತವಾದ ಮಹಾನ್ ತತ್ತ್ವವೇ ಅವನು.

ಇಂದ್ರ: ತಾಯೇ, ಎಂಥ ಪ್ರಮಾದವಾಗಿಬಿಟ್ಟಿತು. ಅರಿಯದೇ ನಾನು ಮತ್ತು ನನ್ನ ಸಹವರ್ತಿ ದೇವತೆಗಳೂ ಅಪಚಾರವನ್ನು ಮಾಡಿಬಿಟ್ಟೆವು. ಪರತತ್ತ್ವವೇ ನಮ್ಮ ಮುಂದೆ ಗುಪ್ತರೂಪದಲ್ಲಿ ಕಾಣಿಸಿಕೊಂಡರೂ ಅಹಂಕಾರದಲ್ಲಿ ಮೆರೆಯುತ್ತಿದ್ದ ನಾವು ಆತನ ಸ್ವರೂಪವನ್ನು ಅರಿಯಲಾರದೆ ಹೋದೆವು. ತಪ್ಪಾಯಿತು, ಅಮ್ಮಾ. ಧಿಕ್ಕಾರವಿರಲಿ ನಮ್ಮ ಅಹಂಕಾರಕ್ಕೆ!

ಉಮೆ: ಮಗೂ, ಈಗಲಾದರೂ ತಿಳಿದುಕೋ, ಈ ಗಹನ ಸತ್ಯವನ್ನು, ದಾನವರೊಡಗಿನ ನಿಮ್ಮ ಜಯವು ನಿಮ್ಮ ಜಯವಲ್ಲ. ಆ ಪರಮಾತ್ಮನ ಜಯವು. ನಿಮ್ಮೆಲ್ಲ ಶಕ್ತಿ, ಸಾಮರ್ಥ್ಯಗಳು ನಿಜವಾಗಿಯೂ ನಿಮ್ಮದಲ್ಲ, ಆ ಪರಮಾತ್ಮನದು. ನಿಜವಾಗಿ ನೋಡಿದರೆ, ನೀನು, ನಾನು, ಈ ಸಕಲ ಜಗತ್ತು – ಎಲ್ಲವೂ ಅವನ ರೂಪವೇ; ಅವನ ಕಾಣ್ಕೆಯೇ. ಎಲ್ಲವನ್ನೂ ಮೀರಿದ ಅವನು, ಎಲ್ಲದಕ್ಕೂ ಕಾರಣನು. ಅವನನ್ನು ನಿನ್ನಲ್ಲಿಯೇ ನೀನು ಕಂಡುಕೊಳ್ಳಬೇಕು. ನಿನ್ನ ಆತ್ಮವೇ ಅವನೆಂದು ನೀನು ಅನುಭವಿಸಬೇಕು. ಇದೇ ವಿದ್ಯೆ, ಪರಮ ವಿದ್ಯೆ, ಪರಮಾತ್ಮ ವಿದ್ಯೆ, ಬ್ರಹ್ಮವಿದ್ಯೆ!

(ಉಮೆಯು ಕಣ್ಮರೆಯಾಗುವಳು. ಈ ಹೊತ್ತಿಗೆ ದೇವತೆಗಳೂ ಅಲ್ಲಿ ಬಂದು, ಬಾಗಿ ನಿಲ್ಲುವರು. ಎಲ್ಲರೂ ಕಣ್ಣುಮುಚ್ಚಿ ಪ್ರಾರ್ಥಿಸುವರು)

(ಹಿನ್ನೆಲೆಯಲ್ಲಿ 'ಆಪ್ಯಾಯಂತು ಮಮಾಂಗಾನಿ' ಮಂತ್ರದ ನಿನಾದವು ಮೊಳಗುವುದು. ಜ್ಯೋತಿಯ ಬೆಳಕೊಂದು ಎಲ್ಲರನ್ನೂ ಆವರಿಸುವುದು. ಆ ತೇಜಃಪುಂಜವು ಓಂಕಾರದ ರೂಪವನ್ನು ತಳೆಯುವುದು. 'ಪೂರ್ಣಮದಃ ಪೂರ್ಣಮಿದಂ' ಮಂತ್ರವು ಕೇಳಿಸುವುದು. ತದನಂತರ ಕತ್ತಲಲ್ಲಿ ಓಂಕಾರ ನಾದವು ಎಲ್ಲವನ್ನೂ ಆವರಿಸಿಕೊಳ್ಳುವುದು. ಅದರಲ್ಲಿ ದೇವತೆಗಳು ಲೀನವಾಗಿ ಹೋಗುವರು.)



ಶಿಷ್ಯ : ಭಕ್ತಿ ಹೇಗೆ ಲಭಿಸುವುದು? ಒಂದು ವೇಳೆ ತನ್ನ ಮಗುವನ್ನೇ ಬೇರೆ ಯಾರಾದರೂ ಬೆಳೆಸಿದರೆ ಅದು ತನ್ನ ತಾಯಿಯನ್ನೇ 'ಅಮ್ಮಾ' ಎಂದು ಕರೆಯಲಾರದು.

ಶ್ರೀಮಾತೆ: ಹೌದು, ಆದ ಕಾರಣವೇ ಭಗವಂತನ ಕೃಪೆ ಅಗತ್ಯ. ಕೃಪೆಗಾಗಿ ಯೋಗ್ಯತೆ ಹೊಂದಿರುವುದು ಅಗತ್ಯ.

ಶಿಷ್ಯ : ಕೃಪೆ ಹೊಂದಲು ಪಾತ್ರರು, ಅಪಾತ್ರರು ಎಂದಿದೆಯೆ? ಎಲ್ಲರ ಮೇಲೂ ಕೃಪೆ ಸಮಾನವಾಗಿ ಉಂಟಾಗುವುದಿಲ್ಲವೆ?

ಶ್ರೀಮಾತೆ: ನದಿಯ ದಂಡೆಯ ಮೇಲೆ ಕುಳಿತು ಭಗವಂತನನ್ನು ಪ್ರಾರ್ಥಿಸಬೇಕು. ತಕ್ಕ ಸಮಯ ಬಂದಾಗ ಅವನು ನದಿಯನ್ನು ದಾಟಿಸುತ್ತಾನೆ.

ಶಿಷ್ಯ : ಸಮಯ ಬಂದಾಗ ಎಲ್ಲವೂ ಆಗುತ್ತದೆ; ಅದರಲ್ಲಿ ಅವನ ಕೃಪೆಯ ಅಗತ್ಯವೇನಿದೆ?

ಶ್ರೀಮಾತೆ: ಹಾಗಾದರೆ, ಮೀನು ಹಿಡಿಯಬೇಕಿದ್ದರೆ ಗಾಳವನ್ನೆಸೆದು ಕಾದು ಕುಳಿತುಕೊಳ್ಳಬೇಡವೆ?

ಶಿಷ್ಯ : ಭಗವಂತ ನಮ್ಮವನೇ ಆಗಿರುವಾಗ ಮತ್ತೆ ಕಾದು ಕುಳಿತುಕೊಳ್ಳುವುದೇಕೆ?

ಶ್ರೀಮಾತೆ: ಅದೇನೋ ಹೌದು. ಅದು ಅವೇಳೆಯಲ್ಲೂ ಸಾಧ್ಯ.

ಶಿಷ್ಯ : ಅಂದರೆ ನಮ್ಮ ಪ್ರಯತ್ನ ಎಲ್ಲಿಯವರೆಗೋ, ನಮ್ಮ ಯೋಗ್ಯತೆ ಎಷ್ಟೋ ಅದಕ್ಕನುಗುಣವಾಗಿ ಮಾತ್ರ ಭಗವಂತ ನಮ್ಮ ಬಯಕೆಯನ್ನು ಈಡೇರಿಸಿ ಹೋಗಿಬಿಡುತ್ತಾನೇನು? ಅಥವಾ ಇದಕ್ಕೆ ಹೊರತಾಗಿ ಅವನು ನಮ್ಮನ್ನು ತಮ್ಮವನೇ ಎಂದು ಭಾವಿಸಿ ಕೃಪೆ ಮಾಡುವನೆ? ಭಗವಂತ ನಮ್ಮವನೇ ಅಲ್ಲವೆ?


ಶ್ರೀಮಾತೆ: ಹೌದು, ಭಗವಂತ ನಮ್ಮವನೇ. ಇದು ಚಿರಕಾಲ ಸಂಬಂಧ. ಅವನು ಎಲ್ಲರಿಗೂ ಸೇರಿದವನೇ. ಭಾವನೆ ಎಂಥದೋ, ಅದರಂತೆ ಫಲ.

ಶ್ರೀಶಾರದಾದೇವಿ ವಚನವೇದದಿಂದ *(ಪು.೧೬೭-೬೮)*


ಶ್ರೀ ಜಯದೇವ (ಭಾಗ ೨)

ಕಥೆ : ಟಿ.ಎಂ. ಸುಂದರರಾಮನ್
ಚಿತ್ರ : ಶಂಕರ್

18 ರಾಜನು ಜಯದೇವನ 'ಗೀತಗೋವಿಂದ' ಕಾವ್ಯದ ವಾಚನಕ್ಕೆ ತಕ್ಕ ವೇದಿಕೆಯನ್ನು ಸಿದ್ಧಪಡಿಸಿದನು.




19 ಆ ವೃದ್ಧ ಓದಿದ ಕಾವ್ಯವು ಜಯದೇವನ 'ಗೀತ-ಗೋವಿಂದ'ದಂತೆಯೇ ಇತ್ತು. ಅದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಕೂಡಲೇ ಒಂದು ಅಶರೀರವಾಣಿ ಕೇಳಿಬಂತು.



ಆ ವೃದ್ಧ ಮಾಯವಾದ, ಅವನೇ ಶ್ರೀಕೃಷ್ಣನಾಗಿ ಅಲ್ಲಿ ನಿಂತ.


20 ಒಂದು ಸಲ ಜಯದೇವನು ಒಬ್ಬ ವ್ಯಾಪಾರಿಯ ಮನೆಯಲ್ಲಿ ತಂಗಿದ. ಮರಳಿ ಬರುವಾಗ ಆ ವ್ಯಾಪಾರಿಯು ಗಾಡಿ ತುಂಬ ಹಲವು ಉಡುಗೊರೆಗಳೊಂದಿಗೆ ತುಂಬಿದ. ದಾರಿ ಮಧ್ಯೆ ಕಾಡಿನಲ್ಲಿದ್ದ ದರೋಡೆಕೋರರು ಅದನ್ನೆಲ್ಲ ದೋಚಿದರು.

21




ಜಯದೇವನು ಕೈಗಳನ್ನು ಕಳೆದುಕೊಂಡು ಪಾಳುಬಾವಿಗೆ ಎಸೆಯಲ್ಪಟ್ಟರೂ, ಅವನು ಶ್ರೀಕೃಷ್ಣನ ಸ್ತುತಿ ಮಾಡತೊಡಗಿದ.


22
ಪ್ರಭೂ, ಗೋವಿಂದ! ನೀನೇ ನನ್ನ ಸರ್ವಸ್ವ! ಜಯ ಗೋವಿಂದ, ಗೋವಿಂದ! ವಾಸುದೇವ! ಕೃಷ್ಣ.. ಮುಕುಂದ! ಗೋಪಾಲ!
23
ಕೆಲವು ದಿನಗಳ ನಂತರ ರಾಜನಿಗೆ ಚಿಂತೆ ಮೂಡಿತು ...
ಜಯದೇವನೇಕೆ ಇನ್ನೂ ಮರಳಿ ಬರಲಿಲ್ಲ? ಅವನಿಗೇನೋ ಆಪತ್ತು ಉಂಟಾಗಿರಬಹುದು ಎನ್ನುವ ಸಂದೇಹ ನನಗೆ.
ಸ್ವತಃ ನಾವೇ ಹೋಗಿ ನೋಡೋಣ, ಮಹಾರಾಜ!
24
ರಾಜ ಹಾಗೂ ಮಂತ್ರಿಗಳು ಜಯದೇವನನ್ನು ಕಾಡಿನ ಪಾಳುಬಾವಿಯಿಂದ ಮೇಲೆತ್ತಿ ರಕ್ಷಿಸಿದರು. ಅವನನ್ನು ಮರಳಿ ಅರಮನೆಗೆ ಕರೆತಂದರು.
ಜಯದೇವ, ನಿನ್ನನ್ನು ಪಾಳುಬಾವಿಗೆ ಎಸೆದವರನ್ನು ಕಠಿಣ ಶಿಕ್ಷೆಗೆ ಗುರಿಮಾಡುತ್ತೇನೆ.
ಮಹಾರಾಜ, ಆದದ್ದೆಲ್ಲವೂ ಒಳ್ಳೆಯದಕ್ಕಾಗಿಯೇ ಆಗಿದೆ. ಹಿಂದೆ ಮಾಡಿದ ಕೆಟ್ಟಕರ್ಮಗಳ ಫಲವಾಗಿ ನಾನು ಈ ಎಲ್ಲ ತೊಂದರೆಗಳನ್ನು ಅನುಭವಿಸಿರಬೇಕು ಎಂದು ನನ್ನ ಭಾವನೆ.
25
ರಾಜನು ಪ್ರತಿ ವರ್ಷ ತನ್ನ ಆಸ್ಥಾನದಲ್ಲಿ ಕವಿಗಳಿಗೆ ಸನ್ಮಾನ ಮಾಡಿ ಉಡುಗೊರೆ ನೀಡುತ್ತಿದ್ದ. ಈ ವರ್ಷ ಜಯದೇವನನ್ನು ಹಿಂಸಿಸಿದ ದರೋಡೆಕೋರರೂ ವೇಷ ಮರೆಸಿಕೊಂಡು ರಾಜನ ಆಸ್ಥಾನಕ್ಕೆ ಬಂದರು. ಜಯದೇವನನ್ನು ಅಲ್ಲಿ ನೋಡಿ ಅವರು ಆಶ್ಚರ್ಯಗೊಂಡರು.
ಸ್ನೇಹಿತರೆ, ಬನ್ನಿ. ಯಾವುದೇ ಭಯವಿಲ್ಲದೆ ಉಡುಗೊರೆಗಳನ್ನು ಸ್ವೀಕರಿಸಿ. ರಾಜಭಟರು ನಿಮ್ಮನ್ನು ಸುರಕ್ಷಿತವಾಗಿ ರಾಜ್ಯದ ಗಡಿಯವರೆಗೂ ಕರೆದೊಯ್ಯುವರು.
ಗಡಿಪ್ರದೇಶದಲ್ಲಿ ದರೋಡೆಕೋರರು ತಮ್ಮನ್ನು ಉಳಿಸಿದ ಜಯದೇವನ ಬಗ್ಗೆ ಸ್ವಲ್ಪವೂ ಕೃತಜ್ಞತೆ ತೋರಿಸದೆ, ರಾಜಭಟರ ಮುಂದೆ ಆತನನ್ನು ತೆಗಳಿದರು.


26
ರಾಜನ ಆಸ್ಥಾನದಲ್ಲಿರುವ ಆ ಅಂಗವಿಕಲ ವ್ಯಕ್ತಿ ಒಬ್ಬ ನಯವಂಚಕ. ರಾಜನು ಅವನಿಗೆ ವಧೆ ಶಿಕ್ಷೆ ನೀಡಿದ್ದ, ಅವನನ್ನು ವಧಿಸಲು ನಮ್ಮನ್ನು ಕಳುಹಿಸಿದ್ದ.
ಹೌದೆ?
ಹೌದು. ಆದರೆ ನಾವು ಅವನನ್ನು ಕೊಲ್ಲದೆ, ಬರೀ ಕೈಕಾಲು ಕತ್ತರಿಸಿಬಿಟ್ಟೆವು, ಅಷ್ಟೆ.
27
ಭೂದೇವಿ ಜಯದೇವನಿಗೆ ವಿರುದ್ಧವಾಗಿ ಮಾಡಿದ ಆರೋಪಗಳನ್ನು ಸಹಿಸಲಾಗದೆ ಒಂದೇ ಬಾರಿಗೆ ಬಾಯಿ ತೆರೆದು ಆ ದರೋಡೆಕೋರರನ್ನು ನುಂಗಿಬಿಟ್ಟಳು.
ರಾಜಭಟರು ಈ ಕಥೆಯನ್ನೆಲ್ಲ ರಾಜನಿಗೆ ತಿಳಿಸಿದರು. ಜಯದೇವನು ದರೋಡೆಕೋರರಿಗೋಸ್ಕರ ದೇವರಿಗೆ ಪ್ರಾರ್ಥನೆ ಸಲ್ಲಿಸಿದನು. ಆ ಕೂಡಲೇ ಅರಮನೆಯಲ್ಲಿ ಭಗವಂತನ ವಾಣಿ ಕೇಳಿಬಂತು.
28
ಜಯದೇವ, ನೀನು ಆ ಅಪರಾಧಿಗಳಿಗೋಸ್ಕರ ಸಲ್ಲಿಸಿದ ಪ್ರಾರ್ಥನೆಯನ್ನು ನಾನು ಕೇಳಿಸಿಕೊಂಡೆ. ಮುಂದಿನ ಜನ್ಮದಲ್ಲಿ ಅವರು ಉತ್ತಮ ವ್ಯಕ್ತಿಗಳಾಗಿ ಜನಿಸುವರು. ನಿನ್ನ ಕತ್ತರಿಸಲ್ಪಟ್ಟ ಅಂಗಗಳು ಸರಿಯಾಗುವವು.
ದೇವರು ತಾನಾಗಿಯೇ ಜಯದೇವನನ್ನು ಕಾಪಾಡಿದನೆಂದು ಎಲ್ಲರಿಗೂ ಗೊತ್ತಾಯಿತು.
29
ಪುರೀಕ್ಷೇತ್ರದ ಜಗನ್ನಾಥ ದೇವಾಲಯದಲ್ಲಿ ಅರ್ಚಕನು ಶ್ರೀಕೃಷ್ಣನ ವಿಗ್ರಹದ ಪೀತಾಂಬರವನ್ನು ಬದಲಾಯಿಸಲು ಹೋದಾಗ...
ಅಯ್ಯೋ!.. ಶ್ರೀಕೃಷ್ಣನ ಪೀತಾಂಬರವೆಲ್ಲ ಹಲವು ಕಡೆ ಹರಿದುಹೋಗಿದೆ! ಇಂಥ ಪಾಪ ಕಾರ್ಯವನ್ನು ಯಾರು ಮಾಡಿರಬಹುದು?
ಅರ್ಚಕನು ರಾಜನ ಬಳಿಗೆ ಧಾವಿಸಿ, ಅವನಿಗೆ ಎಲ್ಲವನ್ನೂ ತಿಳಿಸಿದ.
30
ರಾಜನು ಈ ಬಗ್ಗೆ ವಿಚಾರಣೆ ಮಾಡುತ್ತಿದ್ದಾಗ ದೈವವಾಣಿ ಕೇಳಿಬಂತು.
ಎಲೈ ರಾಜನೆ, ಒಬ್ಬಾಕೆ ಮಹಿಳೆ ಕಾಡಿನಲ್ಲಿ ಕಟ್ಟಿಗೆ ಆರಿಸುತ್ತಿದ್ದಾಗ 'ಗೀತಗೋವಿಂದ' ಕಾವ್ಯವನ್ನು ಹಾಡುತ್ತಿದ್ದಳು. ಅವಳ ಹಾಡಿಗೆ ಮನಸೋತ ನಾನು ಅವಳನ್ನೇ ಎಲ್ಲೆಡೆ ಹಿಂಬಾಲಿಸಿದೆ. ಆದ್ದರಿಂದ ನನ್ನ ಪೀತಾಂಬರವೆಲ್ಲ ಹರಿದುಹೋಗಿದೆ.
ಭಗವಾನ್ ಶ್ರೀಕೃಷ್ಣನೇ ಈ ರೀತಿ ಮಾತಾಡಿದ್ದೆಂದು ಎಲ್ಲರಿಗೂ ತಿಳಿಯಿತು.



32 ಕೂಡಲೇ ಗಂಗಾಮಾತೆ ಎಲ್ಲರ ಮುಂದೆ ಹಸ್ತಪ್ರತಿಯೊಂದಿಗೆ ಪ್ರತ್ಯಕ್ಷಳಾದಳು.



ಜಯದೇವನು ಈ ಮಾತನ್ನು ಹೇಳುತ್ತಿರುವಾಗಲೇ ಒಂದು ಅದ್ಭುತ ನಡೆದುಹೋಯಿತು.

33

ಅಲ್ಲಿನ ಪಂಡಿತರೆಲ್ಲ ತಮ್ಮ ನಿಜವೇಷವನ್ನು ಧರಿಸಿ ಶಿವ, ಪಾರ್ವತಿಯರಾಗಿ ನಿಂತರು. 'ಗೀತಗೋವಿಂದ' ಕಾವ್ಯದಿಂದ ರಾಧಾ-ಕೃಷ್ಣರು ಆವಿರ್ಭವಿಸಿದರು. ಅಲ್ಲಿ ನೆರೆದಿದ್ದ ಭಕ್ತರೆಲ್ಲ ಧನ್ಯರಾದರು.





ಸಾಧಕನ ಶಕ್ತಿ ಇರುವುದೆಲ್ಲಿ? ಅವನು ದೇವರ ಮಗು, ಕಂಬನಿಯೇ ಅವನ ಪರಮ ಶಕ್ತಿ . ಅತ್ತು ಬೇಡುವ ಮಗುವಿನ ಆಸೆಗಳನ್ನು ತಾಯಿ ತೃಪ್ತಿಪಡಿಸುವಂತೆ, ಭಗವಂತನು ಯಾವುದಕ್ಕಾಗಿ ತನ್ನ ಭಕ್ತನು ಅಳುತ್ತಿರುವನೋ ಅದನ್ನು ಈಡೇರಿಸುವನು.

— ಶ್ರೀರಾಮಕೃಷ್ಣರು







ಸುದ್ದಿ ಸಂಚಯ

ಚಂಡೀಗಢ ಆಶ್ರಮದಲ್ಲಿ ಹೊಸ ಧ್ಯಾನಮಂದಿರದ ಲೋಕಾರ್ಪಣೆ

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 2018ರ ಸೆಪ್ಟೆಂಬರ್ 7 ರಿಂದ 9 ರ ವರೆಗೆ **ವಜ್ರಮಹೋತ್ಸವವನ್ನು** ಆಚರಿಸಿತು. ಇದರ ಅಂಗವಾಗಿ ಹೊಸದಾಗಿ ನಿರ್ಮಿಸಲಾದ **ಧ್ಯಾನಮಂದಿರವು** ಲೋಕಾರ್ಪಣೆಗೊಂಡಿತು. ವಿವಿಧ ಕಾರ್ಯಕ್ರಮಗಳೊಂದಿಗೆ ನಡೆದ ಈ ಮಹೋತ್ಸವದಲ್ಲಿ ಅನೇಕ ಮಂದಿ ಗಣ್ಯರು, ಮಿಷನ್ನಿನ ಸಂನ್ಯಾಸಿಗಳು, ಭಕ್ತರು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

ಸೆಪ್ಟೆಂಬರ್ 7, 2018 : ಈ ದಿನ ನಡೆದ ಕಾರ್ಯಕ್ರಮದಲ್ಲಿ ತ್ರಿಪುರಾ ರಾಜ್ಯದ ರಾಜ್ಯಪಾಲರಾದ ಪ್ರೊ. ಕಪ್ತಾನ್‌ಸಿಂಗ್ ಸೋಲಂಕಿಯವರು ಭಾಗವಹಿಸಿದರು. **ಸ್ವಾಮಿ ವಿವೇಕಾನಂದ ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಯೂಥ್** ಎಂಬ ಚಟುವಟಿಕೆಗಾಗಿ ನಿರ್ಮಿಸಲಾದ **ಇನ್ಫೋಸಿಸ್ ಬಹೂಪಯೋಗಿ ಸಭಾಂಗಣವನ್ನು** ಅವರು ಉದ್ಘಾಟಿಸಿದರು. ವಜ್ರಮಹೋತ್ಸವದ **ಸ್ಮರಣ ಸಂಚಿಕೆಯನ್ನೂ** ಅವರು ಬಿಡುಗಡೆ ಮಾಡಿದರು. ಸುಮಾರು 130 ಮಂದಿ ಸಂನ್ಯಾಸಿ-ಬ್ರಹ್ಮಚಾರಿಗಳು ಹಾಗೂ 2000 ಮಂದಿ ಭಕ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಕೂಡ ಸಾಧು - ಭಕ್ತವೃಂದವನ್ನು ಉದ್ದೇಶಿಸಿ ಮಾತನಾಡಿದರು.



ಸ್ವಾಮಿ ಲೋಕೋತ್ತರಾನಂದಜಿಯವರು **'ಮಾ ಶಾರದಾದೇವಿ ಸಾಧು ನಿವಾಸ'**ವನ್ನು ಉದ್ಘಾಟಿಸಿದರು. ಹಿರಿಯ ಸಾಧುಗಳಾದ ಸ್ವಾಮಿ ಪೀತಾಂಬರನಂದಜಿ, ಸ್ವಾಮಿ ರಾಜೇಶ್ವರಾನಂದಜಿ ಹಾಗೂ ಇತರರು ಉಪಸ್ಥಿತರಿದ್ದರು. ಸಾಯಂಕಾಲ ಶ್ರೀಮತಿ ವಿನೀತಾ ಗುಪ್ತಾ ಅವರು ಹೃದಯಂಗಮವಾಗಿ ಭಜನೆಗಳನ್ನೂ ಹಾಡಿದರು.

ಸೆಪ್ಟೆಂಬರ್ 8, 2018: ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು **'ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಧ್ಯಾನಮಂದಿರ'**ವನ್ನು ಸಂನ್ಯಾಸಿಗಳು, ಬ್ರಹ್ಮಚಾರಿಗಳು ಹಾಗೂ ಭಕ್ತರ ಉಪಸ್ಥಿತಿಯಲ್ಲಿ ಲೋಕಾರ್ಪಣೆ ಮಾಡಿದರು. ಸ್ವಾಮಿ ದಿವ್ಯಾನಂದಜಿ, ಸ್ವಾಮಿ ವಿಮಲಾತ್ಮಾನಂದಜಿ, ಸ್ವಾಮಿ ಸರ್ವಭೂತಾನಂದಜಿ, ಸ್ವಾಮಿ ಜ್ಞಾನಲೋಕಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ಪೀತಾಂಬರನಂದಜಿ, ಸ್ವಾಮಿ ಆತ್ಮಪ್ರಿಯಾನಂದಜಿ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು. ಬೀಬಿ ರಾಜ್ವಿಂದರ್ ಕೌರ್ ಅವರು **'ಭಜನ್ ಸಂಧ್ಯಾ'** ನಡೆಸಿಕೊಟ್ಟರು.

ಸೆಪ್ಟೆಂಬರ್ 9, 2018: ಸ್ವಾಮಿ ಶಾಂತಾತ್ಮಾನಂದಜಿಯವರು ದುರ್ಗಾಸಪ್ತಶತೀ ಹೋಮವನ್ನು ನಡೆಸಿಕೊಟ್ಟರು.

ಸೆಪ್ಟೆಂಬರ್ 11, 2018: ಸ್ವಾಮಿ ವಿವೇಕಾನಂದರ ಜಗದ್ವಿಖ್ಯಾತ ಚಿಕಾಗೋ ಉಪನ್ಯಾಸಗಳ 125ನೇ ವಾರ್ಷಿಕೋತ್ಸವವನ್ನು ಆಶ್ರಮದಲ್ಲಿ ಆಚರಿಸಲಾಯಿತು. ಸುಮಾರು 200 ಮಂದಿ ಶಾಲಾಕಾಲೇಜು ವಿದ್ಯಾರ್ಥಿಗಳು ವಿವಿಧ ಹಾಡು, ಭಾಷಣವೇ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತ 2-ಡಿ ಅನಿಮೇಷನ್ ಚಿತ್ರವನ್ನು ಪ್ರದರ್ಶಿಸಲಾಯಿತು. ಚಂಡೀಗಢ ಕೇಂದ್ರಾಡಳಿತ ಪ್ರದೇಶದ ಡಿಜಿಪಿ ಶ್ರೀ ಸಂಜಯ್ ಬನಿವಾಲ್(ಐಪಿಎಸ್) ಹಾಗೂ ಪಂಜಾಬಿನ ಡಿಜಿಪಿ ಶ್ರೀ ಸಿದ್ಧಾರ್ಥ ಚಟ್ಟೋಪಾಧ್ಯಾಯ ಅವರು ಪ್ರೇರಣಾತ್ಮಕ ಭಾಷಣ ಮಾಡಿದರು. ಸ್ವಾಮಿ ಆತ್ಮಶ್ರದ್ಧಾನಂದಜಿ ಹಾಗೂ ಸ್ವಾಮಿ ತೇಜೋಮಯಾನಂದಜಿಯವರು ಪ್ರಧಾನ ಭಾಷಣ ಮಾಡಿದರು.



Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್


Orchid Travel & Tours

www.orchidtours.net




Shopping Festival Special-2019

DUBAI SHOPPING FESTIVAL 2019



Attractions included in your package cost:

- Bangalore to Dubai direct flight by Emirates.
- Dhow Cruise with Buffet Dinner at the Dubai Creek.
- Desert Safari Tour with BBQ Dinner, Belly Dance Show, Tanoora Show and other activities like Camel ride, Durt bike ride etc.
- Half Day panoramic City Tour of Dubai.
- World famous and tallest building Burj Khalifa 124th floor with Entrance tickets.
- Enjoy old Dubai & new Dubai from Dubai Frame.
- Jumeirah Beach with Atlantis the Palm Photo Shop.
- Monorail Ride at Dubai for the spectacular view of Atlantis the Palm.
- Abu Dhabi City Tour with Grand Mosque.
- Visit world famous Grand Mosque, Ferrari Showroom & Empire Palace.
- Visit different shopping center in DUBAI (Gold Souq and Dubai Mall).
- Sharjah city tour, Pearl of the Gulf.
- Miracle Garden Tour (Enjoy the wonderful flower garden in the desert).
- World Famous Global Village.





Singapore Malaysia Thailand 11 Days

HIGHLIGHTS OF THE TOUR

- **SINGAPORE -** Singapore City Tour, Wings of Time, Sentosa Island, Jurong Bird Park, world famous Universal Studio, Night Safari Singapore, SEA Aquarium, Cable Car ride from Mt. Faber to Sentosa, Merlion park Singapore, Shopping at Little India.
- **KUALA LUMPUR -** Kuala Lumpur City Tour, Oldest limestone cave in Malaysia Batu Caves and popular Murgan temple, Petronas Towers (Twin tower) Enjoy the cable car at Genting Highland, World famous Genting Highland Casino, Tallest tower in Malaysia, K L Tower including entry ticket, Time square visit for shopping, Chocolate factory.
- **BANGKOK -** Bangkok City tour (Wat-Pho), Golden Buddha Temple, Safari Park at Safari World, Marine Park Enjoy the Different Shows Like Orangutan Show, Dolphin Show, Sea Lion Show, Hollywood Cowboy Stunt show, Spy war show including lunch inside the park, Evening Shopping at Indra Market.
- **PATTAYA -** Alcazar Show, Coral Island Tour in speed boat (option to enjoy the different water adventure sports), Enjoy the Noongnooch Tropical Garden inside the garden, Thai Cultural Show, Great Elephant Show, Chance to take photo with Tiger and Many more, Walkers Street, Central Shopping Mall etc.








For more details please Contact :

Orchid Travel & Tours
BASAVANAGUDI
#98, 1st Floor, DVG Road
Office 080-26621983, 26617178
Mobile +91 9900080793 / 9880079588

Orchid Travel & Tours
MALLESHWARAM
198, 1st Floor, 11th Cross
Office 080 - 23445598, 23445559
Mobile +91 9900080791 / 9880079644

VIVEKA PRABHA (KANNADA MONTHLY)
Noveber 2018, Vol.19, No.11, No.of pages : 44

Registered With Registrar of News Papers Of India
under 72356/2000.postal Regn.No.KA/SK/MYS/480/
2018-20. LICENCED TO POST W.P.P.AT YADAVAGIRI
MYSORE 570 020,VIDE LICENCE NO.SK/WPP/MYS/155/2018-20



Printed at mayur graphics,Bangalore